ॐ

ಜ್ಞಾನ ಗಂಗಾಧರ

ತತ್ತ್ವ (ಗಂಗಾಧರ) ಚಿಂತಾಮಣಿ

ತತ್ತ್ವ ವಿಚಾರಧಾರೆ

ॐ

ಗಂಗಾ ಗಾಂಗೇಯಕ ಗಾಯತ್ರೀ ಗೀತಾ ಗೋವಿಂದ ಪದಜಾ
ಏತೇ ಪಂಚ ಮಹಾಪುಣ್ಯಾಃ ಸೇವ್ಯಂತೇ ಮೋಕ್ಷಕಾಂಕ್ಷಿಭಿಃ॥

ಕಥಂ ಬಂಧಃ? ಕಥಂ ಮೋಕ್ಷಃ?
ಕಾ ವಿದ್ಯಾ ? ಕಾ ಅವಿದ್ಯಾ?

ಜ್ಞಾನಗಂಗಾಧರ.
ತತ್ತ್ವಚಿಂತಾಮಣಿ.
ಪರಮಾರ್ಥವಿಚಾರಧಾರೆ.

ॐ नमो वासुदेवाय तस्मै भगवते सम सदा।
व्यतिरिक्तं न यस्यास्ति व्यतिरिक्तोऽखिलस्य यः॥
वि-पु १-१९-७८

॥ ಓಂ ಹಂಹರಾತ್ಮನೇ ಶ್ರೀ ಭಗವತೇ ನಮಃ ॥

ದೇವನಿರುವುದು ನಿಜ-ಸತ್ಯ.

ದೇವರು ಇದ್ದಾನೆಯೋ ಇಲ್ಲವೋ ಎಂದು ಏಕೆ ಸಂದೇಹ ಪಡಬೇಕು? ಆ ದೇವನೇ ಮನುಷ್ಯಾದಿ ಸಕಲ ಪ್ರಾಣಿಗಳ ಜೀವಚೈತನ್ಯನಾಗಿದ್ದಾನೆ. ಅವನೇ ಆತ್ಮನು, ಪರಮಾತ್ಮನು, ದೇವರು, ಆಗಿರುತ್ತಾನೆಂದೂ ಸಕಲವನ್ನು ಅರಿಯುವ ಆ ದೇವನಲ್ಲದೇ ಬೇರೆ ಚೈತನ್ಯವಸ್ತುವೇ ಇರುವುದಿಲ್ಲೆಂದೂ ಆಪ್ತರಾದ ಸದ್ಗುರುಗಳು ಮತ್ತು ಶಾಸ್ತ್ರಗಳು ತಿಳಿಸಿಕೊಡುತ್ತಿರುವರು. ಇಂತಹ ಹಿತನುಡಿಯನ್ನು ನಂಬದವರು ಆತ್ಮವಂಚಕರು ಸಮಾಜದ್ರೋಹಿಗಳು ಎಂದೇ ಭಾವಿಸಬಹುದು. ಈ ಜೀವಾತ್ಮನು ಪ್ರತ್ಯಕ್ಷ-ಸಾಕ್ಷಿದೇವರೇ ಆಗಿರುತ್ತಿದ್ದರೂ ಸುಲಭವಾಗಿ ಎಲ್ಲರಿಗೂ ತಿಳಿಯುವುದಿಲ್ಲ. ಸಿಕ್ಕುವುದಿಲ್ಲ. ತೋರುವುದಿಲ್ಲ. ಕಾರಣವೇನೆಂದರೆ - ಮನುಷ್ಯರು ಬುದ್ಧಿ ಮನಸ್ಸು ಎಂಬ ಪ್ರಮಾಣದಿಂದ ಅವನನ್ನು ತಿಳಿಯಲು ಯತ್ನಿಸುತ್ತಾರೆ. ಆದರೆ ಅವನು ಅತೀಂದ್ರಿಯನು, ಮನೋಬುದ್ಧಿಗಳಿಗೆ ನಿಲುಕುವುದಿಲ್ಲ. ಮತ್ತು ಬುದ್ಧಿ ಮನಸ್ಸುಗಳು ಹೊರಗಿನ ವಸ್ತುಗಳನ್ನು ಅರಿಯುವುವೇ ಹೊರತು ತಮ್ಮ ಹಿನ್ನೆಲೆಯಾಗಿ ಇರುವ ಮತ್ತು ತಮಗೆ ಚೈತನ್ಯವನ್ನೀಯುತ್ತಿರುವ ಸಾಕ್ಷಿಮಾತ್ರನಾದ ಅಂತರಾತ್ಮನನ್ನು ಕಂಡುಹಿಡಿಯಲಾರವು. ಹೇಗೆಂದರೆ ಮನುಷ್ಯನು ತನ್ನ ಬೆನ್ನನ್ನು ಅಥವಾ ಹಣೆಯ ತಿಲಕವನ್ನು ತನ್ನ ಕಣ್ಣನ್ನು ಸಹ ನೋಡಲಾಗುವುದಿಲ್ಲ. ಅಲ್ಲವೇ? ಕನ್ನಡಿಯಲ್ಲಿ ನೋಡಿ ತಿಳಿಯಬಹುದೆಂದು ವಾದಿಸಿದರೂ ಅದೂ ಬೇರೆ ರೀತಿಯಿಂದಲೇ ತಿಳಿದಿದ್ದೆಂತಾಗುವುದು. ಆದ್ದರಿಂದ ಅಂತರಾತ್ಮನನ್ನು ಅರಿತುಕೊಳ್ಳಬೇಕೆಂದಿರುವವರು ಸದ್ಗುರುಗಳನ್ನು ಆಶ್ರಯಿಸಿ ಅವರ ಸದುಪದೇಶ ಶ್ರವಣ ಮಾಡಬೇಕು.

ಮನುಷ್ಯನು ಇದ್ದೇ ಇರುತ್ತಾನಲ್ಲವೇ? ಈ ನರಮನುಷ್ಯನು ತನ್ನ ನಿಜ ಆತ್ಮಸ್ವರೂಪವನ್ನು ತಿಳಿದುಕೊಂಡಿರುವುದಿಲ್ಲ. ತನ್ನನ್ನೇ ಮರೆತುಕೊಂಡು ಬಾಹ್ಯವ್ಯವಹಾರದಲ್ಲಿ ತತ್ಪರನಾಗಿರುವುದು ಸ್ವಾಭಾವಿಕವಾಗಿದೆ. ಅಲ್ಲವೇ? ಆಗ ಅವನು ಕರ್ಮಕರ್ತೃ, ಸುಖದುಃಖ ಭೋಕ್ತೃ ಆಗಿರುತ್ತಾನೆ. ಹಾಗೂ ಪ್ರೇಕ್ಷಕ-ಪ್ರಮಾತೃ ಆಗಿರುತ್ತಾನೆ. ಅಂದರೆ ಮನ ಆದಿ ಇಂದ್ರಿಯ ಪ್ರಮಾಣ ಮೂಲಕವಾಗಿ ತನ್ನ ಮುಂದೆ ಇರುವಂತಹ ವಸ್ತುಗಳನ್ನು ನೋಡಿಕೊಳ್ಳುವ

जीवः = धर्माधर्मादिभिः प्रतिबद्धज्ञानशक्तिमान् ॥
ईश्वरः = नित्यशुद्धबुद्धमुक्तस्वभावत्वात् अनावरणशक्तिमान् ॥

ಸ್ವಭಾವವುಳ್ಳವನಾಗಿರುತ್ತಾನೆ. ಹೀಗೆ ಜೀವನಾದರೂ ಬಹಿರ್ಮುಖನಾಗಿರುವುದರಿಂದಲೇ ತನ್ನ ನಿಜಸ್ವರೂಪವನ್ನು ಮರೆತುಕೊಂಡಿರುವುದರಿಂದಲೇ ಅವನ ನಿಜ ಆತ್ಮನು ನಿತ್ಯ ಸತ್ಯವಾಗಿ ಇರುತ್ತಿದ್ದರೂ ಅವನಿಗೆ ದೂರ - ಪರೋಕ್ಷ ಎಂದಾಗಿರುವನು, ಎಂದಾಗಲೇ ಅವನ ಆ ಆತ್ಮನೇ ಅವನಿಗೆ ಈಶ್ವರ ಎಂದಾಗಿರುವನು. ಆ ಈಶ್ವರನೇ ಕಾಲಪುರುಷನಾಗಿರುತ್ತಾನೆ. ಅವನೇ ಮನುಷ್ಯನಿಗೆ ಕರ್ಮಫಲ ಕೊಡುವ ದೇವರಾಗಿದ್ದ ಮೃತ್ಯುದೇವತೆಯೂ ಆಗಿರುತ್ತಾನೆ. ಆ ಈಶ್ವರನೇ ಸಂಸಾರೀ ನರಮನುಷ್ಯರಿಗೆ ಕರ್ಮಫಲ ಕೊಡುವ ಪ್ರಭುವು. ಹೀಗೆ ಕಾಲಕರ್ಮಗಳಿರುವುದರಿಂದ ಆತ್ಮನನ್ನರಿಯದ ಮನುಷ್ಯನಿಗೆ ಪದೇ ಪದೇ ಅವನವನ ಕರ್ಮಫಲವಾಗಿ ಸುಖ ದುಃಖಗಳು ಬರುವುವು. ಪುನಃ ಪುನಃ ಜನ್ಮ ಮರಣ ಪ್ರಸಂಗವು ಬರುವುದು ತಪ್ಪುವುದಿಲ್ಲ. ಇದೇ ಸಂಸಾರಬಂಧನ.

ಅಂತಲ್ಲದೇ ಮನುಷ್ಯನು ತನ್ನನ್ನು ಮರೆಯದೇ ನಿಜಾತ್ಮನನ್ನು ಸ್ಮರಣೆಯಲ್ಲಿಟ್ಟುಕೊಂಡು ಆತ್ಮಸ್ವರೂಪವನ್ನು ಸ್ವಭಾವವನ್ನು ವಿಚಾರ. ವಿಮರ್ಶೆ. ವಿವೇಕಪೂರ್ವಕವಾಗಿ ತಿಳಿದುಕೊಂಡರೆ ಆಗ ಅವನಿಗೇ ತನ್ನ ನಿಜಸ್ವರೂಪದ ಅರಿವಾಗುವುದು. ಅಂದರೆ ಆತ್ಮಜ್ಞಾನರೂಪದ ಬ್ರಹ್ಮಜ್ಞಾನವೇ ಆಗುವುದು. ಆದಾಗ ಆವರೆಗೆ ಅವನಿಗೆ ದೂರ- ಪರೋಕ್ಷ ಎಂದಾಗಿದ್ದ, ಕಾಲರೂಪ, ಮೃತ್ಯುರೂಪ ಎಂದಾಗಿದ್ದ ಈಶ್ವರನೇ ತನ್ನ ನಿಜ ಆತ್ಮನು, ಆತ್ಮನೇ ಈಶ್ವರನಾಗಿದ್ದವನು ಎಂದೂ ಗೊತ್ತಾಗುವುದು. ಮತ್ತು ತನಗೆ ತಾನೇ ಅತ್ಯಂತ ಹತ್ತಿರವಾಗಿರುವುದರಿಂದ ಆ ಜ್ಞಾನಿಗೆ ಬ್ರಹ್ಮಾತ್ಮನು ಅಪರೋಕ್ಷ-ವಾಗಿ ಸಿಕ್ಕುವನು. ಅಂದರೆ ನಾನೇ ಬ್ರಹ್ಮನು ಎಂಬ ಅನುಭವಸಿದ್ಧಿಯೂ ಆಗುವುದು.

ಆತ್ಮನು ಚೇತನನಿರುತ್ತಾನೆ. ಚೇತನ ಅಂದರೆ ಚೈತನ್ಯಮಯ ಎಂದರ್ಥ. ಚೈತನ್ಯವು ವಸ್ತುಗ-ಳನ್ನು ಅರಿಯುವುದರಿಂದ ಜ್ಞಾನ ಎನ್ನುವುದಾಗಿದೆ. ಅದೇ ಜಡಪದಾರ್ಥಗಳನ್ನು ಬೆಳಗಿ ಪ್ರಕಟಗೊಳಿಸುವುದಾದ್ದರಿಂದ ಪ್ರಕಾಶರೂಪವು ಆಗಿರುತ್ತದೆ. ಆದರೆ ಈ ಪ್ರಕಾಶವು ಭೌತಿಕವಾ-ದುದಲ್ಲ. ಅಭೌತಿಕ= ದಿವ್ಯ ಜ್ಯೋತಿಯಾಗಿರುತ್ತದೆ. ಆದ್ದರಿಂದಲೇ ಈ ಜ್ಞಾನಜ್ಯೋತಿಯು ಕತ್ತಲೆಯನ್ನು ಹೋಗಿಸುವುದಲ್ಲದೇ ಮನುಷ್ಯನ ಮನೋಬುದ್ಧಿಗಳಲ್ಲಿ ನಾನು ನಾನು ಎಂದು ಪ್ರಕಾಶಿಸುತ್ತದೆ. ಆತ್ಮನ ಸ್ವರೂಪವೇ ಆಗಿರುವ ಈ ಜ್ಞಾನವು ಕೇವಲ ಮನೋವೃತ್ತಿರೂಪವಾದುದಲ್ಲ. ದಿವ್ಯಜ್ಯೋತಿಯಾಗಿರುತ್ತದೆ.

ಶಬ್ದವನ್ನು ಕಿವಿಯಿಂದ ಕೇಳಿ ಅದರ ಅರ್ಥವನ್ನು ಕಂಡುಕೊಳ್ಳುವುದು (ತಿಳಿಯುವುದು) ಬೆಳಕಿನಿಂದ ಇತರ ವಿಶ್ವವನ್ನು ಕಾಣುವುದು. ಕನಸನ್ನು, ಕತ್ತಲೆಯನ್ನು ನೋಡುವುದು, ಅವಿದ್ಯೆಯನ್ನು ಅರಿಯುವುದು. ಇವೆಲ್ಲವು ಭೌತಿಕ ಬೆಳಕಿನಿಂದ ಸಾಧ್ಯವಿಲ್ಲ. ಈ ಅನುಭವಗಳೆಲ್ಲವು ಅಂತರ್ಜ್ಯೋತಿ - ಪ್ರಕಾಶದಿಂದಲೇ ಶಕ್ಯವಾಗುವುದು.

---

1. ಸೃಷ್ಟಿಕರ್ತನಾದ ಈಶ್ವರನು ಶುದ್ಧ ಪರಮಾನಂದ ಬ್ರಹ್ಮನೇ ಎಂಬುದನ್ನು ಶ್ರುತಿ ಪ್ರಮಾಣದಿಂದಲೇ ತಿಳಿಯಬೇಕು.
2. ಮನುಷ್ಯನ ಪ್ರತ್ಯಗಾತ್ಮನು ಕೇವಲ ಸಚ್ಚಿದಾನಂದ ಎಂಬುದನ್ನು ಯುಕ್ತಿ-ವಿಚಾರ, ವಿವೇಕ, ಪ್ರಮಾಣದಿಂದ ಗೊತ್ತುಮಾಡಿಕೊಳ್ಳಬೇಕು.
3. ಬ್ರಹ್ಮ ಪ್ರತ್ಯಗಾತ್ಮೈಕ್ಯವನ್ನು ಸ್ವಾನುಭವದಿಂದ ಕಂಡುಕೊಳ್ಳಬೇಕು.

ಶ್ರುತಿ ಮತ್ತು ಯುಕ್ತಿ ಇವೆರಡೂ ಪ್ರಾಯಃ ಪರಿಣಾಮವಾದ ಪ್ರಕ್ರಿಯೆಯನ್ನು ಗ್ರಹಿಸಿಕೊಂಡು ಪರಮಾರ್ಥದ ದಿಗ್ದರ್ಶನ ಮಾಡುತ್ತವೆ. ಬ್ರಹ್ಮದ ವಿವರ್ತವನ್ನು ಅನುಭವದಿಂದಲೇ ಅರಿತುಕೊಳ್ಳಬೇಕು. ಹೀಗೆ ಶ್ರುತಿ ಯುಕ್ತಿ ಅನುಭವ ಈ ಮೂರು ಪ್ರಮಾಣಗಳನ್ನು ಉಪಯೋಗಿಸಿಕೊಂಡು ಮನನ ನಿದಿಧ್ಯಾಸನಗಳಿಂದ ಪರಮಾರ್ಥ ನಿಶ್ಚಯದಲ್ಲಿ ನೆಲೆಗೊಂಡಾಗ ಬ್ರಹ್ಮಾತ್ಮನು ಅಪ್ರಮೇಯ, ಅಪರೋಕ್ಷ,
ಮನವರಿಕೆಯಾಗುವುದು.
ನಿತ್ಯ ಶುದ್ಧ ಬುದ್ಧ ಮುಕ್ತಸ್ವಭಾವ ಎಂಬ ಅರ್ಥವು ಸಮನ್ವಿತವಾಗುವುದು.

ಭಗವನ್ಮಾಯೆಯು ನಾಮರೂಪ ಪ್ರಪಂಚಕ್ಕೆ ಕಾರಣವಾಗಿರುತ್ತದೆ.
ಆತ್ಮಸ್ವರೂಪಾಜ್ಞಾನವು ಸುಖದುಃಖವೇದನಾರೂಪ ಸಂಸಾರಕ್ಕೆ ಕಾರಣವಾಗಿರುತ್ತದೆ.
ಮಿಥ್ಯಾಜ್ಞಾನರೂಪದ ಅವಿದ್ಯೆಯು ಮನುಷ್ಯಾದಿ ಪ್ರಾಣಿಗಳ ಸಕಲವ್ಯವಹಾರಕ್ಕೂ ಕಾರಣವಾಗಿದೆ.

ಗಂಗಾ ಗಾವೋऽಥ ಗಾಯತ್ರೀ ಗೀತಾ ಗೋವಿಂದ ಏವ ಚ ।
ಏತೇ ಪಂಚ ಮಹಾಪುಣ್ಯಾಃ ಸೇವನೀಯಾಃ ಪ್ರಯತ್ನತಃ ॥

ಅಖಂಡಮಂಡಲಾಕಾರಂ ವ್ಯಾಪ್ತಂ ಯೇನ ಚರಾಚರಮ್।
ತತ್ಪದಂ ದರ್ಶಿತಂ ಯೇನ ತಸ್ಮೈ ಶ್ರೀಗುರವೇ ನಮಃ॥

ತತ್ತ್ವಜ್ಞಾನವು ದುರ್ಲಭವಾದುದು.

ಮನುಷ್ಯಾದಿ ಸಕಲ ಪ್ರಾಣಿಗಳ ಅನ್ತರಾತ್ಮನು ವಾಸ್ತವದಲ್ಲಿ ಶುದ್ಧ ಪರಮಾನಂದ ಬ್ರಹ್ಮನೇ ಆಗಿರುತ್ತಾನೆ. ಆದರೆ ಅವನು ಎಲ್ಲರಿಗೂ ಸುಲಭನಾಗಿರುವುದಿಲ್ಲ. ಉದ್ದೇಶಪಟ್ಟು ಪ್ರಯತ್ನ ಮಾಡದೆ ಅವನು ಸಿಕ್ಕುವುದಿಲ್ಲ. ಅನ್ತರಾತ್ಮನು ಸ್ವಯಂಪ್ರಕಾಶ, ಸಾಕ್ಷಾದಪರೋಕ್ಷ, ಸ್ವಯಂ ಆಗಿದ್ದರೂ ಅವನ ತಿಳಿವು ಆಗದೇ, ಅವನು ಸಿಕ್ಕದೇ ಇರುವುದಕ್ಕೆ ಕಾರಣಗಳು ಅಷ್ಟು ಬಲವತ್ತರವಾಗಿರುತ್ತವೆ. ತಕ್ಕ ಪ್ರಯತ್ನವಿಲ್ಲದೇ ಸ್ವಾಭಾವಿಕವಾಗಿ ಆಗುವ ಜ್ಞಾನವು ಸ್ವಪ್ನದಂತೆ ಹುಸಿಯಾಗಿರುತ್ತದೆ. ಯಥಾರ್ಥವಾಗಿರುವುದಿಲ್ಲ. ಅದ್ವೈತ ಬ್ರಹ್ಮವು ವಾಸ್ತವವಾಗಿರುವಂತೆ, ಅಂತಹ ಸತ್ಯವಸ್ತು ಜ್ಞಾನವಿಲ್ಲದಿರುವುದೂ ಸ್ವಾಭಾವಿಕವಾಗಿದೆ. ನೈಸರ್ಗಿಕವಾಗಿದೆ. ಆದ್ದರಿಂದ ಮನುಷ್ಯನು ತಾಪತ್ರಯಸಂಕುಲದ ಸಂಸಾರಬಂಧನದಿಂದ ಬಿಡುಗಡೆಯಾಗುವ ಸನ್ಮಾರ್ಗವನ್ನು ಹಿಡಿಯಲು, ಅದಕ್ಕೆ ಅತ್ಯಾವಶ್ಯಕವಾದ ಸಮ್ಯಗ್ಜ್ಞಾನ ಪಡಿಕೊಳ್ಳಲು, ಇರುವ ಪ್ರತಿಬಂಧಕಗಳನ್ನು ವಿಚಾರವಿವೇಕದಿಂದಲೇ ನಿವಾರಿಸಿಕೊಳ್ಳಬೇಕು. ಬೇರೆ ಉಪಾಯವಿಲ್ಲ.

ಅಂತಹ ಪ್ರತಿಬಂಧಕಗಳು ಯಾವುವೆಂದರೆ — ೧. ಮೂಲಾಜ್ಞಾನ ಅಂದರೆ ಸ್ವಸ್ವರೂಪಾಜ್ಞಾನ ೨. ಆತ್ಮವಿಸ್ಮೃತಿ ಎಂಬ ಅವಿದ್ಯೆ. ೩. ಮಿಥ್ಯಾಜ್ಞಾನ=ಅವಿದ್ಯೆ. ೪. ಮಾಯೆ=ಬಾಹ್ಯವಿಷಯಮೋಹ. ೫. ಸಂಶಯ ಮತ್ತು ಲೋಕಮತವಾದಗಳು. ೬. ಪ್ರಮಾಣದೌರ್ಬಲ್ಯ. ೭. ಸಾಧನಾಭಾವ. ೮. ದುರಿತಪ್ರಾಬಲ್ಯ. ಹೀಗೆ ಇಷ್ಟು ಮಾತ್ರವಲ್ಲದೇ ಇನ್ನು ಬೇರೆ ಪ್ರತಿಬಂಧಕಗಳಿರಬಹುದು. ಇಂತಹ ಪ್ರತಿಬಂಧಕಗಳು ಇರುವಾಗ ಸನ್ಮಾರ್ಗದಲ್ಲಿ ಪ್ರವೃತ್ತಿಯು ಉಂಟಾಗಲಾರದು. ಪ್ರಯತ್ನಪಟ್ಟರೂ ಫಲಿಸಲಾರದು. ಆದರೆ ಮನುಷ್ಯನು ತನ್ನ ಶ್ರೇಯಃಪ್ರಾಪ್ತಿಗೆ ಯತ್ನಮಾಡದಿದ್ದರೆ ಅದು ಅವನ ದೋಷವೇ ಸರಿ. ಆದ್ದರಿಂದ ಆಲಸ್ಯಪ್ರಮಾದಗಳನ್ನು ದೂರೀಕರಿಸಿ ಈ ಬಗ್ಗೆ ಮುತುವರ್ಜಿವಹಿಸಿ ಪ್ರಯತ್ನಮಾಡಬೇಕು. (ಚಾರನೆಚ್ಚ ಮಧುಬಿಂದುತ)

ದುರಿತವಿಶೇಷ, ಪಾಪಪ್ರಾಬಲ್ಯವಿರುವಾಗ ಆಸುರೀಸಂಪತ್ತಿನ ಅಧಿಕಾರವೇ ನಡೆಯುತ್ತಿರುವುದು. ದೈವೀಸಂಪತ್ತು ಸ್ಥಗಿತವಾಗುವುದು. ಆದ್ದರಿಂದ ಮೊಟ್ಟಮೊದಲ-ನೆಯದಾಗಿ ದುಸ್ಸಂಗವನ್ನು ಪಾಪಪ್ರವೃತ್ತಿಗಳನ್ನು ದೂರಮಾಡಿಕೊಳ್ಳಬೇಕು. ಆಗ ಸನ್ಮಾರ್ಗಪ್ರವೃತ್ತಿ ಉಂಟಾಗಿ ಶ್ರೇಯಸ್ಸಾಧನೆಯ ಉದಯವಾಗುವುದು. ಈ ಸಾಧನಾಭ್ಯಾಸವು ಬೆಳೆಯುತ್ತಿದ್ದರೆ ಪ್ರಮಾಣಲಾಭವಾಗುವುದು. ಅಂದರೆ ಶಾಸ್ತ್ರ-ಆಚಾರ್ಯರ ಉಪದೇಶ ಯೋಗ ದೊರೆಯುವುದು. ಹೀಗೆ ಮೇಲಿಂದ ಮೇಲೆ ಉಪದೇಶಲಾಭವಾಗುತ್ತಿದ್ದರೆ ಸಂಶಯಗಳು ತೊಲಗುವುವು. ಲೋಕದ ವಾದಿ ಪ್ರತಿವಾದಿಗಳ ವಾದಜಾಲಗಳು ಅಡಗುವುವು. ಆಗ ಶಮ ದಮಾದಿ ಸಾಧನಗಳು ಬೆಳೆದಂತೆಲ್ಲ ಪ್ರಾಪಂಚಿಕ ವಸ್ತು ವ್ಯವಹಾರಗಳಲ್ಲಿ ಆಸಕ್ತಿ ಮೋಹವು ಕ್ಷೀಣಿಸುವುದು, ಹಾಗು ಮಾಯಾಪ್ರಭಾವವು ತಗ್ಗುವುದು. ಹೀಗೆ ಕ್ರಮವಾಗಿ ಶಾಸ್ತ್ರೋಪದೇಶ ಶ್ರವಣ ಮನನ ಅಭ್ಯಾಸವು ನಡೆದಾಗ ಮಿಥ್ಯಾಜ್ಞಾನವೆಂಬ ಭ್ರಾಂತಿಯು ತಪ್ಪುವುದು. ಹೀಗೆ ಮಿಥ್ಯಾಜ್ಞಾನಕ್ಕೆ ಬಾಧೆಯಾದಾಗ ಸ್ವಾತ್ಮಸ್ಮೃತಿ ಸುಯೋಗವುಂಟಾಗುವುದು. ಭ್ರಾಂತಿಯ ದುಃಸ್ಥಿತಿ, ಮತ್ತು ಆತ್ಮವಿಸ್ಮೃತಿ ಎಂಬ ದುರ್ಯೋಗವು ಹೋಗಿ ಆತ್ಮಸ್ಮೃತಿಯು ಭದ್ರವಾಗುವುದು. ಆಗ ಸಮ್ಯಗ್ಜ್ಞಾನವುಂಟಾಗಲು ಸದವಕಾಶವಾಗುವುದು. ಹೀಗೆ ವಿಚಾರಕ್ರಮದಿಂದಲೋ ಮತ್ತು ಸಾಧನಾಭ್ಯಾಸದಿಂದಲೋ ಆತ್ಮಜ್ಞಾನ-ಬ್ರಹ್ಮಜ್ಞಾನ ಆಗಬೇಕೇ ಹೊರತು ಬೇರೆ ಮಾರ್ಗವಿಲ್ಲ. ಬೇರೆ ಉಪಾಯವು ಇರುವುದಿಲ್ಲ. ಕರ್ಮಗಳಿಂದ ಸ್ವಾತ್ಮನ ಅರಿವು ಆಗಲಾರದು.

'ಮೇಲೆ ತಿಳಿಸಿರುವಂತೆ ಸ್ವಾತ್ಮಜ್ಞಾನವುಂಟಾಗಲು ಅನೇಕ ಪ್ರತಿಬಂಧಕಗಳಿರುವುವು. ಅವು ಮನುಷ್ಯನಿಗೆ ತನ್ನ ನಿಜಾತ್ಮನೇ ತೋರದಂತೆ, ದೊರೆಯದಿರುವಂತೆ ಮರೆಮಾಡಿ ಮುಚ್ಚಿರುತ್ತವೆ. ಆದ್ದರಿಂದಲೇ ಅನಾದಿಕಾಲದಿಂದಲೂ ಆತ್ಮದೇವನು ಸಂಸಾರಿಜನರಿಗೆ ರಹಸ್ಯವಾಗಿರುವನು, ದೂರವಾಗಿರುವನು. ಪರೋಕ್ಷವಸ್ತುವಂತಾಗಿರುವನು. ಸಿಕ್ಕದೇ ಇರುವನು.

ಈಗ ಈ ಪ್ರತಿಬಂಧಕಗಳ ಸ್ಥಿತಿಗತಿಯನ್ನು ವಿಚಾರಮಾಡೋಣ —
ಮೊದಲನೆಯದಾಗಿ ಮನುಷ್ಯನಿಗೆ ತನ್ನ ನಿಜಸ್ವರೂಪದ ಅರಿವಿಲ್ಲದಿರುವುದೇ ಮೂಲಾಜ್ಞಾನವಾಗಿದೆ. ಇದೇ ವಿಶಿಷ್ಟ ಸಂಸಾರಬಂಧನಕ್ಕೂ ಮೂಲಕಾರಣವಾಗಿರುವುದು. ಲೋಕವ್ಯವಹಾರದಲ್ಲೇ ತತ್ಪರನಾದ ಮನುಷ್ಯನು ಸ್ವಸ್ವರೂಪಜ್ಞಾನವಿಲ್ಲದವನೇ ಆಗಿರುತ್ತಾನೆ. ಇದೇ ಅವಿದ್ಯೆ-ಅಜ್ಞಾನವು. ಅಜ್ಞಾನ ಎಂದರೆ ಜ್ಞಾನದ ಅಭಾವವಲ್ಲ. ಏಕೆಂದರೆ ಆತ್ಮನು ಜ್ಞಾನಸ್ವರೂಪನೇ ಆಗಿರುವುದರಿಂದ ಅವನಲ್ಲಿ ಜ್ಞಾನದ ಅಭಾವ ಸಂಭವಿಸುವಂತೆಯೇ ಇಲ್ಲ. ನಿನ್ನ ನಿಜಸ್ವರೂಪವೇನು ಎಂದು ಕೇಳಿದರೆ ಆಗ ಅವನು ನಾನು ನನ್ನ ನಿಜದ ಸ್ವರೂಪವನ್ನು ಅರಿಯೆನು ಎಂದು ತಿಳಿದುಕೊಂಡೇ ಹೇಳುತ್ತಾನಲ್ಲವೇ? ತಿಳಿದಿದ್ದನ್ನು ತಾನೇ ಹೇಳಬಹುದು. ಆದ್ದರಿಂದ ಅವನಲ್ಲಿ ಜ್ಞಾನವಿದ್ದೇ ಇರುವುದೆಂದು ಗೊತ್ತಾಗುವುದು. ಅಂತೆಯೇ ಬಲ್ಲವರು ಅಜ್ಞಾನ=ಅವಿದ್ಯೆ ಅಂದರೆ ವಿದ್ಯಾವಿರೋಧಿ ಎಂದು, ನ ವಿದ್ಯತೇ ಇತಿ ಅವಿದ್ಯಾ ಎಂದೂ ತಿಳಿಸಿಕೊಡುತ್ತಿದ್ದಾರೆ. ಇದು ಬೆಳಕಿಗೆ ಕತ್ತಲೆ ವಿರೋಧಿ ಎಂಬಂತೆ ಎಂದು ತಿಳಿಯಬೇಕು. ಬೆಳಕು ಇಲ್ಲದಾಗ ಕತ್ತಲೆ ಇರುವುದು. ಹಾಗೆಯೇ ಜ್ಞಾನಮೂಡಿಕೊಳ್ಳದಿರುವಾಗ ಅಜ್ಞಾನವಿರುವುದು. ಪ್ರಕಾಶದ ಪ್ರಾಗಭಾವ ತಮಸ್ಸು. ವಿಚಾರಪ್ರಾಗಭಾವವೇ ಅಜ್ಞಾನ ಎಂದು ಚಿಂತಿಸಬೇಕು. ಈ ಸ್ವಸ್ವರೂಪಾಜ್ಞಾನವು ಸ್ವಾಭಾವಿಕ ಅಂದರೆ ನೈಸರ್ಗಿಕವಾದುದು. ಅನಾದಿಯಾದುದು. ಹೊಸದಾಗಿ ಹುಟ್ಟಿದುದು ಅಲ್ಲ. ಇದಕ್ಕೆ ಕಾರಣವೆಂಬುದಿಲ್ಲ. ಪ್ರಮಾಣವೆಂಬುದೂ ಇಲ್ಲ. ನಾನು ನಿಜಾತ್ಮನನ್ನು ಅರಿಯೆ ಎಂಬ ಅನುಭವದಿಂದಲೇ ಅದು ಇದೆ ಎನ್ನಬೇಕು. ಇದು ಅಪರೋಕ್ಷವಾಗಿಯೇ ಇರುವುದು. ಇದರ ಪ್ರಕಾರವಿಶೇಷಗಳೇ ಆತ್ಮವಿಸ್ಮೃತಿ ಮತ್ತು ಮಿಥ್ಯಾಜ್ಞಾನ ಎಂಬ ಅವಿದ್ಯೆಗಳು. ಇವು ಮೂರೂ ತಮೋರೂಪಗಳಾಗಿರುತ್ತವೆ. ಕತ್ತಲೆಯು ವಸ್ತುವನ್ನು ಆವರಿಸಿ ಮುಚ್ಚಿ ವಸ್ತು ತೋರದಿರುವಂತೆ ಮಾಡುವುದಷ್ಟೆ! ಹಾಗೆಯೇ ಈ ತಮೋರೂಪದ

ಸ್ವಸ್ವರೂಪಾಜ್ಞಾನವು ಆತ್ಮವಸ್ತು ಕಾಣದಂತೆ ಮಾಡಿರುವುದು. ಈ ಅಜ್ಞಾನವು ಆತ್ಮವಸ್ತುವನ್ನು ಮುಸುಕಿ ಮುಚ್ಚಿರುವುದರಿಂದ ಇದನ್ನು ಆವರಣಾಶಕ್ತಿ ಎಂದು ಕರೆದಿದ್ದಾರೆ. ಶಕ್ತಿ ಎಂಬುದು ಭಾವರೂಪವಾಗಿರುವಂತೆ ಈ ಮೂಲಾಜ್ಞಾನವೂ ಭಾವರೂಪವೆಂದು ಬಗೆಯಬಹುದಾಗಿದೆ. ಇದು ತತ್ತ್ವಜ್ಞಾನದಿಂದ ನಾಶಹೊಂದುವುದಾದ್ದರಿಂದಲೂ, ಧ್ವಂಸಕ್ಕೆ ಪ್ರತಿಯೋಗಿನಾಪೇಕ್ಷೆಯಿರುವುದರಿಂದಲೂ ಈ ಮೂಲಾಜ್ಞಾನವನ್ನು ಭಾವರೂಪವೆಂದು ಎಣಿಸಬಹುದು. ಈ ಮೂಲಾಜ್ಞಾನಕ್ಕೆ ಬ್ರಹ್ಮವಸ್ತುವೇ ವಿಷಯ, ನಿಜಾತ್ಮನೇ ಆಶ್ರಯ ಎಂದು ಗೊತ್ತುಮಾಡಿಕೊಳ್ಳಬೇಕು. ಪ್ರಮಾತೃ ಮನುಷ್ಯನೇ ಆತ್ಮನಾಗಿರುವನಷ್ಟೆ! ಕತ್ತಲೆಯು ಆಶ್ರಯವನ್ನು ಆವರಿಸಿಕೊಂಡಿರುವಂತೆ ಮೂಲಾಜ್ಞಾನವು ಪ್ರಮಾತೃ ಮನುಷ್ಯನನ್ನು ಆವರಿಸಿರುವುದು ಎಂದು ಚಿಂತಿಸಬೇಕು.

ಈ ಮೂಲಾಜ್ಞಾನದ ಜೊತೆಜೊತೆಯಲ್ಲಿಯೇ ಆತ್ಮವಿಸ್ಮೃತಿ ಎಂಬ ಅವಿದ್ಯೆಯೂ ಇರುವುದೆಂಬುದನ್ನು ಗುರುತಿಸಿಕೊಳ್ಳಬೇಕು. ಮನುಷ್ಯನು ತನ್ನ ಆತ್ಮನನ್ನೇ ಮರೆತು ಬಾಹ್ಯ ವಸ್ತುವ್ಯವಹಾರದಲ್ಲಿ ತೊಡಗಿಕೊಂಡಿರುವುದು ಸ್ವಭಾವಿಕವಾಗಿದೆ. ಹಿಂದೆ ಎಂದೂ ಅವನು ತನ್ನ ನಿಜಸ್ವರೂಪವನ್ನು ಕಂಡುಕೊಂಡಿರಲಿಲ್ಲ, ಆದ್ದರಿಂದ ಅಂತಹ ಆತ್ಮನನ್ನು ಸ್ಮರಿಸಿಕೊಳ್ಳಲು ಅವಕಾಶವಾಗಲಿಲ್ಲ. ಇದೇ ಆತ್ಮವಿಸ್ಮೃತಿಯು, ಸಹಜವಾಗಿಬಿಟ್ಟಿದೆ, ಹೀಗೆ ತನ್ನನ್ನೇ ಮರೆತುಕೊಂಡಿರುವ ಮನುಷ್ಯನಿಗೆ ತನಗೆ ತಾನೇ ಮರೆಯಲ್ಲಿದ್ದಂತಾಗಿರುತ್ತಾನೆ. ಈ ಮರೆಯೇ ಮಾಯೆ ಎಂಬ ಭಾವವಾಗಿರುವುದು. ಪ್ರಮೇಯವಾಗಿರುವುದು. ಇದನ್ನೇ ಆತ್ಮಮಾಯೆ ಅಥವಾ ದೈವೀಮಾಯೆ ಎಂದು ಕರೆದಿರುವರು. ಸ್ವರೂಪಜ್ಞಾನವಿಲ್ಲದೆಂಬ ಮೂಲಾಜ್ಞಾನವು ಸಮ್ಯಗ್ಜ್ಞಾನಕ್ಕೆ ಪ್ರತಿಬಂಧಕವಾಗಿರುವಂತೆ ಈ ಆತ್ಮವಿಸ್ಮೃತಿ ಎಂಬ ಅವಿದ್ಯೆಯೂ ಪ್ರತಿಬಂಧಕವಾಗಿರುತ್ತದೆ. ಒಂದು ಮೂಲಕಾರಣ. ಮತ್ತೊಂದು ಮುಖ್ಯಕಾರಣ.

ಹೀಗೆ ಮೂಲಾಜ್ಞಾನವೆಂಬ ಆವರಣಾಶಕ್ತಿಯಿಂದ ನಿಜಾತ್ಮಸ್ವರೂಪವು ಮುಚ್ಚಿರಲು

ಮತ್ತೆ ಆತ್ಮವಿಸ್ಮೃತಿ ಎಂಬ ಅವಿದ್ಯೆಯಿಂದ-ಮಾಯೆಯಿಂದ ಆತ್ಮನು ಮರೆಯಾಗಿರಲು ಆ ಮಾಯಾಪ್ರಭಾವದಿಂದಲೇ ವಿಕ್ಷೇಪಶಕ್ತಿರೂಪವಾದ ಮಿಥ್ಯಾಜ್ಞಾನವು ಉಂಟಾಗುವುದು. ಅಂದರೆ ಆತ್ಮವಿಷಯದಲ್ಲಿ ವಿಪರ್ಯಯಜ್ಞಾನ-ವಿಪರೀತಜ್ಞಾನವಾಗುವುದು. ನಾನು; ದೇ ಮನುಷ್ಯ, ಗಂಡಸು, ಹೆಂಗಸು ಎಂಬರೀತಿಯ ಅನ್ಯಥಾಜ್ಞಾನ. ಭ್ರಾಂತಿ ಆಗುವುದು. ನಾನು ಆತ್ಮ ಎಂಬ ಅರಿವಿಗೆ ಬದಲಾಗಿ ಆತ್ಮಾನಾತ್ಮರ ಅನ್ಯೋನ್ಯಾಧ್ಯಾಸರೂಪದ ನಾನು ದೇಹ ಮಿಥ್ಯಾಜ್ಞಾನವುಂಟಾಗುವುದು. ಈ ಅಧ್ಯಾಸರೂಪದ ಮಿಥ್ಯಾಜ್ಞಾನವೆಂಬ ಅವಿದ್ಯೆಯು ಪ್ರಧಾನಕಾರಣವಾಗಿ ಇದು ಸಮ್ಯಗ್ಜ್ಞಾನಕ್ಕೆ ಪ್ರಧಾನಪ್ರತಿಬಂಧಕವಾಗಿರುತ್ತದೆ. ಏಕೆಂದರೆ ಮನುಷ್ಯನು ನಾನು ಎಂದು ಭಾವಿಸುವಾಗ ಕೇವಲ ಶುದ್ಧ ಆತ್ಮಚೇತನವನ್ನು ಅರಿಯುತ್ತಿರುವುದಿಲ್ಲ. ಅಶುದ್ಧವಾದ ದೇಹೇಂದ್ರಿಯಸಂಘಾತವನ್ನು ತನ್ನನ್ನು ಸೇರಿಸಿಕೊಂಡು ಅವೆರಡನ್ನು ಅಭೇದವಾಗಿ ಬಗೆದುಕೊಂಡಿರುತ್ತಾನೆ. ಈ ಬಗೆಯ ನಾನು ಎಂಬ ಅಭಿಮಾನವೇ ಮಿಥ್ಯಾಜ್ಞಾನವಾಗಿರುತ್ತದೆ. ಈ ಜ್ಞಾನವು ರಜ್ಜುಸರ್ಪ, ಶುಕ್ತಿರಜತ, ಎಂಬಂತೆ ನಾನು ದೇಹ ಎಂದಾಗಿರುತ್ತದೆ. ಈ ನಾನು ದೇಹ ಎಂಬ ಜ್ಞಾನವು ಪ್ರಮಾಣದಿಂದೇನೂ ಹುಟ್ಟುವುದಲ್ಲ. ಸ್ವಾಭಾವಿಕ ಅಂದರೆ ನೈಸರ್ಗಿಕಜ್ಞಾನ, ಕನಸಿನಲ್ಲಾಗುವಂತೆ ಭ್ರಮೆಯಾಗಿರುತ್ತದೆ. ಅಂತೆಯೇ ಇದು ಸತ್ಯವಾದ ಜ್ಞಾನವಲ್ಲ. ಹೀಗೆ ಈ ಮೂರು ಪ್ರಕಾರದ ಅವಿದ್ಯೆಗಳು ಸಮ್ಯಗ್ಜ್ಞಾನಕ್ಕೆ ಪ್ರತಿಬಂಧಕಗಳಾಗಿರುತ್ತವೆ. ವಿದ್ಯಾವಿರೋಧಿಗಳು.

ಈ ಮಿಥ್ಯಾಜ್ಞಾನ, ಆತ್ಮವಿಸ್ಮೃತಿ ಮತ್ತು ಮೂಲಾಜ್ಞಾನ ಎಂಬಿವು ಮನುಷ್ಯನಲ್ಲಿ (ಆತ್ಮನಲ್ಲಿ) ಆವರಣಕಾರ್ಯವನ್ನು ಮತ್ತು ವಿಕ್ಷೇಪಕಾರ್ಯವನ್ನು ಉಂಟುಮಾಡುತ್ತವೆ. ಈ ಮೂರು ಪರಸ್ಪರ ಮಿಶ್ರಿತವಾಗಿಯೂ ಅನ್ಯೋನ್ಯಾಶ್ರಿತಗಳೂ ಆಗಿರುತ್ತವೆ. ಹಾಗೆ ಹೇಳುವುದು ನ್ಯಾಯವಿರುದ್ಧ ಎಂದು ಬಗೆಯುವಂತಿಲ್ಲ. ಏಕೆಂದರೆ ಅನುಭವಾನುಸಾರವಾಗಿ ತತ್ತ್ವವನ್ನು ಕಂಡುಕೊಳ್ಳಬೇಕು. ಅನುಭವ ಮತ್ತು ಆತ್ಮಮಾಯೆ ಇವುಗಳ ಸ್ವಭಾವ

ಪರಾಮರ್ಶೆ ಪೂರ್ವಕವಾಗಿ ನಿರ್ಣಯ ಮಾಡಿಕೊಳ್ಳಬೇಕು. ವಾಸ್ತವವಾಗಿ ಅವಿದ್ಯೆಗೂ ಮತ್ತು ಮಾಯೆಗೂ ಕಾರಣವೆಂಬುದೇನೂ ಇರುವುದಿಲ್ಲ. ಅವೆರಡೂ ಅನಾದಿ, ಅನಿರ್ವಚನೀಯ ಪ್ರಮೇಯಗಳಾಗಿರುತ್ತವೆ. ತತ್ತ್ವಜ್ಞಾನದಿಂದ ಅವು ಇಲ್ಲವಾಗುತ್ತವೆ. ಧ್ವಂಸಕ್ಕೆ ಪ್ರತಿಯೋಗಿಯು ಆವಶ್ಯಕವಾಗಿರುವುದರಿಂದ ಈ ಅವಿದ್ಯಾದ್ವಯವೆಂಬ ಒಟ್ಟುಮೊತ್ತವು ತಮಸ್ಸಿನಂತೆ ಭಾವರೂಪ ಎಂದು ಭಾವಿಸಬಹುದಾಗಿದೆ. ಅಂತು ನಾನು ಎಂಬ ಮಿಥ್ಯಾಜ್ಞಾನವು - ಅವಿದ್ಯೆಯು ಸಮ್ಯಗ್ಜ್ಞಾನಕ್ಕೆ ಪ್ರಧಾನಪ್ರತಿಬಂಧಕವಾಗಿರುತ್ತೆ.

ಈಗ ಪ್ರತಿಬಂಧಕಗಳಲ್ಲಿ ನಾಲ್ಕನೆಯದಾದ ಮಾಯೆ - ಮೋಹ ಎಂಬ ಪ್ರಮೇಯ ವಿಷಯವನ್ನು ವಿಚಾರಮಾಡೋಣ. ಮಾಯೆ ಎಂಬುದು ಬ್ರಹ್ಮಕ್ಕಿಂತ ಹೊರತಾಗಿ ಬೇರೆ ಪೃಥಕ್ ಸ್ವತಂತ್ರ ವಸ್ತುವಾಗಿರುವುದಿಲ್ಲ; ಅದು ಪರಮಾತ್ಮನ ಸ್ವಭಾವವೋ, ಅಥವಾ ಮಹಿಮೆ ಎಂದು ಗ್ರಹಿಸಬೇಕು. ಇದೇ ಪ್ರಕೃತಿ ಎಂಬ ಪ್ರಮೇಯವಾಗಿದೆ. ಅವ್ಯಕ್ತ ಆತ್ಮಪ್ರಕೃತಿರೂಪವಾಗಿರುತ್ತದೆ. ಯಾ ಮಾ ಸಾ ಮಾಯಾ = ಯಾವುದನ್ನು ಕಂಡು ಹಿಡಿಯಲು ಸಾಧ್ಯವಿಲ್ಲವೋ ಅದೇ ಮಾಯೆಯು ಎಂದು ಬಲ್ಲವರು ತಿಳಿಸಿಕೊಡುತ್ತಾರೆ. ಇದು ಅವಿದ್ಯೆಯ ರೂಪಾಂತರ ಎಂದು ಬಗೆಯಬಹುದಾಗಿದೆ. ಇದೂ ಅನಾದಿಯೂ ಅನಿರ್ವಚನೀಯವೂ ಮತ್ತು ಆತ್ಮವಿಲಕ್ಷಣವೂ ಆಗಿದೆ. ಬ್ರಹ್ಮಾತ್ಮನಿಗೆ ಅನನ್ಯವಾಗಿದ್ದರೂ ಚಿಚ್ಛಕ್ತಿರೂಪವಲ್ಲ. ಜಡಶಕ್ತಿಯಾಗಿದೆ, ಗುಣತ್ರಯಾತ್ಮಕವಾಗಿದೆ. ಪರಿಣಾಮಗೊಳ್ಳುವುದಾಗಿದೆ. ಇದು ಅವ್ಯಕ್ತ-ನಾಮಕವಾಗಿರುವುದು. ಮಾಯಾಕಾರ್ಯವನ್ನು ಕಂಡು ಅದಕ್ಕೆ ಕಾರಣವಾಗಿ ಮಾಯೆಯನ್ನು ಊಹಿಸಬೇಕಲ್ಲದೆ ಸಾಕ್ಷಾತ್ ಮಾಯೆಯನ್ನು ತಿಳಿಯಲಾಗುವುದಿಲ್ಲ, ತೋರಿಸಲಾಗುವುದಿಲ್ಲ. ಈ ಮಾಯಾಶಕ್ತಿಯು ಪ್ರಪಂಚರೂಪವಾಗಿ ಪರಿಣಾಮಗೊಂಡಾಗ ಎರಡು ಪ್ರಕಾರವಾಗಿ ತೋರಿಕೊಳ್ಳುವುದು. ಕ್ರಿಯಾಶಕ್ತಿ ಮತ್ತು ಮೋಹಕಶಕ್ತಿ ಎಂಬುವು ಮಾಯಾಕಾರಣದಿಂದ ಆಗುವುವು. ಆತ್ಮಪ್ರಕೃತಿಯಾದ ಇಂತಹ ಮಾಯೆಯಿಂದ ನಾಮರೂಪ ಪ್ರಪಂಚವೆಲ್ಲ ಉಂಟಾಗಿ ತೋರಿಕೊಳ್ಳುತ್ತಾ ಇದ್ದು

ಇದರಲ್ಲಿ ಆತ್ಮನೇ ಮೋಹಗೊಂಡಿರುವಂತೆ ಆಗಿರುತ್ತದೆ. ಹೀಗೆ ಮಾಯಾಮೋಹ ಪ್ರಭಾವದಿಂದ ಆತ್ಮನೇ ಸಂಸಾರಿಯಾಗಿರುವಂತೆ ತೋರುತ್ತಾನೆ. ಅಂದರೆ ಮನುಷ್ಯನ ನಿಜ ಆತ್ಮನು ಕೇವಲ ದೃಗ್ರೂಪ ಕೂಟಸ್ಥಸಾಕ್ಷಿಯಾಗಿದ್ದರೂ ಅವಿದ್ಯಾತ್ರಯೋಪಾಧಿಯುಕ್ತ-ಮನುಷ್ಯನು, ಪ್ರೇಕ್ಷಕ ಪ್ರಮಾತೃರೂಪನಾಗಿ ರೂಪಾಂತರಗೊಂಡಂತೆ ಆಗಿದ್ದು ಅವನು ಮಾಯಾರೂಪದ ದೃಶ್ಯಪ್ರಪಂಚವನ್ನು ನೋಡುತ್ತ ನೋಡುತ್ತಾ ಮೋಹಪರವಶನಾಗಿರುತ್ತಾನೆ. ಸತ್ಯಪ್ರಪಂಚವನ್ನೆಂದು ಬಗೆದುಕೊಂಡಿರುತ್ತಾನೆ. ಅಂತು ಈ ಮಾಯಾ-ಮೋಹ ಪಂಜರವು ಸಮ್ಯಗ್ಜ್ಞಾನವಾಗಲು ಪ್ರತಿಬಂಧಕವಾಗಿರುತ್ತದೆ.

ಮೇಲೆ ಹೇಳಿರುವಂತೆ ಮನುಷ್ಯನು ಅವಿದ್ಯಾವಂತನಾಗಿದ್ದರೆ ಪ್ರಪಂಚದ ಮಾಯಾ ಮೋಹ ಬಲೆಯಲ್ಲಿ ಸಿಕ್ಕಿಕೊಂಡು ಪರವಶನಾಗಿರುತ್ತಾನೆ. ಅಸ್ವತಂತ್ರನು ದೀನನೂ ಕೃಪಣನೂ ಆಗಿರುತ್ತಾನೆ. ಇಂತಿರುವವನಿಗೆ ವಿವೇಕ, ಸ್ವಯಂಪ್ರಜ್ಞೆ ಇರುವುದಿಲ್ಲವಾದ್ದರಿಂದ ಈ ಲೋಕದ ಜೀವನ ಪ್ರಸಂಗದಲ್ಲಿ ಸ್ವಾಭಾವಿಕವಾದ ನಿಮಿತ್ತದಿಂದ ಅನೇಕಪ್ರಕಾರವಾದ ಸಮಸ್ಯೆ, ಸಂಶಯ, ಭಯ, ಪ್ರಮಾದ, ಸಂಕಲ್ಪ ವಿಕಲ್ಪ ಮುಂತಾದ ವಿಕಾರಗಳು ಉಂಟಾಗುತ್ತಲೇ ಇರುತ್ತವೆ. ಸ್ವಂತ ವಿದ್ಯೆ ಇರುವುದಿಲ್ಲವಾದ್ದರಿಂದ ಇನ್ನೊಬ್ಬರು ಹೇಳಿದ್ದನ್ನು ನಂಬುವಂತೆ ಆಗುವುದು, ಲೋಕಸಮಾಜದಲ್ಲಿರುವ ಜನರು ನಾನಾ ತರಹ ವಾದಗಳನ್ನು ಒಡ್ಡುತ್ತಿರುತ್ತಾರೆ. ಅಂತಹವರ ಮಾತನ್ನು ಕೇಳುವಾಗ ಸಂದೇಹ ಬೆಳೆಯುವುದೇ ಹೊರತು ನಿಶ್ಚಯ ಜ್ಞಾನವುಂಟಾಗಲಾರದು. ಮತ್ತು ಜ್ಞಾನೀಮಹಾತ್ಮರು ಹೇಳುವ ಮಾತಿನಲ್ಲಿ ಉಪದೇಶದಲ್ಲಿ ನಂಬಿಕೆ-ಶ್ರದ್ಧೆ ಉಂಟಾಗಲಾರದು. ಲೋಕದ ಪರಿಸ್ಥಿತಿಯು ಹೀಗಿರುವುದರಿಂದ ಪರಮಾರ್ಥನಿಶ್ಚಯಕ್ಕೆ ಪ್ರಬಲ ಪ್ರತಿಬಂಧಕವಾಗಿರುತ್ತದೆ.

ಮನುಷ್ಯನಿಗೆ ಪ್ರಮಾಣದಿಂದಲೇ ವಸ್ತುಜ್ಞಾನ ಉಂಟಾಗಬೇಕು. ಬೆಳಕು ಇಲ್ಲದಿದ್ದರೆ ವಸ್ತು ಕಾಣುವುದಿಲ್ಲ ಎಂಬಂತೆ ಪ್ರಮಾಣವಿಲ್ಲದಿದ್ದರೆ ಜ್ಞಾನ ಆಗುವುದಿಲ್ಲ. ಆತ್ಮಸ್ವರೂಪಜ್ಞಾನ ಉಂಟಾಗಲು ಪ್ರಮಾಣವು ಬೇಕೇಬೇಕು. ಆದರೆ ಅಂತಹ ಪ್ರಮಾಣವು ಜನಸಮಾಜದಲ್ಲಿ ದುರ್ಲಭವಾಗಿದೆ. ಮನುಷ್ಯನಲ್ಲಿ ಸ್ವಕೀಯವಾಗಿ ಮನ ಆದಿ ಇಂದ್ರಿಯಗಳು ಜ್ಞಾನಸಾಧನಗಳಿದ್ದರೂ ಅವು ಹೊರಗಿನ ವಸ್ತು

ವಿಷಯಗಳನ್ನು ತಿಳಿಸುವರೇ ಹೊರತು ತಮ್ಮ ಒಳಗಿನ ಅಂತರಾತ್ಮನ ವಿಷಯವನ್ನು ತಿಳಿಸಿಕೊಡಲಾರವು. ಆದ್ದರಿಂದ ಮನುಷ್ಯನು ಸ್ವತಃ ಆತ್ಮಜ್ಞಾನಮಾಡಿಕೊಳ್ಳಲು ಶಕ್ಯವಿಲ್ಲ. ಆದ್ದರಿಂದಲೇ ಬ್ರಹ್ಮವಿದ್ಯೆ, ಗುಹ್ಯ ರಹಸ್ಯ (ಎನ್ನುವರು) ಎಂದಾಗಿದೆ ಇಂತಹ ರಹಸ್ಯವನ್ನು ತಿಳಿಯಲು ಪ್ರಮಾಣವು ಇಲ್ಲವೇ ಎಂದರೆ, ಇದ್ದೇ ಇದೆ. ಆದರೆ ಸುಲಭವಾಗಿಲ್ಲ. ವೇದ ಸಂಹಿತೆಗಳಲ್ಲಿ ಸಿಕ್ಕುವುದಿಲ್ಲ. ಉಪನಿಷದ್ ಗುರೂಪದೇಶಗಳೇ ಈ ರಹಸ್ಯವಿದ್ಯೆಗೆ ಪ್ರಮಾಣವಾಗಿರುತ್ತವೆ. ಚಿತ್ತವಿಕ್ಷೇಪವುಳ್ಳವರಿಗೆ ಅವು ಸುಲಭವಾಗುವುದಿಲ್ಲ. ಸುಗಮವೂ ಆಗುವುದಿಲ್ಲ. ಲೋಕವ್ಯವಹಾರದಲ್ಲಿ ಎಷ್ಟೇ ವಿದ್ಯಾವಂತರಾಗಿದ್ದರೂ ಈ ರಹಸ್ಯವಿದ್ಯಾವಿಷಯದಲ್ಲಿ ಅವರು ಬಾಲಕರಂತೆಯೇ ಸರಿ. ಬಾಲಕರಿಗೆ ವಸ್ತುಮಹತ್ತ್ವ ಮತ್ತು ಪ್ರಮಾಣಗಳ ಸ್ಥಾನ-ಬೆಲೆ ತಿಳಿದಿರುವುದಿಲ್ಲವಷ್ಟೆ! ಹಾಗೆಯೇ ಅವಿದ್ಯಾ ಮಾಯಾವಶರಾದವರಿಗೆ ಯಾವುದನ್ನು ಶ್ರದ್ಧಾ ವಿಶ್ವಾಸದಿಂದ ಹಿಡಿಯಬೇಕು? ಯಾವುದನ್ನು ವರ್ಜಿಸಬೇಕು? ಎನ್ನುವುದು ಗೊತ್ತಾಗಲಾರದು. ಆದ್ದರಿಂದಲೇ ವಿದ್ಯಾಭ್ಯಾಸಮಾಡಿಕೊಂಡಿದ್ದವರು ಸಾಮಾನ್ಯಜನರಂತೆ ಲೌಕಿಕವ್ಯವಹಾರದಲ್ಲಿ ಮೈಮರೆತಿರುತ್ತಾರೆ. ಅವರು ತಮ್ಮ ಆತ್ಮನನ್ನು ಮರೆತಿದ್ದರೂ ಅಂತರ ಆತ್ಮನು ಇದ್ದುಬಿಟ್ಟಿದ್ದಾನೆ. ಆತ್ಮನನ್ನು ಮರೆತಿದ್ದರಿಂದ, ಅರಿಯದ್ದರಿಂದ, ತಮ್ಮ ವ್ಯವಹಾರಕ್ಕೇನೂ ಅಡಚಣೆಯುಂಟಾಗಿಲ್ಲ ಎಂಬ ವ್ಯಾಮೋಹದಲ್ಲಿ ಮುಳುಗಿರುತ್ತಾರೆ. ಹೀಗೆ ಸಂಸಾರವು ಸಾಗುತ್ತಿರುತ್ತದೆ. ಪ್ರತ್ಯಗಾತ್ಮ ವಸ್ತುವು ಆವರಣರೂಪದ ಅವಿದ್ಯಾ ಮಾತ್ರ ವ್ಯವಧಾನ (ಮರೆ) ದಿಂದ ಅದು ಪರೋಕ್ಷ-ದೂರದ್ದು ಎಂದಾಗಿಬಿಟ್ಟಿದೆ. ಆ ರಹಸ್ಯವಸ್ತುವನ್ನು ಗುರೂಪದೇಶ-ಪ್ರಮಾಣದಿಂದಲೇ ತಿಳಿದುಕೊಳ್ಳಬೇಕು. ಬೇರೆ ಉಪಾಯವಿಲ್ಲ. ಆತ್ಮಸ್ವರೂಪವು ಹೇಗಿರುವುದೋ ಅದು ಇದ್ದಂತೆ ತಿಳಿಯುವುದೇ ವಿದ್ಯೆಯು. ತಪ್ಪಾಗಿ ತಿಳಿಯುವುದೇ ಅವಿದ್ಯೆಯು.

ಭಗವದ್ಭಕ್ತಿ, ಗುರೂಪದೇಶದಲ್ಲಿ ಶ್ರದ್ಧೆ, ಸಜ್ಜನರ ಸಹವಾಸ ಇವುಗಳೇ ಸನ್ಮಾರ್ಗ ಸಾಧನೆಗಳಲ್ಲಿ ಪ್ರಧಾನವಾಗಿರುತ್ತವೆ, ಆತ್ಮಕಲ್ಯಾಣಮಯವಾದ ಈ ಶ್ರೇಯೋ-

ಮಾರ್ಗದಲ್ಲಿ ಪ್ರವೃತ್ತಿಯುಂಟಾಗದಿರುವುದಕ್ಕೆ ದೈವೀಸಂಪತ್ತಾದ ಈ ಸಾಧನೆಗಳು ಇಲ್ಲದಿರುವುದೇ ಕಾರಣವಾಗಿರುವುದು. ಆದ್ದರಿಂದ ಆತ್ಮಶ್ರೇಯೋಭಿಲಾಷೆಯುಳ್ಳ ಮನುಷ್ಯನು ಮೊಟ್ಟಮೊದಲು ಪ್ರತಿಬಂಧಕಗಳನ್ನು ಚೆನ್ನಾಗಿ ವಿಚಾರಿಸಿ ತಿಳಿದುಕೊಂಡು ಅವನ್ನು ಪರಿಹರಿಸಿಕೊಳ್ಳಬೇಕು. ಆಗಲೇ ಸನ್ಮಾರ್ಗದಲ್ಲಿ ಪ್ರವೃತ್ತಿಯುಂಟಾಗುವುದು. ಸಾಧನಾಭ್ಯಾಸವು ನಡೆಯುವುದು.

ಈ ಸಾಧನೆಗಳು ಮುಖ್ಯವಾಗಿ ನಾಲ್ಕು ಎಂದು ಉಪದೇಶಿಸಿದ್ದಾರೆ.

೧. ನಿತ್ಯಾನಿತ್ಯವಸ್ತುವಿವೇಕ. ೨. ಶಮ ದಮಾದಿ ದೈವೀಸಂಪತ್ತು. ೩. ವೈರಾಗ್ಯ. ೪. ಮುಮುಕ್ಷುತ್ವ. ಅಂದರೆ ತಾನು ಸಂಸಾರ ತಾಪತ್ರಯ ಬಂಧನದಿಂದ ಬಿಡುಗಡೆ ಹೊಂದಲೇ ಬೇಕೆಂಬ ತೀವ್ರ ಅಭಿಲಾಷೆ. ಯಾರು ಈ ನಾಲ್ಕು ಸಾಧನೆಗಳ ಅಭ್ಯಾಸ ನಡೆಯುತ್ತಿದ್ದರೆ ಆಗ ಅಧ್ಯಾತ್ಮವಿದ್ಯಾಭ್ಯಾಸಕ್ಕೆ ಯೋಗ್ಯನಾಗಿ ಬಿಡುವ ಈ ಕ್ರಮದಿಂದಲೇ ಸಮ್ಯಗ್ಜ್ಞಾನ - ತತ್ತ್ವಜ್ಞಾನ ಉಂಟಾಗಿ ಪರಮ ಪುರುಷಾರ್ಥಪ್ರಾಪ್ತಿಯು ಆಗುವುದು. ಆಗಲೇ ಸ್ವಾತ್ಮನಲ್ಲಿ ನಿತ್ಯನಿವೃತ್ತವಾದ ಅವಿದ್ಯೆಯು ಆತ್ಯಂತಿಕವಾಗಿ ನಿವೃತ್ತಿಹೊಂದಿದುದು ಎನ್ನಿಸಿ ನಿತ್ಯಪ್ರಾಪ್ತವಾದ ಮೋಕ್ಷವು ಗೊತ್ತಾಗುವುದು. ಇದೇ ಆತ್ಮನ ಅನುಭೂತಿಯು, ಇದೇ ನಿಶ್ರೇಯಸ್ಸು, ಇದೇ ಸಿದ್ಧಿಯು. ಓಂ.

दृशिकर्मत्वापत्तिनिमित्ता हि लोकस्य सर्वा प्रवृत्तिः- अहं इदं भोक्ष्ये, इदं अहं ज्ञास्यामीत्याद्या अवगतिनिष्ठा अवगत्यवसानैव ॥

मयाध्यक्षेण प्रकृतिः सूयते —— गीताभाष्य ९-१०.

गङ्गा गावोऽथ गायत्री गीता गोविन्द एव च ।
एते पञ्च महापुण्याः सेवनीयाः प्रयत्नतः ॥

ಅದ್ವೈತ ಸಿದ್ಧಾಂತಕ್ಕೆ ಅಪ್ರಾಕೃತ ಸಾಕ್ಷಿ ಪುರಾವೆ.

ಉಸಿರಾಟ ತತ್ವ

ಪ್ರಾಜ್ಞ ಆತ್ಮನಾದ ಮುಖ್ಯಪ್ರಾಣನು ಸೋऽಹಂ ಸೋऽಹಂ ಎಂದು ನಿರಂತರ ಜೀವನ ಮಾಡುತ್ತಿರುವನು. ಅಂದಾಗ ಮನುಷ್ಯಾದಿ ಪ್ರಾಣಿಗಳ ಸ್ವಾಭಾವಿಕವಾದ ಉಸಿರಾಟದಿಂದ ಸೋऽಹಂ ಸೋऽಹಂ ಎಂಬ ಜಪವೇ ನಿರಂತರ ನಡೆಯುತ್ತಿರುವುದು. ಸೋऽಹಂ ಸೋऽಹಂ ಎಂದಲ್ಲವೇ ಪ್ರಾಣಿಗಳ ಉಚ್ಛ್ವಾಸ ನಿಃಶ್ವಾಸರೂಪದ ಉಸಿರಾಟವಿರುವುದು! ಈ ಸೋऽಹಂ ಎಂಬ ಮಾತಿನ ಅರ್ಥವೇನೆಂದರೆ- ಸಃ + ಅಹಂ = ಅವನು ನಾನು, ಅಂದರೆ ಅವನೇ (ಪರಮಾತ್ಮನೇ) ನಾನು (ಜೀವಾತ್ಮನು), ಅಥವಾ ಅವನು ನಾನೇ ಎಂಬರ್ಥವಿರುವುದು. ಮಾತು ಯಾವಾಗಲೂ ನಿಶ್ಚಯಾರ್ಥಕವೇ ಆಗಿರುವುದರಿಂದ ಈ ಅರ್ಥವೇ ಸ್ವಾಭಾವಿಕಾರ್ಥವು ಎಂದು ನಿಶ್ಚಯಿಸಿಕೊಳ್ಳಬೇಕು. ಇದು ಕೃತಕವಲ್ಲ, ಕಲ್ಪನೆ ಅಲ್ಲ, ಪ್ರಕೃತಿ ಸಿದ್ಧಾರ್ಥವಾಗಿದೆ. ಸಿದ್ಧಾಂತವಾಗಿದೆ. ಈ ಸಿದ್ಧಾಂತಕ್ಕೆ ಅನುಗುಣವಾಗಿಯೇ ಮನುಷ್ಯಾದಿಗಳ ಉಸಿರಾಟವು ನಡೆಯುತ್ತಿರುವುದು. ಈ (ಪದಾರ್ಥಗಳು ಅಂದರೆ ಜೀವ-ಪರಮಾತ್ಮರು ವಸ್ತುಗಳು) ಅಭೇದವಾಗಿ ಕೂಡಿಕೊಂಡಿರುವಂತೆ ಈ ಪದಗಳು ನಿರಂತರವಾಗಿ ಕೂಡಿಕೊಂಡಿದ್ದು ಸ್ವಾಭಾವಿಕವಾಗಿಯೇ ಸೋऽಹಂ ಎಂದಾಗಿದೆ. ಇದರಲ್ಲಿ ಪೂರ್ವಾಕ್ಷರವು ಪರಮಾತ್ಮಾಭಿಧಾನವಾಗಿದೆ. ಅಂತ್ಯಾಕ್ಷರವು ಜೀವಾಭಿಧಾನವಾಗಿದೆ. ಈರೀತಿ ಜೀವನ ಉಚ್ಛ್ವಾಸ ನಿಃಶ್ವಾಸ ಪ್ರಕಾರ ಅಭೇದವೇ ತತ್ವಸಿದ್ಧಾಂತವಾಗಿದೆ. ಜೀವನೇ ಈಶ್ವರನಾಗಿದ್ದಾನೆ ಎಂಬುದೇ ಪರಮಾರ್ಥವು. ಹೀಗೆಂಬುದನ್ನು ತತ್ವವಿಚಾರ ಮಾಡಿಕೊಂಡೇ ಅರಿಯಬೇಕು. ಅನ್ಯಥಾ ತಿಳಿಯುವುದಿಲ್ಲ.

ಅಜಪಾ ನಾಮ ಗಾಯತ್ರೀ ಮುನೀನಾಂ ಮೋಕ್ಷದಾಯಿನೀ ।
ಅಸ್ಯಾಃ ಸಂಕಲ್ಪಮಾತ್ರೇಣ ಸರ್ವಪಾಪೈಃ ಪ್ರಮುಚ್ಯತೇ ॥
ಹಕಾರೇಣ ಬಹಿರ್ಯಾತಿ ಸಕಾರೇಣ ವಿಶೇತ್ಪುನಃ ।
ಹಂಸೋ ಹಂಸೇತಿ ಮಂತ್ರೇಣ ಜೀವೋ ಜಪತಿ ತತ್ವತಃ ॥ - ಗಾರುಡೇ -
೧೫-೭೮

ಅಜ್ಞಾನಾಂಧಸ್ಯ ಲೋಕಸ್ಯ ಜ್ಞಾನಾಂಜನಶಲಾಕಯಾ।
ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀ ಗುರವೇ ನಮಃ॥

ಪ್ರಪಂಚ ಸೃಷ್ಟಿ - ಜೀವ ಜಗತ್ ಸಂಸಾರ.

ಸೃಷ್ಟ್ಯಾಗಮನ ಪ್ರಸಂಗಳ ಅಂದರೆ ಹಿಂದೆ ಪ್ರಳಯವಾದಾಗ ಮುಕ್ತರಾಗದೆ ಇದ್ದ ಜೀವರ ಕರ್ಮವಿಪಾಕ ದೆಸೆಯಿಂದಲೂ ಮತ್ತು ಅವರಿಗೆ ಕರ್ಮಫಲ ~~ಕೊಡುವ~~ ನಿಮಿತ್ತವಾಗಿಯೂ ಮತ್ತೆ ಪ್ರಪಂಚಸೃಷ್ಟಿ ಪ್ರಸಂಗವಾಯಿತು. ಆಗ ಸೃಷ್ಟಿ ಮಾಡಲೆಣಿಸಿದ ಅದ್ವಿತೀಯ ಬ್ರಹ್ಮಚೈತನ್ಯವೇ ಈಶ್ವರನೆಂದಾದನು. ಜ್ಞಾನಪ್ರಕಾಶಸ್ವರೂಪದ ಬ್ರಹ್ಮದೇವನ ಸೃಷ್ಟಿಸಂಕಲ್ಪವೇ ಇಚ್ಛಾರೂಪವಾದುದು. ಈ ಇಚ್ಛೆಯು ಜ್ಞಾನದ ಪ್ರಕಾರವಿಶೇಷವೇ. ಇದನ್ನೇ ಈಶ್ವರಮಾಯೆ ಎಂದು ಹೇಳುವರು. ಈಶ್ವರನು ಸ್ವ ಇಚ್ಛೆಯಿಂದ ಮಾಯೆಯನ್ನು ಉಪಾಧಿಯನ್ನಾಗಿ ಮಾಡಿಕೊಂಡು ಪ್ರಪಂಚಸೃಷ್ಟಿ ಮಾಡಿರುವನು. ಆದ್ದರಿಂದ ಈಶ್ವರನ ಸ್ವಾತಂತ್ರ್ಯಕ್ಕೇನೂ ಹಾನಿಯಿಲ್ಲ. ಪುರುಷನು ನಾಟಕದಲ್ಲಿ ಸ್ತ್ರೀವೇಷಧರಿಸಿದ್ದರೆ ಅವನ ಪುಂಸ್ತ್ವಕ್ಕೇನೂ ಚ್ಯುತಿಯಾಗದಷ್ಟೆ! ನಿರುಪಾಧಿಕ, ನಿರ್ವಿಶೇಷಸ್ವಭಾವದ ಬ್ರಹ್ಮದೇವನ ಸೋಪಾಧಿಕವಾದ ವಿಶೇಷಸ್ವರೂಪವೇ ಈಶ್ವರ ಎಂದಾಗಿರುತ್ತದೆ. ಜೀವ ಪುರುಷರಿಗೆ ಅವರ ವಿಶೇಷರೂಪದ ಪರಿಚಯ ಮಾಡಿಕೊಡುತ್ತ ಬ್ರಹ್ಮಜ್ಞಾನ ಮಾಡಿಕೊಡಲೆಂದೇ ನಿರ್ವಿಶೇಷ ಬ್ರಹ್ಮಚೈತನ್ಯವಲ್ಲ ಈಶ್ವರರೂಪದ ವಿಶೇಷ ಸ್ಥಿತಿಯನ್ನು ತಿಳಿಸಿಕೊಡಲಾಗುವುದು. ಏಕೆಂದರೆ ನಿರ್ವಿಶೇಷ ಬ್ರಹ್ಮವನ್ನು ಹೇಳಲು ಆಗದು. ತಿಳಿಯಲೂ ಆಗದು. ವಸ್ತುತಃ ಪರಬ್ರಹ್ಮವು, ಈಶ್ವರನು ಬೇರೆ ಬೇರೆ ಅಲ್ಲ. ಅಖಂಡ ಚೈತನ್ಯ ಇರುವುದು ಒಂದೇ. ಆ ಏಕ ಚೈತನ್ಯನಿಗೆ ಈಶ್ವರರೂಪವು ಹೇಗೆ ಸವಿಶೇಷಸ್ಥಿತಿಯೋ ಹಾಗೆಯೇ ಜೀವರೂಪವೂ ಸವಿಶೇಷಸ್ಥಿತಿಯೇ ಆಗಿರುತ್ತದೆ ಎಂದು ಅರಿತುಕೊಳ್ಳಬೇಕು. ಈಶ್ವರಚೈತನ್ಯನು ಜಗತ್ಸೃಷ್ಟಿಗೋಸ್ಕರ ಸರ್ವಕಾರ್ಯಸಮರ್ಥವಾದ ಮಾಯೆಯನ್ನು ಸ್ವ ಇಚ್ಛೆಯಿಂದ ಉಪಾಧಿಯನ್ನಾಗಿ ಸ್ವೀಕರಿಸಿರುವನು. ಜೀವಚೈತನ್ಯರಿಗೆ ಅವರವರ ಕರ್ಮಫಲವನ್ನು ಅನುಭವಿಸಲು ಅವಿದ್ಯೆಯು ([illegible]) ಉಪಾಧಿಯಾಗಿ ಗಂಟುಬಿದ್ದಿರುತ್ತದೆ. ~~[illegible]~~ ಚೈತನ್ಯ ಸ್ವರೂಪದಲ್ಲಿ ಭೇದವಿಶೇಷವೇನೂ ಇಲ್ಲ.

ಸುಷುಪ್ತಿಸ್ಥಿತಿಯಂತೆ ಪ್ರಲಯಸ್ಥಿತಿ. ಪ್ರಬೋಧ ಪ್ರಥಮ ಕಾಲದಂತೆ ಸೃಷ್ಟಿ ಆರಂಭ ಕಾಲ. ಈ ಆರಂಭ ಪ್ರಥಮ ಕಾಲದಲ್ಲಿ ಈಶ್ವರನ ಸೃಷ್ಟಿಸಂಕಲ್ಪ ಮೂಡಿರುವುದು. ಆಗ ಅಖಂಡ ಪ್ರಕೃತಿಯ ಚೇತನನಾಗಿದ್ದವನೇ ಮಾಯೋಪಾಧಿಯಿಂದ ಸೃಷ್ಟ್ಯುನ್ಮುಖನಾದಾಗ ಪ್ರಾಜ್ಞ, ಅವ್ಯಾಕೃತ, ಈಶ್ವರ ಎಂದಾಗಿರುತ್ತಾನೆ. ಸುಷುಪ್ತಿಸ್ಥಾನದಲ್ಲಿ ಜೀವನು ಪ್ರಾಜ್ಞರೂಪನೇ ಆಗಿರುತ್ತಾನೆ. ಇದರ ಉಪಾಧಿಯು ಬೇರೆ ಬೇರೆ ಆಗಿರುತ್ತದೆ. ಮಾಯೋಪಾಧಿಯಿಂದ ಈಶ್ವರ ಎಂದೂ ಅವಿದ್ಯೋಪಾಧಿಯಿಂದ ಜೀವ ಎಂದೂ ಭೇದವು ಏರ್ಪಟ್ಟಿರುತ್ತದೆ. ಹೀಗೆಂಬ ವಿಶೇಷವನ್ನು ಅರಿತುಕೊಳ್ಳಬೇಕು. ಈಶ್ವರೋಪಾಧಿಯಾದ ಮಾಯೆಯು ಸರ್ವ ಜಗತ್ಕಾರ್ಯಗಳಿಗೂ ಮೂಲಕಾರಣ - ಮೂಲಪ್ರಕೃತಿಯಾಗಿರುವುದರಿಂದ ಅದನ್ನು ಶಕ್ತಿ ಎನ್ನುತ್ತಾರೆ. ಈ ಮಾಯಾ ಎಂಬ ಶಕ್ತಿಯು ಚಿಚ್ಛಕ್ತಿ ಮತ್ತು ಜಡಶಕ್ತಿ ಹೀಗೆ ಉಭಯಾತ್ಮಕವಾದುದು. ಶಕ್ತಿ ಎಂದರೆ ಕಾರ್ಯದ ಪೂರ್ವರೂಪ ಎಂದರಿಯಬೇಕು. ಅದನ್ನು ಸಾಕ್ಷಾತ್ ನೋಡಲಾಗುವುದಿಲ್ಲ. ಕಾರ್ಯಮೂಲಕವಾಗಿಯೇ ಅದನ್ನು ಊಹಿಸಿ ತಿಳಿಯಬೇಕು. ಚೇತನನು ಅವ್ಯಾಕೃತ ಪ್ರಾಜ್ಞಸ್ಥಿತಿಯಲ್ಲಿರುವಾಗ ಇಂತಹ ಮೂಲಪ್ರಕೃತಿಯು ಉಪಾಧಿಯಾಗಿರುವುದರಿಂದ ಈಶ್ವರನು ಸರ್ವಜ್ಞನೂ ಸರ್ವಶಕ್ತನೂ ಆಗಿರುವನು, ಅಲ್ಲದೆ ಚಿಜ್ಜಡೋಭಯ ಶಕ್ತಿಗಳ ಸ್ವಾಮಿಯೂ ಆಗಿರುತ್ತಾನೆ. ಹೀಗೆಂಬುದು ಕೇವಲ ಕಲ್ಪನಾಮಾತ್ರವಲ್ಲ. ಸುಷುಪ್ತಿಸ್ಥಾನದಲ್ಲಿಯೂ ಈಗ ಮನುಷ್ಯಾದಿ ಸಕಲ ಪ್ರಾಣಿಗಳ ಅನುಭವವಾಗಿದೆ. ಪ್ರಾಜ್ಞಸ್ಥಿತಿಯೇ ಆಗಿರುತ್ತದೆ. ಸುಷುಪ್ತಿಸ್ಥಾನದಿಂದ ಜಾಗ್ರತ್ಸ್ಥಿತಿ ಉಂಟಾಗುವಂತೆಯೇ ಪ್ರಳಯಸ್ಥಿತಿಯಿಂದ ಸೃಷ್ಟಿಸ್ಥಿತಿಯಾಗುವುದೆಂದು ಚಿಂತಿಸಬೇಕು. ಅವ್ಯಕ್ತರೂಪದ ಮಾಯೋಪಾಧಿಯುಳ್ಳ ಅವ್ಯಾಕೃತಾತ್ಮನು ಸೃಷ್ಟ್ಯುನ್ಮುಖನಾಗುವಂತೆ ಅದೇ ಸಮಯದಲ್ಲಿ ಅವಿದ್ಯೋಪಾಧಿಯುಳ್ಳ ಪ್ರಾಜ್ಞನು (ಜೀವಾತ್ಮನು) ಜಾಗ್ರತ್ಸ್ಥಾನಕ್ಕೆ ಬರುವನು. ಹೀಗೆ ಮಾಯಾ-ಅವಿದ್ಯಾ ಪ್ರಕೃತಿ ಎಂಬ ಶಕ್ತಿದ್ವಯಗಳು ವ್ಯಕ್ತಸ್ಥಿತಿಗೆ ಬರುವುದನ್ನು ಆತ್ಮಚೇತನನ ಆರಂಭಸ್ಥಿತಿ ಎನ್ನುತ್ತಾರೆ. ಇದಕ್ಕೆ ನಾನು ಎಂಬ ಅಂಶವು. ಈ ಶಕ್ತಿದ್ವಯದ ರೂಪವೇನೆಂದರೆ—

ಉಪಾಧಿ ಅಂದರೆ ಉಪಲಬ್ಧ್ಯಧಿಷ್ಠಾನ

(ಸೋಪಾಧಿಕಂ ಜ್ಞಾನಂ ನಿರುಪಾಧಿಕಜ್ಞಾನೇ ದ್ವಾರಂ)

ಜ್ಞಾನಶಕ್ತಿ ಮತ್ತು ಕ್ರಿಯಾಶಕ್ತಿ ಎಂದು ಎರಡು ಬಗೆಯಾಗಿವೆ. ಇವು ಯಾವಾಗಲೂ ಪ್ರಧಾನಭಾವ ಮತ್ತು ಉಪಸರ್ಜನಭಾವದಿಂದ ಇರುತ್ತವೆ. ಜ್ಞಾನವು ಪ್ರಧಾನವಾಗಿದ್ದರೆ ಕ್ರಿಯೆಯು ಉಪಸರ್ಜನವಾಗಿರುತ್ತದೆ. ಕ್ರಿಯೆಯು ಪ್ರಧಾನವಾಗಿದ್ದರೆ ಜ್ಞಾನವು ಉಪಸರ್ಜನವಾಗಿರುತ್ತದೆ. ಈ ಉಭಯಾತ್ಮಕ ಶಕ್ತಿಸಮಷ್ಟಿರೂಪದ ಅರ್ಥವೃತ್ತಿಚೇತನನೇ ಈಶ್ವರನಾಗಿರುತ್ತಾನೆ. ಈ ಉಭಯಾತ್ಮಕ ಶಕ್ತಿವ್ಯಷ್ಟಿರೂಪದ ಅರ್ಥವೃತ್ತಿಚೇತನನೇ ಜೀವಾತ್ಮನಾಗಿರುತ್ತಾನೆ. ಹೀಗೆ ಸೃಷ್ಟಿಯ ಆರಂಭದಲ್ಲೇ ಉಪಾಧಿಮೂಲಕವಾಗಿ ಜೀವ-ಈಶ್ವರ ಎಂಬ ಭೇದವು ಏರ್ಪಟ್ಟುಕೊಂಡಿರುತ್ತದೆ. ಮತ್ತು ಅನಾದಿಯಾದ ಅವಿದ್ಯಾ ಎಂಬ ಉಪಾಧಿಯು ಜೀವನಿಗೆ ಅಂಟಿಕೊಂಡಿರುವುದರಿಂದ ಅವನಲ್ಲಿ ಮತ್ತೆ ಮಾಯಾಮೋಹಪ್ರಮುಖಗಳಿರುವುದು. ಜೀವೋಪಾಧಿಯಾದ ಅವಿದ್ಯಾ ಎಂಬ ಮೂಲಪ್ರಕೃತಿಯೂ ಈಶ್ವರೋಪಾಧಿಯಾದ ಮಾಯೆ ಎಂಬ ಮೂಲಪ್ರಕೃತಿಯೂ ಸೃಷ್ಟಿಕಾಲದಲ್ಲಿ ಸಮಸಮವಾಗಿಯೇ, ಏಕಕಾಲದಲ್ಲಿ ಏಕಪ್ರಕಾರವಾಗಿಯೇ ಪರಿಣಾಮಗೊಳ್ಳುತ್ತಾ ಕಾರ್ಯೋದ್ಭವವಾಗುವುವು. ಅದರಲ್ಲಿ ಪ್ರಾಧಾನ್ಯೋಪಸರ್ಜನಭಾವವಿರುವುದಿಲ್ಲ. ಉಪಾಧಿ ಎಂದರೆ ಅತೀಂದ್ರಿಯವಾದ ಸೂಕ್ಷ್ಮ ವಸ್ತುವನ್ನು ಕಂಡುಕೊಳ್ಳುವ ದ್ವಾರ-ಉಪಾಯ-ಸ್ಥಳ ಎಂದು ತಿಳಿಯಬೇಕು. ಈಶ್ವರನು ಮಾಯೆ ಎಂಬ ಮಹೋಪಾಧಿಯುಳ್ಳವನಾದ್ದರಿಂದ ಸರ್ವಜ್ಞನು ಸರ್ವಶಕ್ತನು ಸೃಷ್ಟಿಕರ್ತನು ಆಗಿರುತ್ತಾನೆ. ಅವಿದ್ಯೆ ಎಂಬ ಕ್ಷುದ್ರೋಪಾಧಿಯ ಜೀವನು ಅಲ್ಪಜ್ಞ ಅಲ್ಪವೀರ್ಯ ಭೋಕ್ತೃ ಸಂಸಾರೀ ಆಗಿರುತ್ತಾನೆ.

ಅದ್ವೈತ ಬ್ರಹ್ಮಾತ್ಮನಲ್ಲಿ ವಾಸ್ತವವಾಗಿ ಮಾಯೆಯೂ ಇರುವುದಿಲ್ಲ. ಅವಿದ್ಯೆಯೂ ಇರುವುದಿಲ್ಲ. ಯಾ ಮಾ ಸಾ ಮಾಯಾ = ಇಲ್ಲದಿರುವುದಕ್ಕೇ ಮಾಯೆ ಎನ್ನುವರು. ಹಾಗೆಯೇ ಜ್ಞಾನಸ್ವರೂಪದ ಆತ್ಮನಲ್ಲಿ ಅವಿದ್ಯೆಯೂ ಇರುವುದಿಲ್ಲ. ನ ವಿದ್ಯತೇ ಇತ್ಯವಿದ್ಯಾ ಅವಿದ್ಯಮಾನವಾದುದೇ ಅವಿದ್ಯೆ ಎಂದು ಜ್ಞಾನವಾದ ಬಳಿಕ ತಾನೇ ಗೊತ್ತಾಗುವುದು. ಆವರೆಗೆ ಅವಿದ್ಯಾವರಣವುಳ್ಳ ಪ್ರತ್ಯಕ್ಷಪ್ರಮಾತೃವು ಅಜ್ಞಾನಿಯೇ ಆಗಿರುತ್ತಾನೆ. ಮತ್ತು ಮಾಯೆಗೆ ವಶನಾಗಿಯೇ ಇರುತ್ತಾನೆ.

ಅಧ್ಯಾರೋಪಾಪವಾದಾಭ್ಯಾಂ ನಿಷ್ಪ್ರಪಂಚಂ ಪ್ರಪಂಚ್ಯತೇ ।
ಶಿಷ್ಯಾಣಾಂ ಬೋಧಸಿದ್ಧ್ಯರ್ಥಂ ವಿಪಶ್ಚಿತ್ಕಲ್ಪಿತಃ ಕ್ರಮಃ ॥

ಮನುಷ್ಯರು ಸ್ವಾಭಾವಿಕವಾಗಿ ತಿಳಿದುಕೊಂಡಿರುವುದೇನೆಂದರೆ ನಾನು ಹುಟ್ಟಿದ್ದೇನೆ. ನಾನು ಮನುಷ್ಯ, ನಾನು ದೇಹ, ನಾನು ಕರ್ಮಕರ್ತೃ, ನಾನು ಸುಖದುಃಖಭೋಕ್ತೃ ಎಂಬುದಾಗಿ ತಮ್ಮ ಆತ್ಮನಲ್ಲಿ ಆರೋಪ ಮಾಡಿಕೊಂಡಿರುತ್ತಾರೆ. ಇದು ತಪ್ಪುತಿಳುವಳಿಕೆ. ಈ ಭ್ರಮೆಯನ್ನು ಹೋಗಲಾಡಿಸಲು ಶಾಸ್ತ್ರವು ಪ್ರಪಂಚಸೃಷ್ಟಿ ಮೊದಲಾದ ಪ್ರಕ್ರಿಯೆಗಳನ್ನು ಒತ್ತಿ ಬೋಧಿಸುವುದೇನೆಂದರೆ ನೀನು ಆತ್ಮನು. ಆತ್ಮನು ಹುಟ್ಟುವುದಿಲ್ಲ. ದೇಹವು ಆತ್ಮನಲ್ಲ. ಆತ್ಮನು ಕರ್ತೃವೂ ಅಲ್ಲ ಭೋಕ್ತೃವೂ ಅಲ್ಲ ಇತ್ಯಾದಿಯಾಗಿ ಅಪವಾದ ಮಾಡಿ ಕೇವಲಾತ್ಮಸ್ವರೂಪವನ್ನು ಬಿಡಿಸಿಕೊಡುವುದು ತಿಳಿಸಿಕೊಡುತ್ತಿರುವುದು.

ಮನುಷ್ಯರ ಮನಸ್ಸು ಮತ್ತು ಚಕ್ಷುರಾದಿ ಇಂದ್ರಿಯಗಳು ಬಹಿರ್ಮುಖವಾಗಿಯೇ ಇರುತ್ತದ್ದು ಅವು ಬಾಹ್ಯದಲ್ಲಿ ತಮ್ಮ ಮುಂದೆ ಇರುವ ಶಬ್ದ ಆಕೃತಿ ಮುಂತಾದ ವಿಷಯಗಳನ್ನು ತಿಳಿಸಬಲ್ಲವೇ ಹೊರತು ತಮಗೆ ಮೂಲವಾಗಿರುವ ತಮಗೆ ಕಾರಣ-ಆಧಾರವಾದ ಆತ್ಮನನ್ನು ಗ್ರಹಿಸಲಾರವು. ತಿಳಿಸಿಕೊಡಲಾರವು. ಸ್ವಬುದ್ಧಿಯಿಂದ ಎಷ್ಟೇ ತರ್ಕಮಾಡಿದರೂ ಆತ್ಮನ ನೆಲೆ ನಿಶ್ಚಯವಿಲ್ಲ. ಆದ್ದರಿಂದ ಈ ಆಧ್ಯಾತ್ಮಿಕ ಸೂಕ್ಷ್ಮ ವಿಷಯಗಳಲ್ಲಿ ಸಂಶೋಧಿಸಿಕೊಂಡಿರುವ ಸಿದ್ಧಾಂತಗಳನ್ನು ಜಿಜ್ಞಾಸುಗಳು ಕ್ರಮವಾಗಿ ತಿಳಿದುಕೊಳ್ಳಲೆಂದೇ ಪ್ರಪಂಚಸೃಷ್ಟಿ, ಅವಸ್ಥಾತ್ರಯ, ಪಂಚಕೋಶಪ್ರಮೇಯ, ಕಾರ್ಯಕಾರಣಭಾವ ಮುಂತಾದ ಪ್ರಕ್ರಿಯೆಗಳನ್ನು ಕಲ್ಪಿಸಿ-ರಚಿಸಿ ಪರಮಾರ್ಥತತ್ತ್ವವನ್ನು ಪ್ರತಿಪಾದನೆ ಮಾಡುವುದೇ ಸಂಪ್ರದಾಯವಾಗಿದೆ. ಹೀಗೆ ಬ್ರಹ್ಮವಿದ್ಯೆಯು ರಹಸ್ಯವಿದ್ಯೆಯೂ ಆಗಿದೆ.

ಅವ್ಯಕ್ತಪ್ರಕೃತಿಯೆಂಬ ಮಾಯಾಶಕ್ತಿ ಎಂಬ ಕಾರಣ<u>ಸಮಷ್ಟಿ</u> ಉಪಾಧಿಯುಳ್ಳ ಚೇತನನೇ ಈಶ್ವರನು. ಅವಿದ್ಯಾಕಾರ್ಯರೂಪವಾದ <u>ವ್ಯಷ್ಟಿ</u>ರೂಪ ಪಂಚಕೋಶ ಉಪಾಧಿಯುಳ್ಳ ಚೇತನನೇ ಜೀವನು.

ಸಮಷ್ಟಿ = ಒಟ್ಟು ಮೊತ್ತ.
ವ್ಯಷ್ಟಿ = ಬಿಡಿಬಿಡಿ.

❀ ಬೆಂಕಿಯೇ ಸುಡುವುದಾಗಿದ್ದರೂ ಕಾದಿರುವ ನೀರು ಸುಡುತ್ತದೆ ಎಂಬಂತೆ ಜಡಪ್ರಕೃತಿಯು ಚೇತನನಂತೆ ವರ್ತಿಸಿಕೊಂಡಿರುತ್ತದೆ.

ಪ್ರಪಂಚಸೃಷ್ಟಿಯ ಆರಂಭದಲ್ಲಿ ಅವ್ಯಾಕೃತ-ಪ್ರಾಜ್ಞ ಎಂಬ ಅಹಂವೃತ್ತಿಯ ಚಿಚ್ಚೇತನನಲ್ಲಿ ಆತ್ಮಪ್ರಕೃತಿಯು ಈಶ್ವರ-ಜೀವ ಎಂಬ ವಿಭಾಗವನ್ನುಂಟುಮಾಡಿ-ರುತ್ತದೆಂದು ಹಿಂದೆ ತಿಳಿಸಿದೆ. ಈ ವಿಭಾಗವುಂಟಾದ್ದರಿಂದಲೇ ಭೋಕ್ತೃ ಭೋಗ್ಯ ಮತ್ತು ಪ್ರೇರಕ ಎಂಬ ಭೇದವೂ ಉಂಟಾಗಿರುತ್ತದೆ. ಅಂದರೆ ಸಂಸಾರಿಗಳಾದ ಜೀವರು ಲೋಕದಲ್ಲಿ ಜೀವನ ನಡೆಸಲು ಈಶ್ವರನು ಭೋಗ್ಯವಸ್ತುಗಳನ್ನು ನಿರ್ಮಾಣಮಾಡಿಕೊಟ್ಟಿದ್ದಾನೆ. ಮಾಯಾಪ್ರಕೃತಿಪರಿಣಾಮದಿಂದ ಪ್ರಪಂಚಕಾರ್ಯೋದ್ಭವವಾಗಿದ್ದು ಇದರಿಂದ ಈಶ್ವರನ ಶಕ್ತಿ-ಮಹಿಮೆಯೇ ಪ್ರಕಟವಾಗುವುದು. ಶಕ್ತಿಯು ಯಾವಾಗಲೂ ಪರಾವಲಂಬಿ. ಸ್ವತಂತ್ರವಾಗಿರುವುದಿಲ್ಲ. ಈಶ್ವರನನ್ನೇ ಆಶ್ರಯಿಸಿಕೊಂಡಿರುತ್ತದೆ. (ಹೀಗೆ) ಈಶ್ವರನ ಸಾಂನಿಧ್ಯವಿರುವುದರಿಂದ ಶಕ್ತಿಸ್ವರೂಪವಾದ ಮಾಯೆಯು ಸ್ವಯಂ ಜಡಪ್ರಕೃತಿಯಾಗಿದ್ದರೂ ಚೈತನ್ಯ-ವುಳ್ಳದ್ದಂತೆ ಪ್ರವರ್ತಿಸುವುದಾಗಿರುತ್ತದೆ.❀ ಹೀಗೆ ಜ್ಞಾನಪ್ರಧಾನವಾದ ಮಾಯೋಪಾಧಿ-ಯಿಂದ ಈಶ್ವರನಲ್ಲಿರುವ ಜಗತ್ಸೃಷ್ಟಿಶಕ್ತಿಯು ಭೋಗ್ಯವಸ್ತುನಿರ್ಮಾಣಶಕ್ತಿಯು ವ್ಯಕ್ತವಾಗುವುದು. ಅವಿದ್ಯಾಕಾರ್ಯವಾದ ಕ್ರಿಯಾಪ್ರಧಾನವಾದ ವ್ಯಷ್ಟಿ ದೇಹೋಪಾಧಿಯಿಂದ ಜೀವರಲ್ಲಿರುವ ಭೋಕ್ತೃತ್ವ ಕರ್ತೃತ್ವ ಪ್ರಮಾತೃತ್ವಾದಿ ಶಕ್ತಿಗಳು ವ್ಯಕ್ತವಾಗುವುವು.

ಪರಮಾರ್ಥತತ್ತ್ವವನ್ನರಿಯದಿರುವವನ ದೃಷ್ಟಿಯಿಂದ ಬ್ರಹ್ಮಾತ್ಮನೇ ಮಾಯೆಗೂ ಮತ್ತು ಅವಿದ್ಯೆಗೂ (ಸಂಸಾರಾನುಭವಕ್ಕೂ) ಆಶ್ರಯನೂ ಮತ್ತು ವಿಷಯನೂ ಆಗಿರುವನು. ತತ್ತ್ವವಿಚಾರಮಾಡಿಕೊಂಡು ವಾಸ್ತವಸ್ಥಿತಿಯನ್ನರಿತುಕೊಂಡಾಗ ಅವಿದ್ಯೆಯೂ ಮಾಯೆಯೂ ಇಲ್ಲದ ತನ್ನ ನಿಜಾತ್ಮಸ್ವರೂಪವು ಶುದ್ಧ ಬುದ್ಧ ಮುಕ್ತಸ್ವಭಾವದ ಬ್ರಹ್ಮಪರಮಾ-ನಂದವೆಂದೇ ಅರಿವಾಗುವುದು. ಈವರೆಗಿನ ವಿಚಾರದ ಸಾರಾಂಶವೇನೆಂದರೆ-ಈಶ್ವರನು ಮಾಯೆಯಿಂದ ಪ್ರಪಂಚಸೃಷ್ಟಿ ಮಾಡಿರುವನು. ಅಂದಾಗ ಸೃಷ್ಟಿಯು ಕನಸಿನಂತೆ ರೂಪಿಯಾಗಿದೆ. ಮಿಥ್ಯೆಯಾಗಿದೆ. ಈ ಮಿಥ್ಯಾಪ್ರಪಂಚದಲ್ಲಿ ಜೀವಸಂಸಾರವೆಂದರೆ -

ಗೀತಾ - ೩ - ೨೭ ಅಹಂಕಾರವಿಮೂಢಾತ್ಮಾ = ಕಾರ್ಯಕರಣಸಂಘಾತಾತ್ಮಪ್ರತ್ಯಯಃ = ಅಹಂಕಾರಃ

ಆತ್ಮಸ್ವರೂಪಜ್ಞಾನವಿಲ್ಲದ ಜೀವನು ತನ್ನ ಪೂರ್ವಕರ್ಮಫಲವಾಗಿ ಪ್ರಾಪ್ತವಾದ ದೇಹಾದಿ ಕಾರ್ಯಕರಣಗಳಲ್ಲಿ ಅಹಂ ನಾನು ಎಂದು ಅವುಗಳನ್ನು ತನ್ನೊಡನೆ ಒಂದಾಗಿಸಿಕೊಂಡು ಅಭೇದವಾಗಿ ತಿಳಿದುಕೊಂಡಿರುವುದೇ ಅಭಿಮಾನಿಸಿಕೊಂಡಿರುವುದು ಸ್ವಾಭಾವಿಕವಾಗಿದೆ. ನೈಸರ್ಗಿಕವಾಗಿದೆ. ಇದೇ ಅಹಂಕಾರವು ಪ್ರಮಾಣವಿಲ್ಲದ್ದು, ಪರೀಕ್ಷೆಯಿಲ್ಲದ್ದು, ಉದ್ದೇಶವಿಲ್ಲದ್ದು ಉಂಟಾಗಿರುವ ಈ ಬಗೆಯ ಜ್ಞಾನವು ಕನಸಿನಂತೆಯೇ ಭ್ರಮೆ. ಎಂದು ಅಜ್ಞಾನಿಗಳಿಗೆ ಗೊತ್ತಾಗುವುದಿಲ್ಲ. ಈ ಮಿಥ್ಯಾಜ್ಞಾನವುಂಟಾಗುವುದಕ್ಕೆ ಕಾರಣವೇನೆಂದರೆ - ಆತ್ಮ ಅನಾತ್ಮಗಳಲ್ಲಿರುವ ಭೇದವನ್ನು ಅರಿಯದಿರುವುದೇ ಆಗಿದೆ. ಆದ್ದರಿಂದಲೇ ಅವನು ಅಧ್ಯಾಸ ಮಾಯಾಮೋಹಕ್ಕೆ ವಶನಾಗಿರುವನು. ಅಂದರೆ ಮಾಯಾನಿರ್ಮಿತವಾದ ನಾಮರೂಪ ಕರ್ಮಮಯವಾದ ಪ್ರಪಂಚದಲ್ಲಿ ವಿಪರೀತ (ವ್ಯತ್ಯಸ್ತ) ಬುದ್ಧಿಯನ್ನು ತಾಳುತ್ತಾನೆ. ದೇಹಾದಿ ಜಗದ್ವಸ್ತುಗಳು ಅನೃತ ಜಡ ದುಃಖರೂಪವಾಗಿದ್ದರೂ ಅವನ್ನು ಸತ್ಯವೆಂದೂ, ಶಕ್ತಿಮತ್ಚೇತನವೆಂದೂ, ಪ್ರಿಯ ಸುಖಮಯವೆಂದೂ ತಿಳಿದುಕೊಳ್ಳುತ್ತಾನೆ. ಭ್ರಮೆಗೆ ಒಳಗಾಗಿರುತ್ತಾನೆ. ಆದ್ದರಿಂದಲೇ ಹಸಿವು, ಬಾಯಾರಿಕೆ, ಜನ್ಮ ಮರಣ. ಶೋಕ ಮೋಹ ಇತ್ಯಾದಿ ಸಂಸಾರಕ್ಲೇಶಗಳನ್ನು ಅನುಭವಿಸುತ್ತಾನೆ. ಹೀಗೆ ಜೀವನು ಸಂಸಾರ ಮಾಯಾಬಂಧನಕ್ಕೆ ಸಿಕ್ಕಿಕೊಂಡಿರುತ್ತಾನೆ. ಈಶ್ವರನಾದರೋ - ನಿತ್ಯ-ಸ್ವರೂಪಜ್ಞಾನವುಳ್ಳವನೇ ಆಗಿರುವುದರಿಂದ ಮಾಯೆಯು ಅವನಿಗೆ ಬಂಧನ-ವನ್ನುಂಟುಮಾಡಲಾರದು. ಅವನು ನಿತ್ಯಮುಕ್ತ ಸ್ವತಂತ್ರನೇ ಆಗಿರುವನು.

ಈಶ್ವರೋಪಾಧಿಯಾದ ಮಾಯಾಶಕ್ತಿಯ ಪ್ರಕಾರ-ಅಂಶಗಳು ಅನಂತವಾಗಿರು-ತ್ತವೆ. ಆ ಅಂಶಗಳು ತಮ್ಮ ಕಾರ್ಯಕರಣಸಾಮರ್ಥ್ಯದಲ್ಲಿ ತಾರತಮ್ಯವುಳ್ಳವುಗಳಾಗಿರುತ್ತವೆ. ಇಂತಹ ವಿಶೇಷರೂಪದ ಉಪಾಧಿಯ ಚೇತನವನ್ನು ಕಾರ್ಯಬ್ರಹ್ಮ ಶಬಲಬ್ರಹ್ಮ ಎಂಬ ನಾಮರೂಪಗಳಿಂದ ನಿರ್ದೇಶಿಸುತ್ತಾರೆ. ಆದ್ದರಿಂದಲೇ ಲೋಕದಲ್ಲಿ

ಶಿವ. ವಿಷ್ಣು. ದುರ್ಗೆ. ಗಣಪತಿ. ಲಕ್ಷ್ಮೀ. ಸರಸ್ವತೀ. ಕುಮಾರಸ್ವಾಮಿ. ಸೂರ್ಯಭಗವಾನ್. ಇತ್ಯಾದಿ ದೇವತಾಭೇದಗಳ ವ್ಯವಹಾರವುಂಟಾಗಿರುತ್ತದೆ. ಈ ವಿಶಿಷ್ಟಶಕ್ತಿರೂಪದ ಮಹಾ-ಮಾಯಾ ಉಪಾಧಿಯ ಚೇತನವನ್ನು ಈಶ್ವರ-ಭಗವಾನ್ ಎಂದು ತಿಳಿಯಬೇಕು. ದೇವತಾಭೇದಗಳು ಕೇವಲ ಉಪಾಧಿಯಾದ ಶಕ್ತ್ಯಂಶಗಳ ಮೂಲಕವೇ ಹೊರತು. ಈಶ್ವರಚೇತನನಲ್ಲಿ ಯಾವ ಭೇದವೂ ಇರುವುದಿಲ್ಲ. ಎಲ್ಲರೂ ಈಶ್ವರನೇ. ಏಕರೀತಿ ಉಪಾಸ್ಯರೇ ಆಗಿರುತ್ತಾರೆ. ಭೇದವೆಣಿಸುವುದು ಮಹಾಪಾಪ.

ಇನ್ನು ಅದರಂತೆಯೇ ಅವಿದ್ಯೋಪಾಧಿಯಿಂದ ವಿಶೇಷರೂಪ ಹೊಂದಿದ ಜೀವ-ಚೇತನರ ಪರಿಸ್ಥಿತಿ ಏನೆಂದರೆ — ಅವರಿಗೆ ಸಂಸಾರೋದ್ಭವ ಮಾಡುವ ಅವಿದ್ಯಾ ಶಕ್ತಿಯೂ ಮತ್ತು ಅದರ ಅಂಶಗಳು ಅನಂತವಾಗಿರುತ್ತವೆ. ಅವುಗಳ ಸ್ವರೂಪ ಮತ್ತು ಕಾರ್ಯಕರಣಸಾಮರ್ಥ್ಯಗಳಲ್ಲಿ ಅನೇಕ ತಾರತಮ್ಯಗಳಿರುತ್ತವೆ. ಜೀವ ಚೇತನವಸ್ತುವಿನಲ್ಲಿ ಭೇದವೇನೂ ಇರುವುದಿಲ್ಲ. ಆದರೆ ಉಪಾಧಿಯಾದ ದೇಹ ಭೇದಗಳ ಮೂಲಕ ಪ್ರತಿಯೊಬ್ಬ ವ್ಯಕ್ತಿಯಲ್ಲಿ ಭೇದವು ಇರುವುದು. ಆದ್ದ-ರಿಂದಲೇ ಲೋಕದಲ್ಲಿ ಮಹಾತ್ಮ. ದುರಾತ್ಮ. ಸುಗುಣೀ. ದುರ್ಗುಣೀ. ಸುಖೀ. ದುಃಖೀ ಮೂಢ. ಚತುರ. ಇತ್ಯಾದಿ ಭೇದಗಳು. ಜಾಗ್ರತ್. ಸ್ವಪ್ನ. ಸುಷುಪ್ತಿ ಅವಸ್ಥೆಗಳು, ಮತ್ತು ಸಾಂಸಾರಿಕ ಅನುಭವ-ವೇದನೆಗಳು ಬೇರೆ ಬೇರೆಯಾಗಿ ಇರುವುದು ಕಂಡು ಬರುತ್ತಿರುವುದು. ಈ ಭೇದಗಳೆಲ್ಲವೂ ಕೇವಲ ಉಪಾಧಿಮೂಲಕವಾಗಿಯೇ ವ್ಯವಹಾರಕ್ಕಾಗಿರುತ್ತವೆ, ಪಾರಮಾರ್ಥಿಕವಾದುವುಗಳಲ್ಲ. ಆದ್ದರಿಂದ ~~[illegible]~~ ನಿಜವು ತತ್ತ್ವವಿಚಾರ ಮಾಡಿಕೊಂಡಾಗಲೇ ಗೊತ್ತಾಗುವುದು ಅನ್ಯಥಾ ತಿಳಿಯುವುದಿಲ್ಲ.

ಈವರೆಗಿನ ವಿಚಾರ ವಿವರಣೆಯಿಂದ ತತ್ತ್ವಜ್ಞಾನ ಮಾಡಿಕೊಳ್ಳದ ಜೀವರ ಘೋರ ದುಃಸ್ಥಿತಿಯನ್ನು ಸಂಸಾರಕ್ಲೇಶ ಪ್ರಸಂಗವನ್ನು ತಿಳಿಸಿದ್ದಾಯಿತು. ಇದೇ ಅಧ್ಯಾಯದ

ಅಧ್ಯಾರೋಪಾಪವಾದಾಭ್ಯಾಂ ಜ್ಞಾನತತ್ತ್ವನಿರ್ಣಯ: ।

ಇದಕ್ಕೆ ಅಪವಾದವೇನೆಂದರೆ — ನೇತಿ ನೇತ್ಯಾತ್ಮಾ । ಅಕಾಯಂ ಅಸ್ನಾವಿರಂ.
ಇತ್ಯಾದಿಯಾಗಿ ಉಪನಿಷತ್ತುಗಳು ಆತ್ಮಸ್ವರೂಪವನ್ನು ಪ್ರತಿಪಾದಿಸಿವೆ. ಆತ್ಮ ಅನಾತ್ಮ ಸ್ವರೂಪಗಳನ್ನು ವಿಚಾರ ಮಾಡಿಕೊಂಡರೆ ವಿವೇಕವಾದಾಗ ನಮಗೂ ತಿಳಿಯುತ್ತದೆ. ನಾನು ದೇಹವಲ್ಲ, ಇಂದ್ರಿಯ ಅಲ್ಲ. ಮನಸ್ಸು ಅಲ್ಲ. ಬುದ್ಧಿಯೂ ಅಲ್ಲ. ಪ್ರಾಣವೂ ಅಲ್ಲ. ಅಹಂಕಾರವೂ ಅಲ್ಲ. ಎಲ್ಲದರ ಸಾಕ್ಷೀ ಚೇತನಮಾತ್ರ ನಾನು = ಆತ್ಮ ಎಂಬ ನಿಶ್ಚಯವೇ ಅಪವಾದ.

ಈ ಚಿಂತನೆಯ ಒಳ ಸಾರಾಂಶವೇನೆಂದರೆ — ಸುಷುಪ್ತಿಸ್ಥಾನದಿಂದ ಜಾಗ್ರತ್ ಸ್ಥಿತಿಗೆ ಅಥವಾ ಸ್ವಪ್ನಸ್ಥಿತಿಗೆ ಬಂದೊಡನೆ ಪ್ರಪಂಚದ ಸೃಷ್ಟಿ ಪ್ರಸಂಗವಾಗಿದೆ. ಈ ಅವಸ್ಥೆಗಳಲ್ಲಿ ಅನುಸ್ಯೂತನಾಗಿ ಆತ್ಮನು ಸಾಕ್ಷಿಯಾಗಿ ನಿತ್ಯನಾಗಿರುತ್ತಾನೆ. ಆ ಅವಿದ್ಯೆಯ ಭ್ರಾಂತಿಯಲ್ಲಿ ನಿರಂತರವಾಗಿ ಅಸ್ತಿಯೆನಿಸಿಕೊಂಡಿರುವ ವ್ಯಷ್ಟಿ ಸಮಷ್ಟಿರೂಪದ ಆತ್ಮ-ಪ್ರಕೃತಿ ಪ್ರತ್ಯಯ ಸಂಪಾದೋಪಾಧಿ ಮೂಲಕವಾಗಿಯೇ ಈಶ್ವರ, ಜೀವ, ಜಗತ್, ಭೋಕ್ತೃ ಭೋಗ್ಯ, ಪ್ರೇರಕ, ಎಂಬಿತ್ಯಾದಿ ವ್ಯವಹಾರಗಳು ನಡೆಯುತ್ತವೆ. ಈ ವಿಚಾರಪರಿಯಿಂದ ಬದ್ಧ, ಮುಕ್ತ ಎಂಬ ವ್ಯವಸ್ಥೆಯು ವಿಕಲ್ಪಿತನನ್ನು ಸಂಭವಿಸುತ್ತದೆ. ಇದು ತಿಳಿಯುವುದು ವಿದ್ಯಯಾ ಮುಕ್ತ: । ಅವಿದ್ಯಯಾ ಬದ್ಧ: ।

ವಸ್ತುಸ್ವರೂಪ ವಿವೇಕ-ನಿಶ್ಚಯವೇ ವಿದ್ಯೆಯು, ಅದಿಲ್ಲದಿರುವುದೇ ಅವಿದ್ಯೆಯು.

ಅವಿದ್ಯೆಯಿಂದಿರುವವನೇ ಬದ್ಧನು. ಸ್ವಸ್ವರೂಪವನ್ನರಿತವನೇ ಮುಕ್ತನು.

॥ ಓಂ ॥

ಆತ್ಮನು ಮನಸ್ಸಿನಲ್ಲಿ ನಾನು ಎಂದು ತೋರಿಕೊಳ್ಳುತ್ತಾನೆ. ಆತ್ಮ ಎಂದೇ ತೋರಿಕೊಳ್ಳುವುದಿಲ್ಲ ಏಕೆಂದರೆ — ಮನಸ್ಸು ಅನ್ನಮಯವಾಗಿದೆ. ಸಾಕ್ಷಾದಾತ್ಮನನ್ನು ಪ್ರಕಾಶಿಸುವ ಸಾಮರ್ಥ್ಯ ಅದಕ್ಕಿಲ್ಲ. ಆತ್ಮನು ತಾನೇ ಪ್ರಕಾಶಿಸಬೇಕು. ಆದ್ದರಿಂದ ತರ್ಕ-ವಿಚಾರದಿಂದ ತಾನೇ ತೋರಿಕೊಳ್ಳಬೇಕು.

ವಿಚಾರವೆಂಬ ಬೆಳಕಿನಿಂದಲೇ (ಪ್ರಮಾಣದಿಂದ) ತೋರುವನು

ಪ್ರಾಜ್ಞಾಯ ಶಂಕರಾಚಾರ್ಯಗುರವೇ ಜ್ಞಾನಚಕ್ಷುಷೇ ।
ಭಜತಾಂ ಜ್ಞಾನದಾತ್ರೇ ಚ ಸದಾನಂದಾಯ ತೇ ನಮಃ ॥

ಪಂಚಾಮೃತವಾಕ್ಯಸಂದೇಶ = ಅಧ್ಯಾತ್ಮವಿಚಾರಧಾರೆ.

೧. ಅಹಮ್ ಅಸ್ಮಿ = ನಾನು ಇದ್ದೇನೆ. ೨. ಅಹಮ್ ಆತ್ಮಾ = ನಾನು ಆತ್ಮನು.
೩. ಅಯಮಾತ್ಮಾ ಬ್ರಹ್ಮ = ಈ ಆತ್ಮನು ಬ್ರಹ್ಮವೇ.
೪. ಸರ್ವಂ ಖಲ್ವಿದಂ ಬ್ರಹ್ಮ = ಇದು ಎಲ್ಲವೂ ಬ್ರಹ್ಮವೇ ಆಗಿದೆ.
೫. ಅಹಂ ಬ್ರಹ್ಮಾಸ್ಮಿ = ನಾನು ಬ್ರಹ್ಮವೇ ಆಗಿದ್ದೇನೆ.

ಈ ಐದು ವಾಕ್ಯಗಳ ಗಂಭೀರವಾದ ತಾತ್ಪರ್ಯಾರ್ಥವನ್ನು ವಿಚಾರಪೂರ್ವಕ ಮನನ ಮಾಡಿಕೊಂಡು ನಿಶ್ಚಯಜ್ಞಾನ ಮಾಡಿಕೊಂಡರೆ, ತಾನು ಮರ್ತ್ಯನೆಂದುಕೊಂಡಿರುವ ಮನುಷ್ಯನಿಗೆ ತನ್ನ ತಪ್ಪುತಿಳಿವಳಿಕೆ ಅರಿವಾಗುವುದಲ್ಲದೆ, ಅವನು ತನ್ನ ಅವಿದ್ಯಾಮೋಹನಿದ್ರೆಯಿಂದ ಎಚ್ಚೆತ್ತುಕೊಂಡು, ತಾನು ನಿಜದಲ್ಲಿ ನಿತ್ಯಶುದ್ಧಬುದ್ಧಮುಕ್ತ ಪರಮಾನಂದಬ್ರಹ್ಮನೇ ಎಂದು ಗೊತ್ತುಮಾಡಿಕೊಳ್ಳುವನು. ಈ ಪರಮಾರ್ಥಜ್ಞಾನದಿಂದ ಪರಮಪುರುಷಾರ್ಥವನ್ನೇ ಪಡೆದು ಕೃತಕೃತ್ಯನೂ ಅಮೃತನೂ ಆಗುವನು. ಈ ವಿಷಯ ವಿಚಾರ ಹೀಗಿರುವುದು –

೧. ಅಹಮ್ ಅಸ್ಮಿ = ನಾನು ಇದ್ದೇನೆ. ತಾನಿದ್ದೇನೆಂಬ ಜ್ಞಾನವು ಎಲ್ಲರಿಗೂ ಇದ್ದೇ ಇರುವುದು. ಈ ಅರಿವು ಸ್ವಾಭಾವಿಕವಾದದ್ದು ತಪ್ಪುತಿಳಿವಳಿಕೆಯಲ್ಲ. ಮಿಥ್ಯೆ ಅಲ್ಲ. ನಿಶ್ಚಯಜ್ಞಾನವಾಗಿರುತ್ತದೆ. ಸಂಶಯವಿಲ್ಲ. ಯಾವನಾದರೊಬ್ಬನು ತಾನು ಇಲ್ಲ ಎಂ(ದು) ತಿಳಿದರೆ ಹಾಗೆ ತಿಳಿದವನು ತಾನು ಇರುತ್ತಾನೆ. ಇದ್ದೇನೆಯೋ ಇಲ್ಲವೋ ಎಂದು ಸಂಶಯಪಟ್ಟರೆ ಹಾಗೆ ಸಂಶಯಗೊಂಡವನು ತಾನು ಇದ್ದೇ ಇರುತ್ತಾನೆ. ನಿಜಾನುಭವವನ್ನೇ ಹೊಂದಿದ ತನ್ನನ್ನು, ತಾನಿರುವುದನ್ನು ನಿರಾಕರಿಸಲಾಗಲೀ ಹೊಸದಾಗಿ ಸಂಪಾದಿಸುವುದಕ್ಕಾಗಲೀ ಯಾರಿಗೂ ಎಂದಿಗೂ ಶಕ್ಯವಿಲ್ಲ. ನಾನಿದ್ದೇನೆಂಬ ನಿತ್ಯಾನುಭವವು ಮನುಷ್ಯಾದಿ ಸಕಲಪ್ರಾಣಿಗಳಿಗೂ ಸದಾ ಇದ್ದೇ ಇರುವುದು. ದೇಶಕಾಲಗಳು ಬದಲಾಗಬಹುದು. ✓ಅವಸ್ಥೆಗಳು ವ್ಯತ್ಯಾಸ ಹೊಂದಬಹುದು. ಆದಾಗ್ಯೂ ತಾನಿರುವ ಜ್ಞಾನವು ತಪ್ಪುವುದಿಲ್ಲ.

ಜಾಗರ-ಬಾಲ್ಯ ಇದ

ತಾನಿರುವ ಜ್ಞಾನವು ದೃಢವಾಗಿರುವುದರಿಂದಲೇ ಜನರು ತಮಗೆ ಬೇಕಾದುದನ್ನು ಧೈರ್ಯವಾಗಿ ಸಂಪಾದಿಸುತ್ತಲೂ ಬೇಡದುದನ್ನು ದೂರಮಾಡಿಕೊಳ್ಳುತ್ತಲೂ ಇರುತ್ತಾರೆ. ಈ ನಾನು ಇದ್ದೇನೆಂಬ ಅನುಭವಕ್ಕೆ ಪ್ರಮಾಣವೇನೂ ಬೇಕಾಗಿರುವುದಿಲ್ಲ. ಪ್ರಮಾಣವಿಲ್ಲವೂ ಇಲ್ಲ. ಅದಕ್ಕೆ ನಾನಿದ್ದೇನೆಂಬ ಅನುಭವವೇ ಪ್ರಮಾಣ. ಅಂದರೆ ಸ್ವಯಂ ಪ್ರಮಾಣವು. ಈ ಜ್ಞಾನವು ಇಂದ್ರಿಯ ಮೂಲಕ ಉಂಟಾಗುವುದಿಲ್ಲ. ಆದ್ದರಿಂದ ಇದನ್ನು ಪ್ರತ್ಯಕ್ಷವೆನ್ನುವಂತಿಲ್ಲ. ತನಗೆ ತಾನು ದೂರವಲ್ಲದ್ದರಿಂದ, ವಿಷಯವು ಅಲ್ಲದ್ದರಿಂದ ಈ ಜ್ಞಾನವು ಪರೋಕ್ಷಜ್ಞಾನವೂ ಆಗಿರುವುದಿಲ್ಲ. ಅಂದಾಗ ನಾನಿದ್ದೇನೆಂಬ ಅನುಭವವನ್ನು ಅಪರೋಕ್ಷವೆಂದೇ ಒಪ್ಪಬೇಕು. ನಾನು ಇದ್ದೇನೆಂಬ ಜ್ಞಾನಕ್ಕೆ ದೇಶಕಾಲಗಳ ಸಂಬಂಧವಾಗಲೀ, ಕ್ರಿಯಾ ಕಾರಕಗಳ ಅಪೇಕ್ಷೆಯಾಗಲೀ ಇರುವುದಿಲ್ಲ. ಇಂತು ನಿರಪೇಕ್ಷವಾಗಿರುವುದರಿಂದಲೂ, ಸ್ವಯಂಪ್ರಮಾಣ, ಸ್ವಯಂಸಿದ್ಧವಾಗಿರುವುದರಿಂದಲೂ ಈ ಇರುವು ಕ್ರಿಯಾರೂಪವಾದುದಲ್ಲ. ವಸ್ತುರೂಪವೇ ಆಗಿರುತ್ತದೆ. ಜಗತ್ಪದಾರ್ಥಗಳು ಬೇರೆ ಬೇರೆ ಅವಸ್ಥೆಗಳಲ್ಲಿ ಬಾಧೆಗೊಂಡಂತೆ ಈ ಅನುಭವವು ಬಾಧಿತವಾಗುವುದಿಲ್ಲ. ಜಾಗರಾದಿ ಮೂರು ಅವಸ್ಥೆಗಳಲ್ಲಿ ನಾನಿದ್ದೇನೆಂಬ ಅರಿವು ಬಾಧೆಯಿಲ್ಲದೇ ನಿತ್ಯವೂ ಸತ್ಯವೂ ಆಗಿರುತ್ತದೆ. ಈಗ ಇಲ್ಲಿ ನಾನು ಇರುವುದಕ್ಕೆ ದೇಶಕಾಲಗಳ ಸಂಬಂಧ ಇರುವಂತೆ ಕಂಡರೂ ಅದು ನಿಜವಲ್ಲ. ಏಕೆಂದರೆ- ಈ ಎಚ್ಚರದ ದೇಶಕಾಲಗಳೇ ಬೇರೆ. ಕನಸಿನ ದೇಶಕಾಲಗಳೇ ಬೇರೆ ಆಗಿರುತ್ತವೆ. ನಿದ್ರಾಸ್ಥಿತಿಯಲ್ಲಿ ದೇಶಕಾಲಗಳ ಸ್ಥಿತಿಯೇ ಇರುವುದಿಲ್ಲ. ಆ ಎಲ್ಲಾ ಅವಸ್ಥೆಗಳಲ್ಲಿ ತಾನಿರುವುದು ಖಚಿತವಾಗಿರುತ್ತದೆ. ಇದರಿಂದ ತಿಳಿಯುವುದೇನೆಂದರೆ- ನಮ್ಮ ಅವಸ್ಥೆಯಲ್ಲಿ ದೇಶಕಾಲಗಳು ಇರತಕ್ಕವು. ಅವುಗಳಲ್ಲಿ ನಾವು ಇರುವೆವೆಂದು ತಿಳಿಯುವುದು ತಪ್ಪುತಿಳುವಳಿಕೆಯಾಗಿರುತ್ತದೆ. ಅದು ಅಜ್ಞಾನವೇ. ಕಾಲಪ್ರವಾಹವು ನಿರಂತರವಾಗಿರುವುದೆನ್ನುವುದೂ ನಿಜವಲ್ಲ. ಭ್ರಮೆಯಿಂದ ಹಾಗೆ ತೋರುವುದು. ನಮ್ಮ ಅನುಭವ

ಪ್ರಮಾಣದಿಂದ ನಿಜವನ್ನು ಗೊತ್ತುಮಾಡಿಕೊಳ್ಳಬೇಕು. ಸುಮ್ಮನೆ ನಂಬುವುದು ತತ್ತ್ವಜ್ಞಾನ ಎನಿಸದು. ಹೀಗೆ ನಮ್ಮ ಅವಸ್ಥೆಗಳಲ್ಲಿ ದೇಶಕಾಲಗಳಸ್ಥಿತಿ ಎಂದು ನಿಶ್ಚಯವಾಗುವುದರಿಂದ ಜಾಗ್ರದಾದ್ಯವಸ್ಥೆಗಳಲ್ಲೂ, ಬಾಲ್ಯಾದ್ಯವಸ್ಥೆಗಳಲ್ಲೂ ನಮ್ಮ ಇರುವು ನಿಶ್ಚಯವಾಗಿರುವಂತೆ ಮರಣ ಪೂರ್ವಜನ್ಮ ಪುನರ್ಜನ್ಮಗಳಲ್ಲೂ ಇದ್ದೇ ಇರುವುದೆಂದು ವಿದಿತವಾಗುವುದು. ಅಂದಾಗ ನಾನು ಹುಟ್ಟಿದ್ದೇನೆ. ಸಾಯುವೆನು ಎಂಬುದು ಭ್ರಮೆಯೇ ಸರಿ. ಆದ್ದರಿಂದ ಹೊಸದಾಗಿ ಹುಟ್ಟದ ನಾನು ಅಂತ್ಯವಿಲ್ಲದವನೇ, ಮರಣವಿಲ್ಲದವನೇ ಆಗಿರುತ್ತೇನೆಂಬ ನಿಶ್ಚಯ. ದೇಹವು ಹುಟ್ಟುವುದು. ಸಾಯುವುದು. ಆದರೆ ನಿತ್ಯನಾಗಿರುವ ನಾನು, ಅಂದರೆ ಆಗಮಾಪಾಯಿಯಲ್ಲದ, ಹೇಯ ಉಪಾದೇಯನಲ್ಲದ ನಾನು ನಿತ್ಯವರ್ತಮಾನಸ್ವಭಾವದವನಾಗಿರುತ್ತೇನೆಂದು ಶಾಶ್ವತವೆಂದು ತಿಳಿಯಬೇಕು. ಈಗ ಇಲ್ಲಿ ನಾನು ದೇಹಸಂಬಂಧಿ ಎಂದು ತೋರಿದರೂ ಅದು ನಿಜವಲ್ಲ ಎಂಬುದು ಮುಂದೆ ವಿಚಾರವಿಮರ್ಶೆಯಿಂದ ಗೊತ್ತಾಗುವುದು. ಆದ್ದರಿಂದ ನಾನು ಅನಿತ್ಯನಲ್ಲ, ಬೇರೆ ಪ್ರಮಾಣದಿಂದ ಸಿದ್ಧನಾಗದೆ ಸ್ವಾನುಭವದಿಂದಲೇ ಇರತಕ್ಕವನಾದ ನಾನು ಅಪ್ರಮೇಯನಾಗಿದ್ದೇನೆ. ಸತ್ಯನಾಗಿದ್ದೇನೆ. ಮಿಥ್ಯೆ ಅಲ್ಲ. ಪರಿಚ್ಛಿನ್ನನಲ್ಲ. ಅಂದರೆ ಅಂಕೆ. ಅಳತೆ. ಹಿಂದೆ. ಮುಂದೆ. ಮೇಲೆ. ಕೆಳಗೆ. ಒಳಗೆ ಹೊರಗೆ ಎಂಬ ಯಾವ ಭೇದವೂ ಇಲ್ಲದವನಾಗಿರುವೆನು. ವೃದ್ಧಿಕ್ಷಯವಿಲ್ಲದ, ಪರಿಣಾಮ ವಿಕ್ರಿಯೆಯಿಲ್ಲದ ನಾನು ಶಬ್ದಾದಿ ಬಾಹ್ಯವಿಷಯಗಳು ಎಲ್ಲವನ್ನು ಅರಿಯುವ ಸ್ವಭಾವವುಳ್ಳವನಾಗಿರುವುದರಿಂದ ನಾನು ಚೇತನನಾಗಿರುತ್ತೇನೆ. ಘಟಪಟವಸ್ತುಗಳಂತೆ ಜಡಪದಾರ್ಥವಲ್ಲ. ಚೈತನ್ಯಪೂರ್ಣನಾಗಿದ್ದೇನೆ. ಎಂದರಿಯಬೇಕು. ಇಷ್ಟು ವಿಚಾರದಿಂದ ನಿಶ್ಚಯಮಾಡಿಕೊಳ್ಳಬೇಕಾದ್ದೇನೆಂದರೆ — ನಾನು ನಿತ್ಯವರ್ತಮಾನಸತ್ಯ ಹಾಗೂ ನಿತ್ಯಚೈತನ್ಯಪೂರ್ಣ ಚೇತನನು ಎಂದು ನಿರ್ಣಯಮಾಡಿಕೊಳ್ಳಬೇಕು ಸಿದ್ಧವಾಯಿತು.

ಹೀಗೆ ನಿಶ್ಚಯಮಾಡಿಕೊಂಡ ಬಳಿಕ ಈಗ ಇಂತಹ ಸ್ವಭಾವದ ನಾನು ಯಾರು? ನಿಜವಾದ ನನ್ನ ಸ್ವರೂಪವೇನು? ಎಂಬುದನ್ನು ವಿಚಾರಮಾಡಿಯೇ ಕಂಡುಕೊಳ್ಳಬೇಕು.

ವಿಚಾರ ಮಾಡದೇ ಸುಮ್ಮನೆ ತಿಳಿಯುವುದಿಲ್ಲ. ಈಗ ಸ್ವಾಭಾವಿಕವಾಗಿ ಎಲ್ಲರೂ ತಿಳಿದುಕೊಂಡಿರುವ ಪರಿ ಏನೆಂದರೆ - ಈ ಸ್ಥೂಲದೇಹದ ಮೂಲಕ ಕೊಂಡು ಒಳಗಿನ ಚೈತನ್ಯ ಪ್ರಜ್ಞೆ ಒಟ್ಟು ಸೇರಿಸಿಕೊಂಡು ಈ ರಾಶಿಯನ್ನು ನಾನು ಎಂದು ಭಾವಿಸಲಾಗುತ್ತದೆ. ಮುಖ್ಯವಾಗಿ ದೇಹವನ್ನೇ ಕುರಿತದ್ದಾಗಿರುತ್ತದೆ. ಆದರೆ ಇದು ಸರಿಯಲ್ಲ. ತಪ್ಪು ತಿಳುವಳಿಕೆಯಾಗಿದೆ. ನಿಜವನ್ನು ಅರಿಯದಿರುವುದರಿಂದ ಹೀಗೆ ತಪ್ಪು ತಿಳಿವು ಉಂಟಾಗಿರುವುದು. ಈ ನಾನು ಎಂಬ ಜ್ಞಾನಾನುಭವದಲ್ಲಿ ಇರುವ ಸೂಕ್ಷ್ಮವನ್ನು, ಪ್ರಕಾರವಿರುವುದನ್ನು ಗಮನಿಸಬೇಕು. ಅದನ್ನೇ ಈ ಎರಡನೆಯ ವಾಕ್ಯವು ತಿಳಿಸುವುದು.-

೨. ಅಯಮ್ ಆತ್ಮಾ = ನಾನು ಆತ್ಮನು ಎಂದು. ಮನುಷ್ಯನು ಸ್ವಾಭಾವಿಕವಾಗಿ ತಿಳಿದುಕೊಂಡಿರುವುದೇನೆಂದರೆ - ನಾನು ದೇಹ ಗಂಡಸು ಅಥವಾ ಹೆಂಗಸು. ನನಗೆ ಇಂತಹ ಹೆಸರು ಎಂದು ಮುಂತಾಗಿ ನಂಬಿಕೊಂಡಿರಲಾಗುತ್ತಿದೆ. ಈ ವಾಕ್ಯವು ನಾನು ಆತ್ಮನು ಎಂದು ತಿಳಿಸುತ್ತದೆ. ಅಂದರೆ ಈಗ ವ್ಯವಹಾರದಲ್ಲಿ ತಿಳಿದುಕೊಂಡಿರುವಂತೆ ನಾನು ಎಂಬುದು ಮನಸ್ಸಿನ ಭಾವನೆ ಅಲ್ಲ. ದೇಹವೂ ಅಲ್ಲ. ಅಹಂಕಾರವಲ್ಲ. ನಾನು ಚೇತನ ಆತ್ಮನು, ಸತ್ಯವಸ್ತು ಎಂದು ತಿಳಿಸಿಕೊಡುತ್ತಿದೆ. ಈ ವಾಕ್ಯವು ಇಲ್ಲದುದನ್ನು ತಿಳಿಸುತ್ತಿಲ್ಲ. ನಿಜವಾದುದನ್ನೇ ಬೋಧಿಸುತ್ತಿರುವುದೆಂದು ಪರೀಕ್ಷಿಸಿ ವಿಚಾರಮಾಡಿಕೊಂಡರೆ ತಿಳಿಯುವುದು. ನಾನು ಎಂದು ಬಗೆಯುವಾಗಲೆಲ್ಲಾ ಅದರಲ್ಲಿ ತಾನು ಎಂಬುದೂ ಸೇರಿಕೊಂಡಿರುವುದನ್ನು ಗಮನಿಸಬೇಕು. ಈ ನಾನು ಮತ್ತು ತಾನು ಎಂಬ ಪ್ರಜ್ಞೆ (ತಿಳಿವು)ಯಲ್ಲಿ ಬಂದು ನಾನು ದೇಹ ಎಂಬುದು ಅಹಂಕಾರವಾಗಿದೆ. ಮನೋಭಾವವಾಗಿದೆ. ಎರಡನೆಯದು ತಾನು = ಸ್ವಯಂ ಎಂಬುದು ಆತ್ಮವಸ್ತುವಾಗಿರುತ್ತದೆ. ಈ ಸ್ವಯಂ ಎಂಬ ಆತ್ಮನೇ ನಿಜವಾದ ನಾನು ಎಂದು ಕಂಡುಕೊಳ್ಳಬೇಕು. ಅಹಂಕಾರವು ನಾನಲ್ಲ. ಮನೋಭಾವವು ನಾನಲ್ಲ. ಮನಃಕಲ್ಪಿತ ಮಿಥ್ಯಾತ್ಮನು ನಾನಲ್ಲ. ಅಂದಾಗ ಈಗ ಸ್ವಾಭಾವಿಕವಾಗಿ ತಿಳಿದುಕೊಂಡಿರುವಂತೆ ದೇಹೇಂದ್ರಿಯ ಪ್ರಾಣಾದಿಗಳ ರಾಶಿಯು ನಾನಲ್ಲ. ನಾನು ಗಂಡಸು ಅಲ್ಲ. ಹೆಂಗಸು ಅಲ್ಲ. ಹೆಣ್ಣು. ಗಂಡು ಎಂಬುದು ದೇಹಕ್ಕೆ

ನೋಡಿದ್ದು. ಆತ್ಮನನ್ನು ನೋಡಿದ್ದಲ್ಲ. ನಾನು ಆತ್ಮನಾಗಿದ್ದೇನೆ. ಹುಟ್ಟಿದ ಮನುಷ್ಯನಲ್ಲ. ಲೋಕವ್ಯವಹಾರದಲ್ಲಿ ನೋಡಿದ ಪದಾರ್ಥವು ನಾನಲ್ಲ. ವ್ಯವಹಾರವನ್ನು ಮೀರಿದ ಲೋಕೋತ್ತರ ವಸ್ತುವು ನಾನು ಆತ್ಮಚೇತನ ಆಗಿದ್ದೇನೆ. ನಾನು ಅಲೌಕಿಕ ದಿವ್ಯವಸ್ತು ಎಂದು ತಿಳಿಯಬೇಕು. ನಾನು ಎಂಬ ಗ್ರಹಣೆ=ತಿಳುವಿನಲ್ಲಿ ಎರಡು ಪ್ರಕಾರವಾಗಿ ರೂಪವು ಬಂದಿರುವುದು. ನಾನು ಎಂಬುದು ಅಹಂಕಾರ. ಮತ್ತೊಂದು ನಾನು=ಸ್ವಯಂ ಎಂಬುದು ಆತ್ಮ. ಅಹಂಕಾರವು ದೇಹೇಂದ್ರಿಯಾದಿ ಪಕ್ಷಕ್ಕೆ, ವ್ಯವಹಾರಕ್ಕೆ ಸೇರಿದ್ದಾಗಿರುತ್ತದೆ. ಅದು ಜಡಪ್ರಕೃತಿ ಪರಿಣಾಮ ರೂಪವಾದುದು. ಅದು ಜಡವೇ. ಆತ್ಮನು ಚೇತನ ದಿವ್ಯವಸ್ತುವಾಗಿದೆ. ನಾನು ಚೇತನನಾಗಿದ್ದೇನೆ. ಅಂದರೆ ಆತ್ಮನಾಗಿದ್ದೇನೆಂದು ಕಂಡು-ಕೊಳ್ಳಬೇಕು. ಅಂದಾಗ ಜಡಪದಾರ್ಥಗಳಾದ ಭೌತಿಕಗಳಾದ ದೇಹೇಂದ್ರಿಯಾದಿಗಳು ಬೇರೆ. ಅಭೌತಿಕ ದಿವ್ಯ ಚೇತನವಸ್ತುವಾದ ನಾನು ಬೇರೆ. ಚೇತನನಾದ ನಾನು ದೇಹೇಂದ್ರಿಯ ಸಂಘಾತಕ್ಕೆ ಸೇರದೆ ಅವುಗಳ ಅಂತರಾತ್ಮನು ಪ್ರತ್ಯಗಾತ್ಮನಾಗಿರುತ್ತೇನೆ. ದೇಹೇಂದ್ರಿಯಾದಿಗಳು ಯಾವಾಗಲೂ ಚೇತನಾತ್ಮನೊಡನೆಯೇ ಇರುವುದರಿಂದ ಈ ಆತ್ಮ ಅನಾತ್ಮರ ಭೇದವು ಸುಲಭವಾಗಿ ತಿಳಿಯುವುದಿಲ್ಲ. ಮತ್ತು ಆತ್ಮಸನ್ನಿಧಿಯಲ್ಲಿ ದೇಹೇಂದ್ರಿಯಗಳು ಚೈತನ್ಯಗೊಂಡಿರುವುದರಿಂದಲೂ ಭೇದಗ್ರಹಣೆಯು ಸುಲಭವಲ್ಲ. ಕಾದನೀರು. ಕಾದಲೋಹ. ಅವುಗಳಲ್ಲಿ ಸುಡುವುದು ಬೆಂಕಿಯೇ ಆದರೂ ನೀರು ಸುಡುತ್ತದೆ. ಲೋಹ ಸುಡುತ್ತದೆ ಎಂಬ ಭಾವನೆ-ವ್ಯವಹಾರವುಂಟಾಗುವುದಷ್ಟೆ.) ಹಾಗೆಯೇ ಜ್ಞಾನ ಕರ್ಮ ವ್ಯವಹಾರವು ಆತ್ಮಚೈತನ್ಯಮೂಲಕವೇ ಆಗಿರುತ್ತಿದ್ದರೂ ತತ್ತ್ವಜ್ಞಾನವಿಲ್ಲದಿರುವಾಗ ಮನಬುದ್ಧಿ ದೇಹವೇ ಆತ್ಮಚೇತನ ಎಂಬ ಭ್ರಾಂತಿಯ ಜ್ಞಾನವುಂಟಾಗುತ್ತಿರುವುದು. ಆತ್ಮನನ್ನು ಆತ್ಮನಲ್ಲದ ಅನಾತ್ಮ ದೇಹಾದಿಗಳನ್ನು ವಿವೇಚಿಸಿಕೊಂಡು ವಿವೇಕಮಾಡಿಕೊಂಡಾಗ ದೇಹಾದಿ ಅಹಂಕಾರಪರ್ಯಂತ ಬಂದು

ನಾನಲ್ಲ. ಅವು ಬೇರೆ ಜಡಪದಾರ್ಥಗಳು ಅನಾತ್ಮಗಳು. ನಾನು ಬೇರೆ. ನಾನು ಚೇತನಾತ್ಮನಾಗಿದ್ದೇನೆ ಎಂದು ಜ್ಞಾನವುಂಟಾಗುವುದು. ಹೀಗೆ ವಿವೇಕವುಂಟಾದಾಗ ಜಾಗ್ರದಾದಿ ಅವಸ್ಥೆಗಳಲ್ಲಿ ತೋರುವ ದೇಹೇಂದ್ರಿಯಾದಿಗಳನ್ನು, ಈ ಬಾಹ್ಯಪ್ರಪಂಚವನ್ನು ನೋಡುವ, ಅರಿಯುವ ನಾನು ಚೇತನನಾಗಿದ್ದೇನೆ ಎಂದು ~~ಜ್ಞಾನವುಂಟಾಗುವುದು~~ ನಿಶ್ಚಯವಾಗುವುದು. ಚೇತನನೇ ಅರಿಯುವ ಸಾಕ್ಷಿಯು. ನಾನು ಸಾಕ್ಷಿಮಾತ್ರ, ಅರಿಯಲ್ಪಡುವವನಲ್ಲ. ವಿಕಾರದಲ್ಲಿ ನೋಡಲ್ಲ, ನೋಡುವವನಲ್ಲ. ದೇಹಾದಿಗಳು ಮತ್ತು ಜಗತ್ಪದಾರ್ಥಗಳು ಜಡವಾಗಿದ್ದು ನನ್ನ ಜ್ಞಾನಕ್ಕೆ ವಿಷಯಗಳಾಗಿರುತ್ತವೆ. ಅವು ಏನನ್ನು ತಿಳಿಯಲಾರವು. ತಿಳಿಯುವವನು ನಾನೇ. ಆದ್ದರಿಂದ ನಾನು ಆತ್ಮ: ಆತ್ಮನೇ ಚೇತನನು. ಚೇತನ ಎಂದರೆ ಚೈತನ್ಯಪೂರ್ಣ ಎಂದರ್ಥ. ಚೈತನ್ಯ ಎಂದರೆ ಚಿಚ್ಛಕ್ತಿ. ಶಕ್ತಿಯು ಚಿಚ್ಛಕ್ತಿ ಜಡಶಕ್ತಿ ಎಂದು ಎರಡು ಬಗೆಯಾಗಿರುತ್ತದೆ. ಇವನ್ನೇ ಜ್ಞಾನಶಕ್ತಿ ಕ್ರಿಯಾಶಕ್ತಿ ಎಂದು ಕರೆಯುತ್ತಾರೆ. ಚಿದ್ವಸ್ತುವು ಸ್ವಯಂಪ್ರಕಾಶವು ಜ್ಞಾನಾನುಭವಸ್ವಭಾವವು ಆಗಿರುತ್ತದೆ. ಇಂತಹ ಆತ್ಮನೊಡನೆ ಯಾವಾಗಲೂ ಇದ್ದುಕೊಂಡಿರುವ ಅಹಂಕಾರಾದಿ ದೇಹೇಂದ್ರಿಯಾದಿಗಳಲ್ಲೆಲ್ಲಾ ಆತ್ಮಶಕ್ತಿಯು ವ್ಯಾಪ್ತವಾಗಿ ತುಂಬಿರುವುದರಿಂದ ದೇಹಾದಿಗಳು ಚೈತನ್ಯಪೂರ್ಣವಾಗಿರುತ್ತವೆ. ಆದಾಗ್ಯೂ ನಿಜದಲ್ಲಿ ಆತ್ಮನೇ ಎಲ್ಲವನ್ನು ಅರಿಯುವವನಾಗಿರುವುದರಿಂದ ಅವನು ವಿಷಯಿ ಆಗಿರುತ್ತಾನೆ. ಅವನಿಗೆ ದೇಹಾದಿಗಳೆಲ್ಲವು ವಿಷಯಗಳಾಗಿರುತ್ತವೆ. ಅವು ಅನಾತ್ಮಗಳೇ. ಜಡಗಳೇ. ನಾನು ಚೈತನ್ಯಪೂರ್ಣನಾದ ಆತ್ಮನು. ಎಲ್ಲವನ್ನು ಅರಿಯುತ್ತೇನೆ. ಇದು ದೇಹ. ಇವು ಪ್ರಾಣ. ಇವು ಇಂದ್ರಿಯಗಳು. ಇದು ಮನಸ್ಸು. ಇದು ಬುದ್ಧಿ. ಇದು ಅಹಂಕಾರ ಎಂಬುದಾಗಿ ಅವನ್ನು ವಿಷಯೀಕರಿಸಿಕೊಂಡು ನಾನು ಅರಿಯುತ್ತಿದ್ದೇನೆ. ಸಾಕ್ಷೀಚೇತನನಾಗಿದ್ದೇನೆ. ದೇಹಾದಿಗಳಲ್ಲೆಲ್ಲಾ ನಾನು ವ್ಯಾಪಿಸಿಕೊಂಡಿರುತ್ತಾ ಅವನ್ನು ಪ್ರಕಾಶಪಡಿಸುತ್ತಲೂ ಚೇತನಗೊಳಿಸುತ್ತಲೂ ಇರುವೆನು. ದೇಹಾದಿಗಳಿಗೆ ನಾನು ಸೇರಿದವನಲ್ಲ, ವಿಲಕ್ಷಣನಾಗಿದ್ದೇನೆ.

ಪ್ರಕಾಶ್ಯವ ಪದಾರ್ಥಗಳನ್ನು ಪ್ರಕಾಶಪಡಿಸುವ ದೀಪ-ಬೆಳಕು ಬೇರೆಯಾಗಿ
ಇರುವುದಷ್ಟೆ! ಸುಡುವ ಬೆಂಕಿಯು ಸೌದೆಯಿಂದ ಬೇರೆಯಾಗಿರುವುದಷ್ಟೆ!
ಹಾಗೆಯೇ ಅನಾತ್ಮ ವಿಷಯಗಳಿಗಿಂತ ವಿಷಯಿ ಆತ್ಮನು ಪೃಥಕ್ಕಾಗಿರುವನು.
ಅವನು ಅಲೌಕಿಕನಾಗಿದ್ದು ಅತೀಂದ್ರಿಯನು ಅಂದರೆ ಇಂದ್ರಿಯಗೋಚರನಲ್ಲ.
ಆಕಾಶದಂತೆ ರೂಪರಹಿತನೂ ಸೂಕ್ಷ್ಮನೂ ವ್ಯಾಪಕನೂ ಆಗಿರುತ್ತಾನೆ. ಹೊರಗಡೆ
ಮತ್ತು ದೇಹದ ಒಳಗಡೆ ಪರಿಪೂರ್ಣನಾಗಿ ಇದ್ದುಕೊಂಡು ತಾನು ತೋರಿಕೊಳ್ಳಲು ಅದರ
ಸ್ಥಳವಾದ ಮನಸ್ಸಿನಲ್ಲಿ ನಾನು ನಾನು ಎಂದೇ ಹೊಳೆಯುತ್ತಾನೆ. ತೋರಿಕೊಳ್ಳುತ್ತಾನೆ.
ಹೀಗೆ ಜ್ಞಾನರೂಪದಿಂದ ಹೊಳೆಯುವ ಆತನನ್ನು ಸ್ವಯಂ ನಾನು ಆತ್ಮಾ ಎಂದು
ಮಂಗಡನಿ ತಿಳಿದುಕೊಳ್ಳಬೇಕು. ಅವನೇ ದೇಹಾದಿಗಳನ್ನು ಚೇತನಗೊಳಿಸುತ್ತಿರುವ
ಆತ್ಮಾ: ಅಂತರ್ಯಾಮಿ ಎಂದು ಕಂಡು ಹಿಡಿಯಬೇಕು. ಆತ್ಮಾ ಎಂದರೆ ಎಲ್ಲವನ್ನು
ವ್ಯಾಪಿಸಿಕೊಂಡಿದ್ದು, ಪ್ರಕಾಶಪಡಿಸುತ್ತ, ಅರಿಯುವ ಸತ್ಯಸ್ವರೂಪ ಎಂದರ್ಥ.
ಎಲ್ಲವನ್ನು ಅರಿಯುವವನು ಚೇತನ ಆತ್ಮನೇ, ಜಡವಾದ ಅನಾತ್ಮವು ಅರಿಯುವುದಿಲ್ಲ. ಅವನನ್ನು ಅರಿಯುವವರು ಯಾರೂ
ಇಲ್ಲ. ಅಂತಹ ಆತ್ಮನೇ ನಾನು. ಅಂದಾಗ ಕನ ಇಲ್ಲ ನಾನು ಮನುಷ್ಯ. ಹುಟ್ಟಿದ್ದೇನೆ.
ಗಂಡಸು, ಹೆಂಗಸು ಎಂದಾಗಿ ತಿಳಿದುಕೊಂಡಿರುವುದೆಲ್ಲವೂ ತಪ್ಪು ತಿಳುವಳಿಕೆಯೇ.
ಭ್ರಾಂತಿಯೇ ಎಂಬುದು ಗೊತ್ತಾಗುವುದು. ಹುಟ್ಟಿರುವುದು ದೇಹ. ನಾನು-ಆತ್ಮನು
ಹೊಸದಾಗಿ ಹುಟ್ಟುವವನಾಗಿಲ್ಲ. ಬೆಳಕು ಕತ್ತಲೆ ಅಲ್ಲ. ಕತ್ತಲೆಯು ಬೆಳಕಲ್ಲ.
ಅವು ಪರಸ್ಪರ ಪರಿಣಾಮಗೊಳ್ಳುವುದಿಲ್ಲ. ಅಭಿನ್ನವಾಗಿಯೂ ಇರುವುದಿಲ್ಲ. ಹಾಗೆಯೇ ಜಡ ಚೇತನಗಳಾದ,
ಪರಸ್ಪರ ವಿರುದ್ಧವಾದ, ಆತ್ಮ ಅನಾತ್ಮಗಳು ಬೆರತುಕೊಂಡಿರುವುದಿಲ್ಲ. ಪರಿಣಾಮ
ಗೊಳ್ಳುವುದೂ ಇಲ್ಲ. ಅಭೇದವಾಗಿರುವುದು ಅಸಂಭವ ನ್ಯಾಯ-ಸ್ವಭಾವಗಳು ಹೀಗಿರುವುದರಿಂದ ಆತ್ಮನು=ನಾನು
ದೇಹವಲ್ಲ. ಇಂದ್ರಿಯಗಳಲ್ಲ. ಪ್ರಾಣವಲ್ಲ. ಮನೋ-ಬುದ್ಧಿಗಳಲ್ಲ. ನಾನು ನಾನು ಎಂದು

ಬಗೆಯುವ ಅಹಂಕಾರವು ನಾನಲ್ಲ. ಎಂಬೀರೀತಿ ಅನಾತ್ಮಗಳನ್ನೆಲ್ಲಾ ದೂರವಿಟ್ಟು ಅಂದರೆ ಅಪವಾದಮಾಡಿಕೊಂಡು ತಾನು ಆತ್ಮನು ಬೇರೆ ಎಂದು ಪೃಥಕ್ಕಾಗಿ ನಿಂತು, ನಿಶ್ಚಯದಲ್ಲಿ ನಿಲ್ಲಿಸಿದರೆ ಆಗ ಗೊತ್ತಾಗುವುದೇನೆಂದರೆ - ತಾನು ದೇಹಾದಿಗಳನ್ನು ನೋಡುವ, ಅರಿಯುವ, ಸಾಕ್ಷಿ ಚೇತನ ಎಂದು ದೃಢವಾಗುವುದು. ಮತ್ತು ನಾಮ ರೂಪಗಳಿಲ್ಲದ ತಾನು ಆಕಾಶದಂತೆ ನಿರವಯವ, ನಿರಂಶ, ಪರಿಣಾಮ, ಕ್ರಿಯೆ, ವಿಕ್ರಿಯೆ ಇಲ್ಲದವ, ನಿರ್ಮಲ, ಅಸಂಗ, ಎಂದು ತಿಳಿಯುವುದು. ಸದಾ ಸಾಕ್ಷಿ ಸ್ವರೂಪದವನೇ ಎಂದು ಗೊತ್ತಾಗುವುದು. ಜಾಗ್ರತ್ ಸ್ವಪ್ನ ಸುಷುಪ್ತಿಗಳು ಒಂದಾದಮೇಲೊಂದು ಬಂದು ಹೋಗುತ್ತಿರುವುದೂ ತನಗೆ ತಿಳಿಯುತ್ತಿರುತ್ತದೆ. ಬಾಲ್ಯಾದಿ ಅವಸ್ಥೆಗಳೂ ಬರುವುದೂ ತೊಲಗುವುದೂ ಸದಾ ಇರುವ ತನಗೆ ಗೋಚರವಾಗುತ್ತದೆ. ಹೀಗೆ ತಾನು ಸಾಕ್ಷಿಮಾತ್ರನೆಂದು ನಿಶ್ಚಯ ಮಾಡಿಕೊಂಡಾಗ ಮತ್ತು ತಿಳಿಯುವುದೇನೆಂದರೆ - ಸ್ವಪ್ನದಲ್ಲಿ ತಾನು ನೋಡಿದ, ಮಾಡಿದ, ವಸ್ತುಗಳು, ಲಾಭನಷ್ಟಗಳು, ಸುಖದುಃಖಗಳು, ಕಾರ್ಯ ವ್ಯವಹಾರಗಳ ಸಂಬಂಧ (ಲೇಪ-ಅಂಟು) ಆತ್ಮನಾದ ತನಗೆ ಹೇಗೆ ಇರುವುದಿಲ್ಲವೋ ಹಾಗೆಯೇ ಈ ಜಾಗ್ರತ್ಕಾಲದಲ್ಲಿಯೂ ಮಾಡಿದ, ಅನುಭವಿಸಿದ, ಪುಣ್ಯ ಪಾಪ ಕರ್ಮಗಳ ಸಂಬಂಧವೂ ತನಗೆ ನಿಜವಾಗಿ ಇರುವುದಿಲ್ಲೆಂದು ನಿಶ್ಚಯಮಾಡಿಕೊಳ್ಳಬೇಕು. ನಿಜವು ಹೀಗಿರುವುದರಿಂದ ನಾನು ಆತ್ಮನು ಲೋಕೋತ್ತರ ವಸ್ತು ಎಂದು ನಿಶ್ಚಯವೇ ಸಿದ್ಧವಾಗುವುದು.

ಈ ಬಾಹ್ಯದ ಲೋಕವ್ಯವಹಾರವು ಆತ್ಮನಿಗೆ ಸಂಬಂಧಪಟ್ಟಿಲ್ಲ. ವ್ಯವಹಾರವು ಮಾತ. ಮನಸ್ಸು ಇಂದ್ರಿಯ ಮತ್ತು ದೇಹ ಇವುಗಳಿಂದ ನಡೆಯುತ್ತಿರುತ್ತದೆ. ಬುದ್ಧಿಯಿಂದ ತಿಳಿಯುವುದು. ಚಿತ್ತದಿಂದ ಚಿಂತಿಸುವುದು. ಅಹಂಕಾರದಿಂದ ಭಾವಿಸುವುದು. ಮನಸ್ಸಿನಿಂದ ಆಲೋಚಿಸುವುದು. ಕಣ್ಣಿನಿಂದ ನೋಡುವುದು, ಕಿವಿಯಿಂದ ಕೇಳು.

ವುದು, ತ್ವಕ್ಕಿನಿಂದ ಸ್ಪರ್ಶಿಸುವುದು. ಮೂಗಿನಿಂದ ಮೂಸುವುದು, ನಾಲಗೆಯಿಂದ ಆಸ್ವಾದಿಸುವುದು ಮತ್ತು ಮಾತನಾಡುವುದು, ಪ್ರಾಣದಿಂದ ಜೀವಿಸುವುದು. ಕಾಲಿನಿಂದ ನಡೆದಾಡುವುದು. ಕೈಗಳಿಂದ ಕೆಲಸಮಾಡುವುದು. ಆತ್ಮನ ಸನ್ನಿಧಿ ಇರುವುದರಿಂದ ಹೀಗೆ ಸಕಲ ಕ್ರಿಯಾವ್ಯವಹಾರಗಳು ದೇಹ ಇಂದ್ರಿಯಗಳಿಂದಲೇ ನಡೆಯುತ್ತಿರುತ್ತವಾದ್ದರಿಂದ ಅವಕ್ಕೇ ಸೇರಿದವಾಗಿರುತ್ತವೆ. ಆತ್ಮನಿಗೆ ಸೇರಿರುವುದಿಲ್ಲ. ಅಂತೆಯೇ ಹುಟ್ಟು ಸಾವು ದೇಹಕ್ಕೆ ಸೇರಿದ್ದು. ಹಸಿವು ಬಾಯಾರಿಕೆಗಳು ಪ್ರಾಣಕ್ಕೆ ಸೇರಿದ್ದು. ಶೋಕಮೋಹಗಳು ಚಿತ್ತಕ್ಕೆ ಸೇರಿದ್ದು. ಸುಖ ದುಃಖವೇದನೆಗಳು ಮನಸ್ಸಿಗೇ ಸೇರಿದ್ದು. ಇವುಗಳೊಂದಿಗೆ ಸಂಬಂಧವು ಆತ್ಮನಿಗಿರುವುದಿಲ್ಲ. ಆದ್ದರಿಂದ ಆತ್ಮನು ಸದಾ ಅವಿಕಾರೀ, ನಿಷ್ಕ್ರಿಯನು, ಸ್ವಪ್ರಕಾಶಕನು ಅಸಂಗನು. ಹೊಸದಾಗಿ ಹುಟ್ಟದ ಆತ್ಮನು ಆಗಮ-ಅಪಾಯ ಅಲ್ಲ. ಹೇಯ-ಉಪಾದೇಯ ಅಲ್ಲ. ವೃದ್ಧಿ ಕ್ಷಯಗಳು ಆತ್ಮನಿಗಿಲ್ಲ. ಅವನು ನಿತ್ಯ ಸತ್ಯ ಅಚ್ಯುತನು. ಸ್ವತಸ್ಸಿದ್ಧ ಅಪ್ರಮೇಯನು. ಇಂತಹ ಪರಮಸ್ವಭಾವದ ಆತ್ಮನೇ ನಾನು ನಿತ್ಯಾನುಭವಸ್ವರೂಪನೆಂದು ತಿಳಿದು ನಿಶ್ಚಯಮಾಡಿಕೊಳ್ಳಬೇಕು. ವಿಚಾರ ವಿವೇಕಮಾಡಿಕೊಳ್ಳದಿರುವಾಗ ತನಗೆ ದೇಹಸಂಘಾತದೊಡನೆ ಆರೋಪ-ಅನ್ಯೋನ್ಯಾಧ್ಯಾಸವಾಗಿರುವುದರಿಂದ ನಿಜವು ತಿಳಿದಿರುವುದಿಲ್ಲ. ಆತ್ಮ ಅನಾತ್ಮ ವಿವೇಕದಿಂದ ನಿಜಾತ್ಮನಲ್ಲಿ ನೆಲೆನಿಂತಾಗ ನಾನು ಸ್ವಯಂ ನಿರಂಜನ ಆತ್ಮನೇ ಎಂದು ತಿಳಿಯುವುದು. ಇವಿಷ್ಟು ವಿಚಾರಗಳು ವಿದ್ಯಾವಿಷಯಗಳಾಗಿರುತ್ತವೆ. ವಿದ್ಯೆ ಎಂದರೆ ನಿಜವಾಗಿರುವ ವಸ್ತು ಹೇಗಿರುವುದೋ ಇದ್ದುದು ಇದ್ದಂತೆ ಅರಿತುಕೊಂಡು ನಿಶ್ಚಯ ಮಾಡಿಕೊಳ್ಳುವುದೇ ವಿದ್ಯೆಯು. ಹಾಗಿಲ್ಲದೇ ತಪ್ಪಾಗಿ ತಿಳಿದುಕೊಂಡಿರುವುದೇ ಅವಿದ್ಯೆ-ಅಜ್ಞಾನವಾಗಿರುತ್ತೆ.

ವಿಚಾರ ವಿವೇಕಮಾಡಿಕೊಂಡಿರದ ಜನರು ತಮ್ಮನ್ನು ತಪ್ಪಾಗಿ ತಿಳಿದುಕೊಂಡಿರುತ್ತಾರೆ. ಅಜ್ಞಾನಿಗಳಾದ ಅವರು ಆತ್ಮ ಅನಾತ್ಮರನ್ನು (ತನ್ನನ್ನು ದೇಹವನ್ನು)

ಕಲ್ಪನೆ ಮಾಡಿಕೊಂಡು ನಾನು ಹುಟ್ಟಿದ್ದೇನೆ. ನಾನು ಗಂಡು, ನಾನು ಹೆಣ್ಣು, ನಾನು ದಪ್ಪ, ನಾನು ಕೃಶ, ಅಶಕ್ತ, ಶಕ್ತ, ಬುದ್ಧಿವಂತ, ದಡ್ಡ, ಕರ್ತ, ಭೋಕ್ತೃ, ಮರ್ತ್ಯ, ಸಂಸಾರಿ ಎಂಬೀರೀತಿ ತಿಳಿದುಕೊಂಡು ಅದನ್ನೇ ನಂಬಿಕೊಂಡಿರುತ್ತಾರೆ. ಮತ್ತು ಅಜ್ಞಾನಕಾಲದಲ್ಲಿ ತಮ್ಮ ಸ್ವರೂಪವನ್ನು ಕಲ್ಪಿಸಿಕೊಂಡು, ತಮ್ಮ ಸ್ವರೂಪವನ್ನರಿಯದೇ ಬಾಹ್ಯವ್ಯವಹಾರದಲ್ಲೇ ಮುಳುಗಿರುತ್ತಾರೆ, ಭ್ರಾಂತರಾಗಿರುತ್ತಾರೆ ತಮ್ಮ ಆತ್ಮನನ್ನೇ ಮರೆತಿರುತ್ತಾರೆ. ಇದೇ ಸಂಸಾರ ಬಂಧನ, ಇದೇ ಅಧ್ಯಾರೋಪ. ಇದಕ್ಕೆ ಅತೀತವಾದದ್ದು ಇಂತಿರುವುದು —

ನಿಜದಲ್ಲಿ ಆತ್ಮನು ಈ ಲೋಕಕ್ಕೂ ಈ ವ್ಯವಹಾರಕ್ಕೂ ಸಂಬಂಧಪಟ್ಟವನಲ್ಲ. ದೇಹೇಂದ್ರಿಯಾದಿಗಳು ನಾನಲ್ಲ. ಅದು ನನ್ನ ಸ್ವರೂಪವಲ್ಲ. ನಾನು ಆತ್ಮನು, ಕೇವಲ ಚೈತನ್ಯಸ್ವಭಾವದ ನಿತ್ಯಸಾಕ್ಷಿ ಮಾತ್ರ. ಆಕಾಶದಂತೆ ಅಸಂಗ, ಪರಿಪೂರ್ಣ ವ್ಯಾಪ್ತನಾಗಿರತಕ್ಕವನು. ಮನುಷ್ಯಾದಿ ಸಕಲ ಪ್ರಾಣಿಗಳಲ್ಲಿ ಅವನೇ ಜೀವಾತ್ಮನು. ಅವನೇ ಪರಮಾತ್ಮನಾಗಿದ್ದಾನೆ. ಒಬ್ಬನೇ ಆತ್ಮನಿರುವನು. ಅನೇಕ ಆತ್ಮರಿರುವುದಿಲ್ಲ. ಸರ್ವರ ಆತ್ಮನು ಒಬ್ಬನೇ. ಇಂತಹ ಲೋಕೋತ್ತರ ತತ್ತ್ವವಾದ ಪರಮಾತ್ಮನನ್ನು ಅರಿತುಕೊಂಡರೆ ತನ್ನ ನಿಜಸ್ವರೂಪವನ್ನು ಅರಿತರೆ ಈ ಸಂಸಾರದಿಂದ ಬಿಡುಗಡೆಯಾಗುವುದೆಂದು ನಮ್ಮ ಭಾರತೀಯ ತತ್ತ್ವಶಾಸ್ತ್ರದ ಅಮೋಘ ಉಪದೇಶವಾಗಿದೆ. ಇಂತಹ ಪರಮ ಪುರುಷಾರ್ಥವು ಬೇರೆ ಎಂತಹ ಶ್ರೇಷ್ಠ ಧರ್ಮಕರ್ಮಗಳಿಂದಲೂ ದೊರೆಯುವುದಿಲ್ಲ.

ಇಂತಿರುವ ಅತ್ಯಂತ ಗೂಢಗಂಭೀರ ವಿಚಾರವನ್ನು ಪದೇಪದೇ ಮನನಮಾಡಿಕೊಳ್ಳುತ್ತಾ ನಿದಿಧ್ಯಾಸನ ಮಾಡಿಕೊಳ್ಳಬೇಕು. ಈ ಆತ್ಮನು ಸ್ವಯಂಸಿದ್ಧ ಅಂದರೆ ಅಪ್ರಮೇಯ. ಅಂದರೆ ಪ್ರಮಾಣವನ್ನು ಅರಿಯುವುದಕ್ಕೆ ಮೊದಲೇ ಸಿದ್ಧನಾಗಿರುವವನು. ಆದ್ದರಿಂದ ಆತ್ಮನು ಸ್ವತಃಸಿದ್ಧನಾದ ಸಮಸ್ತ ಪ್ರಮಾಣಭಾವನೇ ಆಗಿರುತ್ತಾನೆ. ಎಂದು ದೃಢಮಾಡಿಕೊಂಡು ಬಳಿಕ ಈಗ ಮೂರನೆಯ ವಾಕ್ಯದ ಅರ್ಥವನ್ನು ಚಿಂತಿಸೋಣ —

೩. ಅಯಮಾತ್ಮಾ ಬ್ರಹ್ಮ = ಈ ಆತ್ಮನು ಬ್ರಹ್ಮವೇ. ಎಂಬುದು ರಹಸ್ಯ-ಉಪದೇಶವಾಗಿರುತ್ತದೆ. ರಹಸ್ಯ ಎಂದರೆ ಗುಟ್ಟು ಎಂದರ್ಥ. ಇದು ಏಕೆ ಗುಟ್ಟು ಎಂದರೆ —

ಈ ಬೈಬಲ್ಲು. ಕುರಾನು. ಗ್ರಂಥಸಾಹೇಬು ಮುಂತಾದ ಮತಗ್ರಂಥಗಳಲ್ಲಿ ಈ ವಿಚಾರ ಸಿಕ್ಕುವುದಿಲ್ಲ. ೩೩

ಈ ವಿಷಯವು ಎಲ್ಲೆಂದರಲ್ಲಿ - ಪೇಟೆ ಸಂತೆಗಳಲ್ಲಿ ದೊರೆಯುವುದಿಲ್ಲ. ಮನುಷ್ಯನಿಗೆ ಸ್ವತಃ ತಿಳಿಯುವುದಿಲ್ಲ. ಅವನ ಮನ ಬುದ್ಧಿ ಜ್ಞಾನಸಾಧನಗಳು ಈ ವಿಚಾರವನ್ನು ತಿಳಿಸಿಕೊಡಲಾರವು. ಬಲ್ಲವರು ತಿಳಿಸಿಕೊಟ್ಟಾಗಲೇ ತಿಳಿಯುವಂತಹ ವಿಚಾರವಿದು. ಆದ್ದರಿಂದಲೇ ಗುಟ್ಟು ಎನ್ನಲಾಗುತ್ತದೆ. ಇಂತಹ ಲೋಕದ ಜನರಿಗೆ ತಿಳಿಯದಿರುವ ಅತ್ಯಂತ ಸತ್ಯವಾದ, ಹಿತಕರವಾದ ವಿಷಯವನ್ನು ಶ್ರೀವೇದಮಾತೆಯು ಉಪದೇಶಿಸಿರುವ ಮಾತು - ಈ ಆತ್ಮನು ಬ್ರಹ್ಮವೇ ಎಂದು. ಈ ವಾಕ್ಯದ ಅರ್ಥವನ್ನು ತಿಳಿಯೋಣ -

ಆತ್ಮ ಎಂಬ ಶಬ್ದ ಶಬ್ದಾರ್ಥವು ಅಲೌಕಿಕವೆಂದು ಮೇಲೆ ಪ್ರತಿಪಾದಿಸಿರುತ್ತೆ. ಹಾಗೆಯೇ ಬ್ರಹ್ಮ ಎಂಬ ಶಬ್ದ ಶಬ್ದಾರ್ಥವು ಲೋಕೋತ್ತರವಾಗಿರುವುದೆಂದು ತಿಳಿಯಬೇಕು. ಆದ್ದರಿಂದ ಅದನ್ನೇ ಮೊದಲು ವಿಚಾರಪೂರ್ವಕ ನಿಶ್ಚಯ ಮಾಡಿಕೊಳ್ಳುವುದು ಉಚಿತವಾಗಿದೆ. ಬೃಹ. ಬೃಹಿ ಎಂಬ ಧಾತುವಿನಿಂದ ಬ್ರಹ್ಮ ಶಬ್ದವು ಉಂಟಾಗಿದೆ. ಆ ಬೃಹಿ ಧಾತುವಿಗೆ ವೃದ್ಧಿ ಎಂಬ ಅರ್ಥವಿರುತ್ತದೆ. ವೃದ್ಧಿ ಎಂದರೆ ದೊಡ್ಡದಾಗಿ ಬೆಳೆದುಕೊಂಡಿರುವುದು ಎಂದರ್ಥ. ಈ ಅರ್ಥಕ್ಕೆ ಸ್ವಲ್ಪವೂ ಸಂಕೋಚ ಮಾಡದೇ ಪೂರ್ಣ ಸಂಪೂರ್ಣಾರ್ಥವನ್ನು ಗ್ರಹಿಸಿದಾಗ ಬ್ರಹ್ಮ ಶಬ್ದಕ್ಕೆ ಎಲ್ಲಾ ಪ್ರಕಾರದಿಂದಲೂ ದೊಡ್ಡದು, ನಿರತಿಶಯ ಮಹಾಚೇತನವಸ್ತು ಎಂದರ್ಥವಾಗುವುದು. ಚೇತನವಸ್ತುವಾದ್ದರಿಂದಲೇ ಅನುಭವಗೋಚರವಾಗಿರುವಂತಹ ವಸ್ತು ಎಂದು ಹೇಳಿದ ಹಾಗಾಯಿತು. ಅಂದಾಗ ವಸ್ತುವು ನಿತ್ಯ ಶುದ್ಧ ಬುದ್ಧ ಮುಕ್ತ ಸ್ವಭಾವದ್ದೇ ಆಗಿರಬೇಕು. ಹಾಗಿಲ್ಲದಿದ್ದರೆ ಈ ಹೆಸರೇ ಅನ್ವರ್ಥವಾಗುವುದಿಲ್ಲ. ಅರ್ಥಾನ್ವಯದ ಪ್ರಕಾರ ಬ್ರಹ್ಮವಸ್ತುವು ಪರಮಾರ್ಥವಾಗಿದ್ದು (ಚೈತನ್ಯಪೂರ್ಣ) ಚೇತನ. ಸ್ವಯಂಸಿದ್ಧ. ಸ್ವಯಂಪ್ರಕಾಶ. ಅಪರಿಚ್ಛಿನ್ನ. ಸರ್ವಸ್ವತಂತ್ರ. ಅನಾದ್ಯನಂತ. ಸರ್ವಜ್ಞ. ಸರ್ವಶಕ್ತ. ಸತ್ಯವಾದವಸ್ತು ಎಂಬರ್ಥವಾಗುವುದಲ್ಲದೇ ಅಪ್ರಮೇಯ, ಅಪರೋಕ್ಷವಾಗಿರುವಂತಹುದು ಎಂದೂ ತಿಳಿಯುವುದು. ಇಷ್ಟು ಮಾತ್ರವೇ ಅಲ್ಲ. ಈ ಮಹಾನ್

ವಸ್ತುವು ಅದ್ಭುತ ಮಹಿಮೆಯುಳ್ಳದ್ದು - ಅಂದರೆ ಹಿಂದಿನ ಮತ್ತು ಕಾಲಕಾಲಾಂತರಗಳಲ್ಲಿ, ಲೋಕ
ಲೋಕಾಂತರಗಳಲ್ಲಿ ಇದ್ದಿರಬಹುದಾದ ಮಹಾಸಾಧಕರು, ಯೋಗಯೋಗೀಶ್ವರರು, ಮಹಾಭಕ್ತರು
ಉಪಾಸಕರು, ಮಹಾಮೇಧಾವಿಗಳು ತಮ್ಮ ಶ್ರೇಷ್ಠ ಜ್ಞಾನಕರ್ಮ ಸಾಧನೆಗಳಿಂದ ಎಂತೆಂತಹ
ಯೋಗಸಿದ್ಧಿ ಜ್ಞಾನಸಿದ್ಧಿ ಮಂತ್ರಸಿದ್ಧಿಗಳನ್ನು ಗಳಿಸಿಕೊಂಡಿರಬಹುದೋ ಅಂತಹ ಅಥವಾ
ಅವಕ್ಕೂ ಮಿಕ್ಕಿನ ಸಕಲಸಿದ್ಧಿಗಳನ್ನು ಸ್ವಭಾವದಿಂದಲೇ ಅಂದರೆ ಪ್ರಯತ್ನವಿಲ್ಲದೇ
ಹೊಂದಿರುವಂತಹ ಮಹಾಮಹಿಮಾನ್ವಿತವಾದ ವಸ್ತು ಎಂದೂ ಶಬ್ದತಾತ್ಪರ್ಯವಾಗಿರುತ್ತದೆ.
ಇಂತಹ ವಿಶೇಷವಿಲ್ಲದಿದ್ದರೆ ಬ್ರಹ್ಮಶಬ್ದಕ್ಕೆ ಅರ್ಥವೇ ಪೂರ್ಣವಾಗುವುದಿಲ್ಲ. ಅಂದಾಗ
ಬ್ರಹ್ಮ ಎಂದರೆ ಪರಮೇಶ್ವರ ಭಗವಾನ್, ಅರ್ಥಾತ್ ವಸ್ತುಸ್ವಭಾವದಿಂದಲೇ ನಿತ್ಯಸತ್ಯವಾಗಿ
ಜ್ಞಾನಾನಂದೈಶ್ವರ್ಯ ವೀರ್ಯ ಕೀರ್ತಿ ತೇಜಃ ಪರಿಪೂರ್ಣ = ಷಡ್ಗುಣೈಶ್ವರ್ಯಸಂಪನ್ನ ಎಂಬ
ಮಹತ್ಪೂರ್ಣಾರ್ಥವು ಸಮನ್ವಿತವಾಗುವುದು. ಇಂತಹ ಮಹಿಮಾನ್ವಿತನನ್ನೇ
ದೇವರು, ಪರಮಾತ್ಮ ಎಂದು ಶಾಸ್ತ್ರಗಳು ತಿಳಿಸಿಕೊಡುತ್ತಿರುವುವು.

ಹೀಗೆ ಬ್ರಹ್ಮಶಬ್ದದ ಅರ್ಥವನ್ನು ತಿಳಿದುಕೊಂಡು ನಿಶ್ಚಯವಾದ ಬಳಿಕ
ಈಗ ಮೊದಲು ಹಿಂದೆ ವಿವರಿಸಿರುವುದನ್ನು, ಅಂದರೆ ನಾನು ಎಂಬ ನಿಜಾತ್ಮ
ವಸ್ತುಸ್ವರೂಪವನ್ನು ಜ್ಞಾಪಿಸಿಕೊಳ್ಳಬೇಕು. ಹಾಗೆ ಸ್ಮರಣೆಗೆ ತಂದುಕೊಂಡಾಗ
ಆತ್ಮವಸ್ತುವೂ ಬ್ರಹ್ಮವಸ್ತುವೂ ಒಂದೇ. ಬೇರೆ ಬೇರೆ ಅಲ್ಲ. ಎಂದೇ ತಿಳಿಯುವುದು
ಏಕೆಂದರೆ - ಪರಿಪೂರ್ಣ ಚೈತನ್ಯ. ಅದ್ವಿತೀಯ. ನಿತ್ಯ ಜ್ಞಾನ ಪ್ರಕಾಶಸ್ವರೂಪ,
ಸ್ವಾನುಭವಸಿದ್ಧ. ಒಂದೇ ಇರುವುದು. ಎಂಬ ಎಲ್ಲಾ ವಸ್ತುಸ್ವರೂಪಲಕ್ಷಣಗಳು
ಸಮಸಮಾನ ಒಂದೇ ಆಗಿರುವುದರಿಂದ ಬ್ರಹ್ಮ-ಆತ್ಮ ಒಂದೇ ಅಖಂಡವಸ್ತು.
ಸಚ್ಚಿದಾನಂದವೆಂಬ ಅದ್ವೈತವಸ್ತುವೇ ಸತ್ಯ - ನಿತ್ಯ ಎಂಬ ಪರಮಾರ್ಥತತ್ತ್ವವು
ಸಿದ್ಧಿಸುವುದು. ಹೀಗೆ ನಾನು - ನಿಜಾತ್ಮನು ಬ್ರಹ್ಮವೇ ಎಂದು ಅರಿತುಕೊಳ್ಳಬೇಕು;

ಶ್ರೀ ವೇದಮಾತೆಯ ಈ ಉಪದೇಶದಂತೆ ನಾನು ಅದ್ವಿತೀಯ ಬ್ರಹ್ಮನೇ ಎಂದು ತಿಳಿದುಕೊಂಡಾಗ ಮನಸ್ಸಿನಲ್ಲಿ ಸಂದೇಹವುಂಟಾಗಬಹುದು. ಈ ಬಾಹ್ಯದಲ್ಲಿ ನಾನಾ ಭೇದಗಳು, ಜಡದ್ರವ್ಯಗಳು, ಜಾತಿ ವ್ಯಕ್ತಿಗಳು, ಅನುಭವ ಭೇದನೆಗಳು ತೋರುತ್ತಿರಲು ಅದ್ವೈತಸಿದ್ಧಿ ಎಂಬುದು ಹೇಗೆ ಸಮಂಜಸ? ಎಂಬ ಆಕ್ಷೇಪರೂಪ ಸಂದೇಹಕ್ಕೆ ಸಮಾಧಾನ-ಉತ್ತರವಾಗಿ ಈಗ ಈ ನಾಲ್ಕನೆಯ ವಾಕ್ಯವು ಇರುವುದು. ಇದು ರಹಸ್ಯೋಪದೇಶವೇ. ಏಕೆಂದರೆ ಮನುಷ್ಯನಿಗೆ ಈ ವಿಷಯಗಳು ಸ್ವತಃ ತಿಳಿಯು-ವುದಿಲ್ಲ. ತತ್ತ್ವವನ್ನರಿತವರು ತಿಳಿಸಿಕೊಟ್ಟಾಗಲೇ ಗೊತ್ತಾಗುವುದು. ಈಗ ಈ ನಾಲ್ಕನೆಯ ವಾಕ್ಯದ ಅರ್ಥವನ್ನು ವಿಚಾರಮಾಡಿ ತಿಳಿದುಕೊಳ್ಳೋಣ -

೪. ಸರ್ವಂ ಖಲ್ವಿದಂ ಬ್ರಹ್ಮ = ಇಲ್ಲಿ ಜ್ಞಾನಗೋಚರವಾಗುವುದೆಲ್ಲವೂ ಬ್ರಹ್ಮವೇ ಆಗಿರುತ್ತದೆ ಎಂದು ಈ ವಾಕ್ಯದ ಅರ್ಥವಾಗಿದೆ. ಅಂದರೆ ನಮ್ಮ ಆತ್ಮನನ್ನು ಸೇರಿಸಿಕೊಂಡು ಈ ಚರಾಚರ ಜಗತ್ತೆಲ್ಲವೂ ಬ್ರಹ್ಮವೇ ಆಗಿದೆ ಎಂದು ಉಪದೇಶವಾಗಿದೆ. ಉಳಿಯುವ ಚೇತನವು ಒಂದೇ ಇರುವುದು. ಅನೇಕ ಚೇತನವಸ್ತುವಿಲ್ಲ ಎಂದು ಒಂದೆ ಪ್ರತಿಪಾದಿಸಿರುವುದನ್ನು ಸದಾ ಜ್ಞಾಪಕದಲ್ಲಿಟ್ಟುಕೊಂಡು ವಿಚಾರವನ್ನು ಗ್ರಹಿಸಬೇಕು.

ಈ ಉಪದೇಶವಾಕ್ಯದ ಅರ್ಥವನ್ನು ತಿಳಿಯಲು ಮೊದಲು ಕೆಲವು ಅಂಶಗಳನ್ನು ತಿಳಿದುಕೊಂಡಿರಬೇಕಾದ್ದು ಅವಶ್ಯಕವಾಗಿರುತ್ತದೆ. ಸುಲಭವಾಗಿ ತಿಳಿಯುವುದಿಲ್ಲ. ಆದ್ದರಿಂದ ಈಗ ಆ ಅಂಶಗಳನ್ನೇ ವಿಚಾರಮಾಡಿಕೊಳ್ಳೋಣ - ಮನುಷ್ಯಾದಿ ಸಕಲ ಪ್ರಾಣಿಗಳು ಅನುಭವಿಸುವ ಅವಸ್ಥಾತ್ರಯ. ಈ ಜಗತ್ತಿನ ಸೃಷ್ಟಿ, ಸ್ಥಿತಿ ಪ್ರಳಯ ಎಂಬ ಪ್ರಬಂಧ. ಪ್ರಪಂಚದ ಪ್ರತಿವಸ್ತುವಿನಲ್ಲೂ ಸಂಭವಿಸಿಕೊಂಡಿರುವ ಕಾರ್ಯಕಾರಣಭಾವ. ಇದನ್ನು ನಿರೂಪಿಸುವ ಪರಿಣಾಮವಾದದ ಮತ, ಮತ್ತು ವಿವರ್ತವಾದದ ಮತ. ಈ ಪ್ರಕ್ರಿಯೆಗಳನ್ನು ಅನುಸರಿಸಿ ವಿಚಾರಮಾಡಿಕೊಂಡರೆ, ಈ ಕ್ರಮದಲ್ಲಿ ಮೋಕ್ಷಸಿ

ಪ್ರಯತ್ನಿಸಿಕೊಂಡರೆ ನಿರ್ಮಲ ಜ್ಞಾನಲಾಭವಾಗುವುದು. ಆಗ ಜಗತ್ಕಾರಣವಾದ ಪರಮಾರ್ಥವು ತಿಳಿಯುವುದು. ನಿಶ್ಚಯ ಜ್ಞಾನವೂ ಆಗುವುದು.

ಅವಸ್ಥಾತ್ರಯವೆಂದರೆ, ಸಾರ್ವತ್ರಿಕವಾಗಿ ಅನುಭವದಲ್ಲಿರುವುದು. ಇದು ಬುದ್ಧಿಗೆ ಸೇರಿದ್ದು ಇವು ಮೂರು. ಜಾಗ್ರದವಸ್ಥೆ, ಸ್ವಪ್ನಾವಸ್ಥೆ, ಮತ್ತು ಸುಷುಪ್ತ್ಯವಸ್ಥೆ ಎಂದು. ಈ ಅವಸ್ಥೆಗಳಲ್ಲಿ ಒಂದು ಇರುವಾಗ ಮತ್ತೊಂದು ಇರುವುದೇ ಇಲ್ಲ. ಹೀಗೆಂಬುದನ್ನು ಗಮನಿಸಿದಾಗ ಇವು ಒಂದೊಂದೂ ಬೇರೆ ಬೇರೆ ಲೋಕವೆಂದೋ, ಬೇರೆ ಬೇರೆ ಬ್ರಹ್ಮಾಂಡವೆಂದೋ ಬಗೆಯಬಹುದಾಗಿದೆ. ಅದಂತಿರಲಿ. ಸಾಮಾನ್ಯವಾಗಿ ಮನುಷ್ಯನು ಎಚ್ಚರದಲ್ಲಿರುವಾಗ ನಿಜ ಆತ್ಮನನ್ನು (ತನ್ನನ್ನು) ದೇಹೇಂದ್ರಿಯ ಪ್ರಾಣಮನೋಬುದ್ಧಿಗಳೊಂದಿಗೆ ಅನ್ಯೋನ್ಯ ಆರೋಪಮಾಡಿಕೊಂಡೇ ಇರುತ್ತಾನೆ. ಅಭೇದವಾಗಿ ತಿಳಿದುಕೊಂಡು ಅವಲ್ಲ ನಾನು ನನ್ನದು ಎಂಬ ಅಭಿಮಾನವುಳ್ಳವನಾಗಿರುತ್ತಾನೆ. ಆಗ ಅವನು ಪ್ರಮಾತೃರೂಪದಿಂದ ಪ್ರಮಾಣಗಳ ಮೂಲಕವಾಗಿಯೇ ಸ್ಥೂಲಪದಾರ್ಥಗಳ ಜ್ಞಾನಮಾಡಿಕೊಳ್ಳುತ್ತಿರುವನು. ಅಂದರೆ ವ್ಯಕ್ತವಾದ ವಿಷಯಗಳನ್ನು ಅನುಭವಿಸಿಕೊಂಡಿರುವನು. ಸ್ವಪ್ನಾವಸ್ಥೆಯಲ್ಲಿ ಸ್ಥೂಲಶರೀರದ ಮೇಲಿನ ಅಭಿಮಾನವಿಲ್ಲದೇ ಸೂಕ್ಷ್ಮಶರೀರ ಅಂದರೆ ಮನಸ್ಸಿನೊಡನೆ ಅಭೇದವಾಗಿದ್ದು ಆ ಸೂಕ್ಷ್ಮವಾದ ಮನಃಪ್ರಮಾಣದಿಂದ ಸೂಕ್ಷ್ಮವಾದ ವಿಷಯಗಳನ್ನು ಅನುಭವಿಸುತ್ತಾನೆ. ನಾನು ಎಂಬ ಅಭಿಮಾನವುಳ್ಳವನೇ ಆಗಿರುತ್ತಾನೆ ಹೀಗೆ ಈ ಎರಡು ಅವಸ್ಥೆಗಳಲ್ಲಿ ಆತ್ಮ-ಅನಾತ್ಮರ ಅನ್ಯೋನ್ಯ ಆರೋಪಾಧ್ಯಾಸವಿರುವುದರಿಂದ ನಿಜ ಆತ್ಮನ ಸ್ವರೂಪವನ್ನು ಕಂಡುಕೊಳ್ಳಲು ದುಃಶಕ್ಯವಾಗಿರುತ್ತದೆ. ಆದ್ದರಿಂದ ನಿದ್ರಾವಸ್ಥೆಯನ್ನು ಪರೀಕ್ಷಿಸಿ ಆತ್ಮಸ್ವರೂಪವನ್ನು ಕಂಡುಹಿಡಿಯಬೇಕು. ಸುಷುಪ್ತಿಯಲ್ಲಿ ಆತ್ಮ ಅನಾತ್ಮರ ಪರಸ್ಪರಾರೋಪವಿರುವುದಿಲ್ಲ. ಆಗ ಆತ್ಮನಿಗೆ ದೇಹಾದಿಗಳ ಸಂಬಂಧ ತಪ್ಪಿ, ಆತ್ಮನು ತಾನು ಕೇವಲನಾಗಿರುವನು. ಆಗ ಆತ್ಮನು ಪ್ರಮಾತೃವಾಗಿರುವುದಿಲ್ಲ. ಮನ ಆದಿ ಇಂದ್ರಿಯ ಪ್ರಮಾಣಗಳು ಇರುವುದಿಲ್ಲ. ಅಭಿಮಾನವಿರುವುದಿಲ್ಲ. ಆದರೂ ಆತ್ಮನ

ತಾನೇ ತಾನು ಸುಖವನ್ನು ನಿದ್ರೆಯನ್ನು ಅನುಭವಿಸಿಕೊಂಡಿರುತ್ತಾನೆ. ಇದೇ ಎಲ್ಲರ ಅನುಭವವಾಗಿದೆ. ಇದರಿಂದ ಗೊತ್ತಾಗುವುದೇನೆಂದರೆ - ಆತ್ಮನು ಯಾವಾಗಲೂ ಜ್ಞಾನಾನುಭವಸ್ವರೂಪನೇ ಆಗಿರುತ್ತಾನೆಂದೂ ಮತ್ತು ಅವನ ಜ್ಞಾನಕ್ಕೆ ಪ್ರಮಾಣಾಂತರವು ಬೇಕಾಗಿಲ್ಲ ಎಂದೂ ಅವನೇ ಜ್ಞಾನಸ್ವರೂಪ ಎಂದೂ ಗೊತ್ತಾಗುವುದು. ಇದರಿಂದ ಮೂರು ಅವಸ್ಥೆಗಳಲ್ಲೂ ನಿಜವಾಗಿ ಅರಿಯುವವನು ಆತ್ಮನೇ ಎಂದು ನಿಶ್ಚಯವಾಗುವುದು. ಆದ್ದರಿಂದ ಜಾಗ್ರತ್ಸ್ವಪ್ನಗಳಲ್ಲಿ ಬುದ್ಧಿ ಮನಸ್ಸುಗಳಲ್ಲಿ ಹೊಳೆದು ತೋರುವ ಜ್ಞಾನವು ನಿಜವಾದ ಜ್ಞಾನವಲ್ಲ. ಜ್ಞಾನದ ಆಭಾಸ ಪ್ರತಿಬಿಂಬ ಎಂದು ತಿಳಿಯಬೇಕು. ಅಂತು ಹೀಗೆ ಮೂರು ಅವಸ್ಥೆಗಳಲ್ಲೂ ಜ್ಞಾನಾನುಭವವಿರುವುದು ಸಾರ್ವತ್ರಿಕಾನುಭವವೇ. ನಿದ್ರಾವಸ್ಥೆಯಲ್ಲಿ ಅನುಭವ ಇರುವುದಿಲ್ಲೆಂದು ಭಾವಿಸಬಾರದು. ಏಕೆಂದರೆ ಎಚ್ಚೆತ್ತಬಳಿಕ ಸುಖನಿದ್ರೆ ಆಯಿತು ಎಂದು ತನ್ನ ಅನುಭವವನ್ನು ಸ್ಮರಿಸಿಕೊಂಡು ಹೇಳುತ್ತಾನಲ್ಲವೆ! ಸ್ಮರಣೆಯು ಯಾವಾಗಲೂ ಅನುಭವಪೂರ್ವಕವಾಗಿಯೇ ಇರುವುದು, ನಡೆಯುವುದು. ಆದ್ದರಿಂದ ಯಾವಾಗಲೂ ಎಲ್ಲವನ್ನೂ ಅರಿಯುವವನು ಆತ್ಮನೇ ಎಂದೂ, ಆತ್ಮನ ಅರಿವಿಗೆ ಮನ ಆದಿಗಳ ಸಾಪೇಕ್ಷೆ ಇಲ್ಲ ಎಂದೂ ಗೊತ್ತಾಗುವುದು. ನಿದ್ರಾವಸ್ಥೆಯಲ್ಲಿ ದೇಹಾದಿ ಸಕಲ ಜಗತ್ಪದಾರ್ಥಗಳೂ ಆತ್ಮನಲ್ಲೇ ಲಯಹೊಂದಿರುತ್ತವಾದ್ದರಿಂದ ಬೇರೆ ಎರಡನೆಯ ವಸ್ತುವೇ ಇರುವುದಿಲ್ಲ. ಆತ್ಮನು ಒಬ್ಬನೇ ಅದ್ವಿತೀಯನಾಗಿರುತ್ತಾನೆ. ಆದ್ದರಿಂದಲೇ ಆಗ ವಿಶೇಷಜ್ಞಾನವುಂಟಾಗುವುದಿಲ್ಲ. ಆಗ ಆತ್ಮನೇ ಇರುವುದಿಲ್ಲ ಎನ್ನುವಂತಿಲ್ಲ. ಏಕೆಂದರೆ ಆತ್ಮನಿಲ್ಲದಿದ್ದರೆ ಮತ್ತೆ ಯಾರು ಮನ ಆದಿಗಳನ್ನು ಎಬ್ಬಿಸಿ ಚೇತನಗೊಳಿಸುವವರು? ಎಚ್ಚರವಾಗುವಾಗ ದೇಹಾದಿ ಸಕಲವನ್ನು ಆತ್ಮನೇ ಚೇತನಗೊಳಿಸುವನು. ಇದರಿಂದ ನಿಶ್ಚಯವಾಗುವುದೇನೆಂದರೆ - ಸುಷುಪ್ತಿಸ್ಥಾನದಲ್ಲಿ ಆತ್ಮನು ಸುಖಾನುಭವಸ್ಥಿತಿಯಲ್ಲಿ ಇರುವನು. ಅವನ ಅನುಭವಕ್ಕೆ ಯಾವ ಸಾಧನಾಪೇಕ್ಷೆಯೂ ಇಲ್ಲ. ಅವನ ಜ್ಞಾನಕ್ಕೆ ಎಂದೂ ಚ್ಯುತಿಯಿಲ್ಲ. ಎಂದು ದೃಢವಾಗುವುದಲ್ಲದೇ ಇಲ್ಲಿ ಮತ್ತೊಂದು

ವಿಷಯವು ಗೊತ್ತಾಗುವುದು. ಅದಾದರೆ- ಆತ್ಮನ ಈ ನಿರ್ವಿಶೇಷಸ್ಥಿತಿಯು ಯಾವ ಬೇರೆ ಕರ್ಮಸಾಧನೆಯಿಂದ ಉಂಟಾಗತಕ್ಕದ್ದಲ್ಲ, ಹೊಸದಾಗಿ ಸಂಪಾದಿಸಿಕೊಳ್ಳತಕ್ಕದ್ದೂ ಅಲ್ಲ. ಇದೇ ಆತ್ಮನ ನಿತ್ಯಸಹಜಸ್ಥಿತಿ. ವಾಸ್ತವಸ್ವರೂಪ. ಎಂದು ಗೊತ್ತುಮಾಡಿಕೊಳ್ಳಬೇಕು. ಆದರೆ ನಿದ್ರಿಸಿದ ಮನುಷ್ಯನು ಆಗ ತನ್ನ ನಿಜಸ್ಥಿತಿಯನ್ನು ಅರಿತುಕೊಂಡಿರುವುದಿಲ್ಲವಾದ್ದರಿಂದ ಅವನು ಸಂಸಾರಿಯಾಗಿಯೇ ಇರುತ್ತಾನೆ. ಯಾರು ಆತ್ಮಸ್ವರೂಪವನ್ನು ಅರಿತುಕೊಂಡು ಅಂತಹ ನಿರ್ವಿಶೇಷಸ್ಥಿತಿಯಲ್ಲಿ ನೆಲೆಗೊಂಡಿರುವರೋ ಅವರು ಸಂಸಾರಬಂಧನದಿಂದ ಮುಕ್ತರಾಗುವರು. ಇಂತು ಮೇಲೆ ವಿವರಿಸಿರುವಂತೆ ಸುಷುಪ್ತಿಸ್ಥಾನದಲ್ಲಿ ಆತ್ಮನು ಅದ್ವಿತೀಯನಾಗಿರುತ್ತಾನೆ. ಅಂದರೆ ಬ್ರಹ್ಮನೇ ಆಗಿರುತ್ತಾನೆ. ಎಂದು ಖಚಿತವಾಯಿತು.

ಇನ್ನು ಸ್ವಪ್ನಸ್ಥಾನದಲ್ಲಿನ ಪರಿ — ಆತ್ಮನು ಸ್ಥೂಲಶರೀರದ ಸಂಬಂಧವನ್ನು ಬಿಟ್ಟು ಸೂಕ್ಷ್ಮಶರೀರವಾದ ಮನಸ್ಸಿನೊಡನೆ ಅಧ್ಯಾಸದಿಂದಿದ್ದುಕೊಂಡು ವಾಸನಾರೂಪ ಅಂದರೆ ಸೂಕ್ಷ್ಮ ಶಬ್ದಾದಿ ವಿಷಯಗಳನ್ನು ಅನುಭವಿಸುವುದೇ ಸ್ವಪ್ನವಾಗಿರುತ್ತದೆ. ಮನಸ್ಸು ತಾನು ಜಾಗ್ರತ್ಕಾಲದಲ್ಲಿ ಅನುಭವಿಸಿದ್ದ ವಿಷಯಗಳ ವಾಸನೆ (ಸಂಸ್ಕಾರ) ಉಳ್ಳದ್ದಾಗಿರುವುದು. ಅಂತಹ ಮನಸ್ಸಿನೊಂದಿಗೆ ಆತ್ಮನು ತಾದಾತ್ಮ್ಯಾಧ್ಯಾಸದಿಂದಿದ್ದುಕೊಂಡು ಸೂಕ್ಷ್ಮವಾಗಿಯೇ ಪ್ರಮಾತೃವಾಗಿರುತ್ತಾನೆ. ಆಗ ಆಯತದ ಪ್ರಮಾತೃ ಆತ್ಮನು ಪರಿಣಾಮಗೊಳ್ಳುತ್ತಿರುವ ಮನೋಮಯನಾಗಿ ತಾನೇ ನಾನಾ ದೃಶ್ಯಪದಾರ್ಥರೂಪವಾಗಿಯೂ ತಾನೇ ಪ್ರೇಕ್ಷಕಪ್ರಮಾತೃರೂಪವಾಗಿಯೂ ಆಗಿದ್ದುಕೊಂಡು ಸುಖದುಃಖಗಳನ್ನು ಅನುಭವಿಸುತ್ತಾನೆ. ಅಂದರೆ ಆಗ ಅಲ್ಲಿ ಕಲ್ಪಿತ ಪ್ರಾತಿಭಾಸಿಕ ಆತ್ಮನು ಮನೋವೃತ್ತಿಗಳನ್ನನುಸರಿಸಿ ತಾನೇ ಕರ್ತೃ ಭೋಕ್ತೃರೂಪವನ್ನು ಪಡೆದಂತೆ, ಪರಿಣಾಮಗೊಂಡಂತೆ, ನಿಜದಲ್ಲಿ ಪರಿಣಾಮಗೊಂಡಿರುವುದಿಲ್ಲವಾದರೂ ಹಾಗೆ ಆಗಿರುತ್ತಾನೆ. ಹೀಗೆ ಸ್ವಪ್ನಸ್ಥಾನದಲ್ಲಿ ಪ್ರಾತಿಭಾಸಿಕಾತ್ಮನು ಸೂಕ್ಷ್ಮವಿಷಯಗಳ ಅನುಭವಮಾಡುವುದು ಎಲ್ಲರ ಸ್ವಪ್ನಾನುಭವವಾಗಿರುತ್ತದೆ. ಆಗ ಅಲ್ಲಿನ ವಿಷಯ-

ಗಳೂ ಸೂಕ್ಷ್ಮವೂ ಅಸ್ಥಿರವೂ ಆಗಿರುತ್ತವೆ. ಆಗ ಎಲ್ಲ ಆತ್ಮನಲ್ಲದೇ ಬೇರೆ ಕಾರಣವಾಗಲೀ ಕಾರ್ಯಪದಾರ್ಥಗಳಾಗಲೀ ಏನೂ ಇರುವುದಿಲ್ಲ. ಇದೇ ಎಲ್ಲರ ಅನುಭವವಾಗಿದೆ. ಅಂದಾಗ ಸ್ವಪ್ನದಲ್ಲಿ ಎಲ್ಲವೂ ಆತ್ಮನೇ ಅಂದರೆ ಬ್ರಹ್ಮವೇ ಆಗಿರುವುದೆಂದಾಯಿತು.

ಇನ್ನು ಜಾಗ್ರತ್ಸ್ಥಾನದ ಬಗೆ — ಜಾಗ್ರದವಸ್ಥೆಯಲ್ಲಿ ಮನುಷ್ಯನು ಸ್ಥೂಲವಾದ ದೇಹೇಂದ್ರಿಯಾದಿಗಳೊಡನೆ ಅನ್ಯೋನ್ಯರೂಪದ ಅಧ್ಯಾಸ ಮಾಡಿಕೊಂಡೇ ಇರುತ್ತಾನೆ. ನಾನು ಮನುಷ್ಯ, ನಾನು ಕರ್ತೃ, ನಾನು ಭೋಕ್ತೃ ಎಂಬೀರೀತಿ ಅಭಿಮಾನವು ಅವನಲ್ಲಿ ಹುಟ್ಟುಗಟ್ಟಿರುತ್ತದೆ. ಈ ಅಹಂಕಾರದಿಂದ ತಾನು ಸ್ವತಂತ್ರ ಎಂದು ಕೊಂಡೇ ವ್ಯವಹಾರಗಳಲ್ಲಿಯೂ ಜ್ಞಾನಕರ್ಮಗಳಲ್ಲಿಯೂ ತತ್ಪರನಾಗಿರುತ್ತಾನೆ. ಆಗ ಸತ್ತ್ವಗುಣ ರಜೋಗುಣಗಳು ಪ್ರಬಲವಾಗಿರುವುದರಿಂದ ಅವನ ದೇಹೇಂದ್ರಿಯ ಮನೋಬುದ್ಧಿಗಳು ಚುರುಕಾಗಿರುತ್ತವೆ. ಆಗ ಶಬ್ದಾದಿ ಜಗದ್ವಿಷಯಗಳು ಸ್ಥೂಲವಾಗಿರುತ್ತವೆ ಮತ್ತು ಸ್ಥಿರವಾಗಿರುತ್ತವೆ. ಅಜ್ಞಾನಿಯಾದ ಮನುಷ್ಯನು ದೇಹೇಂದ್ರಿಯಗಳೊಡನೆ ಅಧ್ಯಾಸದಿಂದ ಅಭೇದವಾಗಿದ್ದುಕೊಂಡು ಪ್ರಮಾತೃರೂಪದ ಚಿದಾಭಾಸನಾಗಿ (ಮಿಥ್ಯಾತ್ಮನಾಗಿ) ವ್ಯವಹರಿಸುತ್ತ ಸುಖದುಃಖಗಳನ್ನು ಪರವಶನಾಗಿಯೇ ಅನುಭವಿಸಿಕೊಂಡಿರುತ್ತಾನೆ. ಆತ್ಮನಾತ್ಮ ವಿವೇಕವಿಲ್ಲದವನಿಗೆ ತನ್ನ ಪೂರ್ವೋತ್ತರವೂ ಸ್ಥಿತಿಗತಿವಿಷಯವೂ ತಿಳಿದಿರುವುದಿಲ್ಲ. ಕರ್ಮಶಾಸ್ತ್ರಸಿದ್ಧಾಂತವು ತಿಳಿಸುವ ಸತ್ಯಸಂಗತಿ ಏನೆಂದರೆ — ಮನುಷ್ಯನು ಹಿಂದೆಮಾಡಿದ ಜನ್ಮಾಂತರಗಳಲ್ಲಿ ಮಾಡಿದ ಪುಣ್ಯಪಾಪಕರ್ಮಗಳ ಫಲವನ್ನು ಪಡೆಯುವುದಕ್ಕಾಗಿ, ಅನುಭವಿಸುವುದಕ್ಕಾಗಿ ಈ ಲೋಕದಲ್ಲಿ ಜನ್ಮವನ್ನು ಪಡೆಯುವನು. ಇಂತಿದು ಶಾಸ್ತ್ರಪ್ರಮಾಣದಿಂದಲೂ ತರ್ಕಯುಕ್ತಿಗಳಿಂದಲೂ ಮತ್ತು ಅನುಭವದಿಂದಲೂ ದೃಢಪಟ್ಟಿರುತ್ತದೆ. ತತ್ರ ಮನುಷ್ಯನು ತನ್ನ ಕರ್ಮಕ್ಕೆ ತಕ್ಕಂತೆ ಫಲವಾಗಿ ಸಿಕ್ಕುವ ವಸ್ತು ವ್ಯಕ್ತಿಗಳನ್ನೂ, ಒದಗಿ ಬಂದ ಸಂದರ್ಭವನ್ನೂ ಸನ್ನಿವೇಶವನ್ನೂ

ಸಂಪರ್ಕಸಿಕ್ಕೊಂಡು ಆಯಾಯ ಸಂಪರ್ಕ ಸೇವನೆಯಿಂದ ಸುಖವನ್ನೂ ದುಃಖವನ್ನೂ ಪರವಶತೆಯಿಂದಲೇ ಅನುಭವಿಸಿಕೊಂಡಿರುತ್ತಾನೆ. ಆದ್ದರಿಂದ ಮನುಷ್ಯನು ಪೂರ್ಣಸ್ವತಂತ್ರನಲ್ಲ. ಅವಿದ್ಯಾ ಕಾಮ ಕರ್ಮಬದ್ಧನೇ - ಸಂಸಾರಬಂಧನ ಇದ್ದೇ ಇರುವುದು. ತತ್ಕ್ಷ ಇಂತಹ ಅಜ್ಞಾನಾವಸ್ಥೆಯಲ್ಲಿ ಆಯಾಯ ಕರ್ಮಕರ್ತೃಗಳು ಆಯಾಯ ಕರ್ಮಫಲಭೋಕ್ತೃಗಳು ಬೇರೆಬೇರೆಯಾಗಿಯೇ ಆಗಿರುತ್ತಾರೆ. ಇಂತಿದು (ಪರಮಾರ್ಥವಲ್ಲವಾದರೂ) ವ್ಯವಹಾರಿಕಸತ್ಯವಾಗಿದೆ. ನಿಶ್ಚಿತವಾಗಿರುತ್ತದೆ. ಈ ತರ್ಕ ನ್ಯಾಯದ ಪ್ರಕಾರ ಹಿಂದೆ, ಹಿಂದಿನ ಜನ್ಮಗಳಲ್ಲಿ ಕರ್ಮಮಾಡಿದವನು ಮನುಷ್ಯನು. ಅವನು ಕರ್ಮಮಯನೇ ಆಗಿರುತ್ತಾನೆ. ಯಾವಯಾವ ಕರ್ಮಗಳು ಯಾವಯಾವ ಕರ್ತೃಗಳಿಂದ ಮಾಡಲ್ಪಟ್ಟಿರುವುವೋ ಅವುಗಳು ಅಂದರೆ ಕರ್ಮಗಳು ಕರ್ತೃಮಯವಾಗಿಯೂ ಕರ್ತೃಗಳು ಕರ್ಮಮಯರಾಗಿಯೂ ಆಗಿರುತ್ತಾರಾದ್ದರಿಂದ ಆಯಾಯ ಕರ್ಮಗಳಿಂದ ಬಂದಿರುವ ಕರ್ಮಫಲಗಳು ಆಯಾಯ ಕರ್ಮಕರ್ತೃಮಯವೇ ಆಗಿದ್ದು ಆಯಾಯ ಕರ್ಮಕರ್ತೃಗಳಿಗೇ ಸಂಬಂಧಪಟ್ಟುಕೊಂಡಿರುವುದರಿಂದಲೇ ಅವರವರೇ ಫಲಭೋಕ್ತೃಗಳಾಗಿರುತ್ತಾರೆ. ಇದೆಲ್ಲಾ ವ್ಯವಹಾರಿಕಸತ್ಯವಾಗಿದ್ದು ಮಿಥ್ಯಾತ್ಮರ ವಿಷಯವೇ ಆಗಿರುತ್ತದೆ. ಸತ್ಯಾತ್ಮನು ಸರ್ವಜ್ಞ ಪ್ರೇರಕಸಾಕ್ಷೀ (ತಟಸ್ಥ) ಮಾತ್ರವಾಗಿರುತ್ತಾನೆ. ಹೀಗೆ ಸಂಸಾರವ್ಯವಹಾರದಲ್ಲಿ ಕರ್ಮಗಳು ಕರ್ಮಫಲಗಳು ಆಯಾಯ ಮಿಥ್ಯಾತ್ಮಮಯವೇ ಆಗಿರುತ್ತಿದ್ದು ಅವರವರಿಗೇ ಸಂಬಂಧಪಟ್ಟುಕೊಂಡಿರುವುದರಿಂದ ಸತ್ಯಾತ್ಮನ ಪ್ರತಿಬಿಂಬನಾದ ಚಿದಾಭಾಸರೂಪದ ಮಿಥ್ಯಾತ್ಮನೇ ಕರ್ತೃವೂ ಆಗಿ ಭೋಕ್ತೃವೂ ಆಗಿರುತ್ತಾನೆ. ಹೀಗೆ ಜಾಗ್ರತ್ತಿನಲ್ಲಿ ಮತ್ತು ಸ್ವಪ್ನದಲ್ಲಿ ಚಿದಾಭಾಸರೂಪದ ಮಿಥ್ಯಾತ್ಮನು (ಕಲ್ಪಿತನು) ವ್ಯವಹಾರಿಕ ಜ್ಞಾನಾನುಭವ ಪಡೆಯುತ್ತಿದ್ದರೂ ಈ ಮಿಥ್ಯಾತ್ಮನನ್ನು ನಿಜವಾಗಿ ಅರಿಯುವ - ತಿಳಿಯುವ ಚೇತನನು ಕೂಟಸ್ಥನಾತ್ಮನು ನಿಜವಾದ ಸತ್ಯಾತ್ಮನೇ ಆಗಿರುತ್ತಾನೆ.

ಸುಖದು:ಖವೇದನೆಗಳು ಉದಯಿಸಿ ಮಿಥ್ಯಾತ್ಮರಿಗೆ ಆಗುತ್ತಿರುತ್ತವೆ. ಆತ್ಮನ ಸಾಕ್ಷಿಮಾತ್ರ ಆದವನೇ ಮುಖ್ಯ ಸತ್ಯವಸ್ತುವಾಗಿರುತ್ತಾನೆ. ಕನ್ನಡಿಯಲ್ಲಿ ತೋರಿಕೊಂಡಿರುವ ಪ್ರತಿಬಿಂಬ ಮುಖವು ಮಿಥ್ಯೆ ಆಗಿದ್ದರೂ ಆ ಪ್ರತಿಬಿಂಬಕ್ಕೆ ಸತ್ತಾಸ್ಫೂರ್ತಿಯನ್ನು ಕೊಡುವ ಬಿಂಬರೂಪ ಮುಖವೇ ಮುಖ್ಯವು, ಸತ್ಯವು ಆಗಿರುವುದಕ್ಕೆ! ಹಾಗೆಯೇ ಮಿಥ್ಯಾತ್ಮ ಜೀವಾತ್ಮನಿಗೆ ಸತ್ತಾಸ್ಫೂರ್ತಿಯನ್ನು ಕೊಟ್ಟಿರುವ ಬಿಂಬರೂಪವಾದ ಮುಖ್ಯಾತ್ಮನೇ ನಿಜಸತ್ಯಾತ್ಮನಾಗಿರುವನು. ಆ ಸತ್ಯವಾದ ಆತ್ಮನು ಒಬ್ಬನೇ ಇರುವನು. ಇಂತಹ ಸತ್ಯಾತ್ಮನು ಬ್ರಹ್ಮನೇ ಆಗಿರುತ್ತಾನೆ.

ಅಂತು ಈರೀತಿ ಅವಸ್ಥಾತ್ರಯವನ್ನು ಪರೀಕ್ಷಿಸಿ ವಿಚಾರಮಾಡಿಕೊಂಡಾಗ ನಾನು ಎಂಬ ನಿಜವಾದ ಆತ್ಮನು ಬ್ರಹ್ಮನೇ ಎಂದು ಗೊತ್ತಾಗುವುದು ಮತ್ತು ನಿಶ್ಚಯವಾಗುವುದು. ಬ್ರಹ್ಮನೇ ಆಗಿರುವ ಆತ್ಮಚೇತನನೇ ಸತ್ಯ. ತದ್ಭಿನ್ನವಾದ ಅನಾತ್ಮವೆಲ್ಲವು ಅಸತ್ಯ-ಮಿಥ್ಯ ಎಂದು ನಿಶ್ಚಯಮಾಡಿಕೊಳ್ಳಬೇಕು. ಮಿಥ್ಯಾ ಎಂದರೆ ಅಸತ್ = ಇಲ್ಲದುದು ಎಂದರ್ಥವಲ್ಲ. ಗಗನಕುಸುಮ ಎನ್ನುವುದು ಅಸತ್. ಎಂದೂ ಇಲ್ಲದುದು. ಮಿಥ್ಯಾಪದಾರ್ಥವು ಹಾಗಲ್ಲ. ಸ್ವಪ್ನವು ಮಿಥ್ಯೆ. ಆಗಿನ ಕಾಲದಲ್ಲಿ ಅಲ್ಲಿನ ವಸ್ತುವು ಇದ್ದೇ ಇರುತ್ತೆ. ಆದರೆ ಕಾಲಾಂತರದಲ್ಲಿ ಜಾಗ್ರದವಸ್ಥೆಯಲ್ಲಿ ಅಂದರೆ ಎಚ್ಚರವಾದ ಬಳಿಕ ಇರುವುದೇ ಇಲ್ಲ. ಅದರ ಗುರುತು ಕೂಡಾ ಇರುವುದಿಲ್ಲ. ಹಾಗೆಯೇ ವ್ಯಾವಹಾರಿಕ ಸತ್ಯ ಎನ್ನುವುದು ಮಿಥ್ಯಾಪದಾರ್ಥಕ್ಕೆ. ವ್ಯವಹಾರವು ಬಾಧಿತವಾದಾಗ - ನಿಜವಲ್ಲ ಎಂದು ತಿಳಿದಾಗ ಆ ವಸ್ತು ವ್ಯವಹಾರವೆಲ್ಲವು ಮಿಥ್ಯೆಯೇ; ಹುಸಿಯದೆ. ಆಗ ಸರ್ವಂ ಖಲ್ವಿದಂ ಬ್ರಹ್ಮ ಎಂಬ ವಿಷಯವು ಸಮರ್ಥಿತವಾಗಿದೆ.

ಇನ್ನು ಸೃಷ್ಟಿ ಎಂಬ ಪ್ರಮೇಯವನ್ನು ಹಾಗು ಕಾರ್ಯಕಾರಣಭಾವವನ್ನು ಪರೀಕ್ಷಿಸಿ ವಿಚಾರಮಾಡಿಕೊಂಡಾಗಲೂ ಇದೇ ನಿಶ್ಚಯವು ಸಿದ್ಧವಾಗುವುದು. ಯುಕ್ತಿ ಅನುಭವದ ಪ್ರಕಾರ ಕಾರಣವಿಲ್ಲದೇ ಕಾರ್ಯವು ಉಂಟಾಗುವುದಿಲ್ಲ. ಈ ನಾಮರೂಪ ಜಗತ್ತು ಹುಟ್ಟಿರುತ್ತೆ. ಅಂದರೆ ಕಾರ್ಯವಾಗಿದೆ. ಹುಟ್ಟಿ ಇರುವುದು ತಾನೇ ತೋರುವುದು. ಹುಟ್ಟದೇ ಇರುವುದು ತೋರುವುದೇ ಇಲ್ಲ. ತೋರುತ್ತಿರುವ ಜಗತ್ತೆಂಬ ಕಾರ್ಯಕ್ಕೆ ಕಾರಣ ಏನು?

ಈ ಜಗತ್ತು ಕೇವಲ ಜಡವಲ್ಲ. ಚೇತನಾಚೇತನಾತ್ಮಕ - ಚರಾಚರಾತ್ಮಕವಾಗಿದೆ. ಇಂತಹ ಅದ್ಭುತವಾದ ಕಾರ್ಯಕ್ಕೆ ಅಜಡವಾದ ಕಾರಣ ಏನಿರಬಹುದು ಎಂದು ಎಷ್ಟು ಚಿಂತಿಸಿದರೂ ಮನುಷ್ಯಬುದ್ಧಿಗೆ ನಿಲುಕುವುದಿಲ್ಲ. ನಿಶ್ಚಯವಾಗುವುದೇ ಇಲ್ಲ. ಶಾಸ್ತ್ರ ಈ ಜಗತ್ತಿಗೆ ಬ್ರಹ್ಮವೆಂಬ ಅದ್ಭುತವಸ್ತುವೇ ಕಾರಣವಾಗಿದೆ ಎಂದು ತಿಳಿಸಿಕೊಡುತ್ತಿದೆ. ಇದನ್ನು ಒಪ್ಪಲೇ ಬೇಕು. ಬುದ್ಧಿಯಿಂದ ಸಾಧ್ಯವಿಲ್ಲ. ಮಹತ್ತರ ಪ್ರಯೋಜನವೂ ಇರುತ್ತೆ. ಈ ವಿಷಯ ಹಾಗಿರಲಿ. ಪ್ರಕೃತ, ಗಡಿಗೆ ಎಂಬ ಕಾರ್ಯವು ಹುಟ್ಟುವುದಕ್ಕೆ ಮೊದಲು ಮಣ್ಣು ಎಂಬ ಕಾರಣವನ್ನು ಇದ್ದೇ ಇರುವುದಷ್ಟೆ! ಹಾಗೆಯೇ ಈ ಚರಾಚರ ನಾಮರೂಪ ಜಗತ್ತು ಹುಟ್ಟುವುದಕ್ಕೆ ಮೊದಲು ಅಂದರೆ ಪ್ರಳಯಕಾಲದಲ್ಲಿ ಬ್ರಹ್ಮವಸ್ತು ಒಂದೇ ಇದ್ದಿತ್ತು. ಎಂದು ತಿಳಿಯಬೇಕು. ಇದು ಕೇವಲ ಕಲ್ಪನೆ ಅಲ್ಲ. ಅನುಭವದಿಂದ ಗೊತ್ತಾಗುತ್ತದೆ. ವಿಶೇಷವೇನೂ ಇಲ್ಲದ ಸುಷುಪ್ತಿಸ್ಥಿತಿಯಲ್ಲಿ ಚೇತನಾತ್ಮನೊಬ್ಬನೇ ಇರುತ್ತಾನಷ್ಟೆ! ಅಂತೆಯೇ ಆದಿಯಲ್ಲಿ ಸತ್ಯವಾಗಿ ಸೃಷ್ಟಿಗೆ ಬ್ರಹ್ಮಚೇತನನೊಬ್ಬನೇ ಇರುವನೆಂದು ಶಾಸ್ತ್ರವು ಪ್ರತಿಪಾದಿಸಿದೆ. ಆ ಬ್ರಹ್ಮವೇ ಈಶ್ವರನು. ಅವನಿಂದ ಈ ವಿಶ್ವಕಾರ್ಯವು ಉಂಟಾಗಿರುವುದು. ಗಡಿಗೆಗೆ ಮಣ್ಣು ಕಾರಣ. ಅದರ ಕಾರ್ಯವಾದ ಗಡಿಗೆಯು ಕೇವಲ ಮಣ್ಣೇ ಆಗಿರುತ್ತದಲ್ಲವೇ! ಹಾಗೆಯೇ ಬ್ರಹ್ಮಕಾರ್ಯವಾದ ಜಗತ್ತು ಬ್ರಹ್ಮವೇ ಆಗಿರುತ್ತದೆಂದು ತಿಳಿಯಬೇಕು. ಜಗತ್ಕಾರಣನಾದ ಬ್ರಹ್ಮದೇವನೆಂಬ ಈಶ್ವರನು ನಿತ್ಯ ಸರ್ವಜ್ಞ ಸರ್ವಶಕ್ತ ಸರ್ವವ್ಯಾಪಿ ಎಂಬಿತ್ಯಾದಿಯಾಗಿ ಈ ಹಿಂದೆ ಪ್ರತಿಪಾದಿಸಿರುವುದನ್ನು ಪುನಃ ಜ್ಞಾಪಿಸಿಕೊಳ್ಳಬೇಕು. ಷಡ್ಗುಣೈಶ್ವರ್ಯಸಂಪನ್ನನಾದ ಆ ಭಗವಾನ್ ಈಶ್ವರನು ಮಹಾಮಹಿಮನಿರುವಂತೆ ಮಹಾದಯಾಮಯನೂ ಆಗಿರುತ್ತಾನೆ. ಇದು ಅವನದೇ ವೈಶಿಷ್ಟ್ಯವಾಗಿದೆ. ಅವನು ದಯಾಳುವಾದ್ದರಿಂದಲೇ, ಹಿಂದೆ ಸಂಸಾರಬಂಧದಿಂದ ಮೋಕ್ಷಪಡೆಯದೇ ಇರುವ ಜೀವಾತ್ಮರ ತ್ರಿವರ್ಗ ಅಪವರ್ಗ

ಸಾಧನೆಗೆ ಉಪಕಾರವಾಗುವಂತೆ ಜೀವಕಾರುಣ್ಯನಿಮಿತ್ತದಿಂದ ಜೀವರ ಉದ್ಧಾರಕ್ಕೋಸ್ಕರ ಈಶ್ವರನು ಜಗತ್ಸೃಷ್ಟಿಗೆ ಸಂಕಲ್ಪಮಾಡಿದನು. ಸಂಕಲ್ಪ ಎಂದರೆ ಇಚ್ಛೆ. ಇದು ಜ್ಞಾನಸ್ವರೂಪದ ಈಶ್ವರನ ಜ್ಞಾನಪ್ರಕಾರವೇ ಆಗಿರುತ್ತದೆ. ಇಚ್ಛೆಯೇ ಶಕ್ತಿ. ಇದನ್ನೇ ಮಾಯಾಶಕ್ತಿ ಎಂದು ತಿಳಿಯಬೇಕು. ಅವನ ಇಚ್ಛೆಗೂ ಶಕ್ತಿಗೂ ಎಂದೂ ಭಿನ್ನತೆಯಿಲ್ಲ. ಅವನು ಅಮೋಘಸಂಕಲ್ಪನು. ಆದ್ದರಿಂದಲೇ ಇಚ್ಛಾಮಾತ್ರಂ ಪ್ರಭೋಃ ಸೃಷ್ಟಿಃ ಎಂದು ಬಲ್ಲವರು ತಿಳಿಸಿಕೊಟ್ಟಿದ್ದಾರೆ. ಅಂತೆಯೇ ಈಶ್ವರನು ಬೇರೆ ಯಾವ ಸಾಮಗ್ರಿ ಉಪಕರಣವಿಲ್ಲದೇ, ಸಹಾಯವಿಲ್ಲದೇ, ಸ್ವಮಾಯಾಶಕ್ತಿಯಿಂದಲೇ ವಿಶ್ವವನ್ನು ಸೃಜಿಸಿರುವನು. ಇಂದ್ರಜಾಲವಿದ್ಯೆ-ಮಾಯಾಶಕ್ತಿ ಇರುವವನು ಸ್ವಯಂ ಅದ್ಭುತಪ್ರದರ್ಶನವನ್ನು ತೋರಿಸಬಲ್ಲನೆಂಬುದು ಗೊತ್ತಿರುವುದಷ್ಟೆ! ಅಂತೆಯೇ ದೇವಮಾಯೆಯಿಂದ ನಾಮರೂಪ ಕರ್ಮಮಯವಾದ ಈ ಪ್ರಪಂಚವು ಉದ್ಭವಿಸಿ ತೋರುತ್ತಿರುವುದು. ಹಾಗು ಮನುಷ್ಯಾದಿ ಪ್ರಾಣಿಗಳ ಜೀವನಕ್ಕೆ ಬೇಕಾದ ಉಪಕಾರಕವಾದ ಭೂತಲಾಶ್ರಯ. ಗಾಳಿ. ಬೆಳಕು. ನೀರು. ಅನ್ನ ಆಹಾರಾದಿ ಭೋಗ್ಯವಸ್ತು ಪದಾರ್ಥಗಳೆಲ್ಲಾ ಸಿದ್ಧವಾಗಿರುವುವು. ಮಾಯೆಯಿಂದ ಸೃಷ್ಟಿ ಆಗಿದೆ. ಆದ್ದರಿಂದ ಈಶ್ವರದೃಷ್ಟಿಯಿಂದ ನೋಡಿದರೆ ಈ ಪ್ರಪಂಚವು ಹುಟ್ಟಿಯೇ ಇಲ್ಲ. ಅವನು ಯಾವಾಗಲು ತಾನೇ ತಾನಾಗಿದ್ದು ಅದ್ವಯನಾಗಿಯೇ ಇರುತ್ತಾನೆ. ಆದರೆ ಅಮುಕ್ತ ಜೀವರ ಅಂದರೆ ಅವಿದ್ಯಾಮಾಯಾವೃತರಾದ ಅಜ್ಞಾನಿಗಳ ದೃಷ್ಟಿಯಿಂದ ಜಗತ್ಸೃಷ್ಟಿಯು ಆಗಿರುತ್ತದೆ ಮತ್ತು ಅದು ವ್ಯಾವಹಾರಿಕಸತ್ಯವಾಗಿರುತ್ತದೆ. ಅಜ್ಞಾನಿಗಳಿಗೆ ಈ ಸೃಷ್ಟಿಯ ಮರ್ಮವು ತಿಳಿದಿರುವುದಿಲ್ಲ. ಅವರು ಅನುಭವಿಸಬೇಕಾದ ಕರ್ಮಫಲಶೇಷವು ಇರುವುದಷ್ಟೇ? ಅವರು ಈ ಮಾಯಿಕ ಪ್ರಪಂಚವನ್ನು ನಿಜಸತ್ಯವೆಂದೇ ಬಗೆದುಕೊಂಡಿರುತ್ತಾರೆ. ಮಿಥ್ಯೆ ಎಂದು ಬಗೆಯುವುದಿಲ್ಲ. ಅಜ್ಞಾನದಲ್ಲೇ ಇದ್ದುಕೊಂಡು ಲೋಕವ್ಯವಹಾರವೆಂಬ ದೀರ್ಘಸ್ವಪ್ನವನ್ನೇ ಕಾಣುತ್ತಿರುತ್ತಾರೆ.

ಪರಮಾರ್ಥ ತತ್ತ್ವವನ್ನರಿತ ಜ್ಞಾನಿಗಳು ಕಂಡುಕೊಂಡಿರುವುದೇನೆಂದರೆ ಬ್ರಹ್ಮ ಸತ್ಯಂ ಜಗನ್ಮಿಥ್ಯಾ ಎಂದೇ ಅವರ ನಿಶ್ಚಯವಾಗಿರುತ್ತದೆ. ಆ ಜ್ಞಾನಿಗಳಾದ ಪ್ರಮಾತೃ ಪ್ರೇಕ್ಷಕ ಪುರುಷರು ಬ್ರಹ್ಮಾತ್ಮನಲ್ಲಿ ನಾಮ ರೂಪ ಕರ್ಮಮಯ ಪ್ರಪಂಚವನ್ನು ಕಾಣುತ್ತಿರುತ್ತಾರೆ. ಅಂದರೆ ಸಂಸಾರೀ ಜನರಿಗೆ ಅವರವರ ಪೂರ್ವ ಕರ್ಮಗಳ ಫಲವಾಗಿ ಶಬ್ದಾದಿಗಳು ಭೋಗ್ಯ ಪದಾರ್ಥಗಳೂ ಪ್ರಾಪ್ತವಾಗಿರುತ್ತವೆ. ಅವರು ಆ ವಿಷಯಗಳನ್ನು ಅನುಭವಿಸಿಕೊಂಡಿರುವರು. ಅಂತಹವರಲ್ಲಿ ಸುಗುಣಿಗಳಾದ, ಕೃತಜ್ಞರಾದ, ಜನರು ಭಗವದ್ಭಕ್ತಿಯಿಂದ ಇಷ್ಟದೇವೋಪಾಸನೆಯಾಗಿ ತಮ್ಮ ಜನ್ಮವನ್ನು ಸದುಪಯೋಗಮಾಡಿಕೊಳ್ಳುತ್ತಾರೆ. ಸಾರ್ಥಕಪಡಿಸಿಕೊಳ್ಳುತ್ತಾರೆ. ಅಂತಲ್ಲದ ಮಿಕ್ಕವರು ಕೃತಘ್ನರು ದುರ್ವ್ಯಸನಗಳಲ್ಲೀ ಕಾಲಕಳೆಯುತ್ತಾ ಜೀವನವನ್ನು ದುರುಪಯೋಗ ಮಾಡಿಕೊಳ್ಳುತ್ತಾರೆ. ವ್ಯರ್ಥಮಾಡುತ್ತಾರೆ.

ಈ ಪ್ರಪಂಚಸೃಷ್ಟಿಯನ್ನು ಕನಸಿನಂತೆ, ಇಂದ್ರಜಾಲಸೃಷ್ಟಿಯಂತೆ ತಿಳಿಯಬೇಕು. ಕನಸಿನಲ್ಲಿ ತೋರುವ ವಸ್ತುಗಳೆಲ್ಲವೂ ಆತ್ಮಮಯವೇ ಆಗಿರುವುದೆಂಬುದನ್ನು ಹಿಂದೆಯೇ ವಿವರಿಸಿದೆ. ಇಂದ್ರಜಾಲ ಮಾಯಾ ಪ್ರದರ್ಶನದಲ್ಲಿ ಹಾಗೆಯೇ. ಅಲ್ಲಿನ ದೃಶ್ಯವಸ್ತುಗಳೆಲ್ಲಾ ಮಾಯೆಯಿಂದ ಮಾಯಾವಿಯೇ, ಮಂತ್ರವಾದಿಯೇ ತುಂಬಿರುತ್ತಾನೆ. ನಿಜವಾದ ವಸ್ತುವೇ ಇರುವುದಿಲ್ಲ. ಹಾಗೆಯೇ ಅವಿದ್ಯಾಮಾಯಾ ಪರಿಣಾಮ ಕಾರ್ಯಗಳಾದ ಪ್ರಪಂಚ ನಾಮ ರೂಪ ಕರ್ಮಗಳಲ್ಲೆಲ್ಲಾ ಬ್ರಹ್ಮಾತ್ಮನೇ ವ್ಯಾಪಿಸಿ ತುಂಬಿಕೊಂಡು ಅವನೇ ಪರಿಣಾಮಗೊಂಡಂತೆ [ಆಗಿರುವುದು. ವಸ್ತುಪ್ರಕಾಶಕವಾದ ಬೆಳಕು ಆಯಾಯ ಆಕಾರಗಳನ್ನು ಮತ್ತು ಕೆಂಪು ಹಳದಿ ರೂಪಗಳನ್ನು ಪ್ರಕಟಗೊಳಿಸುವಾಗ ಬೆಳಕೇ ಆಯಾಯ ರೂಪಗೊಂಡಂತೆಯೇ] ಇದು ಎಂದು ತಿಳಿಯಬೇಕು. ಬೆಳಕು ವಸ್ತುತಃ ಪರಿಣಾಮಗೊಂಡಿರುವುದಿಲ್ಲ. ಭ್ರಮೆಯಿಂದ ಹಾಗೆ

ತೋರುವುದು. ಹಾಗೆಯೇ ವಸ್ತುತ: ಬ್ರಹ್ಮಾತ್ಮನು ಪರಿಣಾಮಗೊಳ್ಳದಿದ್ದರೂ ಭ್ರಮೆಯಿಂದ ಜಗದ್ವಸ್ತುಗಳು ಬೇರೆ ಬೇರೆಯಾಗಿ ತೋರುತ್ತವೆ. ಪ್ರಪಂಚದಲ್ಲಿ ಬ್ರಹ್ಮಾತ್ಮನು ತುಂಬಿ ಸರ್ವವ್ಯಾಪ್ತನಾಗಿರುವುದರಿಂದಲೂ, ಸಕಲ ಪದಾರ್ಥಗಳಲ್ಲಿ ಸತ್ತಾಸ್ಫೂರ್ತಿ ಅಂದರೆ ಇರುವ ತೋರುವ ರೂಪದಿಂದ ಪರಿಪೂರ್ಣನಾಗಿರುತ್ತಾನಾದ್ದರಿಂದಲೂ ಜಗತ್ತು ಸತ್ಯವಾಗಿಯೇ ಇದೆ ಎಂದು ತೋರುವುದು.

ಹೀಗೆ ದೃಷ್ಟವಾದ ಜಗತ್ತು ಮೂರು ಬಗೆಯಾಗಿರುತ್ತದೆ- ೧. ಆಧ್ಯಾತ್ಮಿಕ = ದೇಹೇಂದ್ರಿಯಾದಿಗಳು. ೨. ಆಧಿದೈವಿಕ = ಅಗ್ನಿ ವಾಯು ವರುಣಾದಿ ದೇವತೆಗಳು. ೩. ಆಧಿಭೌತಿಕ = ಭೂಮ್ಯಾದಿ ಪಂಚಭೂತಗಳು ಮತ್ತು ಅವುಗಳ ಗುಣಗಳು. ಈ ಮೂರು ಬಗೆಯ ಸೃಷ್ಟಿಯು ಬ್ರಹ್ಮನೆಂಬ ಸಮ ಸಮಾನ [ದೇಶಕಾಲಗಳಲ್ಲಿ ಇದ್ದುಕೊಂಡಿರುತ್ತವೆ. ಬ್ರಹ್ಮವಲ್ಲದೆ ಬೇರೆಯಾಗಿ] ದೇಶವೆಂಬುದೂ ಇಲ್ಲ. ಕಾಲವೆಂಬುದೂ ಇರುವುದಿಲ್ಲ. ಮಣ್ಣಿನಿಂದ ಮಡಿಕೆ. ಹತ್ತಿಯಿಂದ ಬಟ್ಟೆ. ಚಿನ್ನದಿಂದ ಒಡವೆ. ಎಳ್ಳಿನಿಂದ ಎಣ್ಣೆ ಹಾಲಿನಿಂದ ಮೊಸರು ಬೆಣ್ಣೆ ತುಪ್ಪ. ಭೂಮಿಯಿಂದ ಗಿಡಮರಗಳು. ಶರೀರದಲ್ಲಿ ಉಗುರು ಕೂದಲು ಎಂಬಂತೆ ಬ್ರಹ್ಮನಿಂದ ಚರಾಚರ ಸಮಸ್ತ ವಿಶ್ವವೂ ಉಂಟಾಗಿವೆ. ಗಡಿಗೆಯಲ್ಲಿ ಮಣ್ಣು ವ್ಯಾಪಿಸಿಕೊಂಡಿರುವಂತೆ ಈಶ್ವರನು ಚರಾಚರ ಪ್ರಪಂಚದಲ್ಲಿ ಅನ್ವಯಿಯಾಗಿ ತುಂಬಿರುವನು. ಗಡಿಗೆಯು ಮಣ್ಣಿಗಿಂತ ಬೇರೆಯಾಗಿ ಪೃಥಕ್ ಸ್ವತಂತ್ರ ವಸ್ತುವಲ್ಲ. ವಿಕಾರಮಾತ್ರವಾಗಿದೆ. ಅದು ನಿಜವಲ್ಲ ಕೇವಲ ಮಣ್ಣೇ ಆಗಿರುವುದಷ್ಟೆ! ಆ ವಿಕಾರವು ಗಡಿಗೆ ಎಂಬ ಹೆಸರಿಗೆ ಮಾತ್ರ, ವ್ಯವಹಾರಕ್ಕೆ ಮಾತ್ರ ಕಾರಣವಾಗುವುದು. ಅಂದರೆ ವ್ಯಾವಹಾರಿಕ ಸತ್ಯವುಳ್ಳದ್ದಾಗಿರುತ್ತದೆ. ಹೀಗೆ ತರ್ಕ ನ್ಯಾಯ ಅನುಭವ ಪ್ರಕಾರ ಪಾರಮಾರ್ಥಿಕವಾಗಿ ಚರಾಚರ ಜಗತ್ತೆಲ್ಲವೂ ವಿಚಾರಮಾಡಿಕೊಳ್ಳುವ ಮನುಷ್ಯನೂ ಸೇರಿ ಸಕಲವೂ ಬ್ರಹ್ಮವೇ ಆಗಿರುವುದೆಂದು ತಿಳಿಯಬೇಕು. ಹೀಗೆ ಪರಿಣಾಮ ಪ್ರಕ್ರಿಯೆಯಿಂದ ವಿಶ್ವವು ಬ್ರಹ್ಮವೇ ಎಂದು ಪ್ರತಿಪಾದಿಸಿರುತ್ತೆ,

ಇನ್ನು ವಿವರ್ತವಾದವೆಂಬ ಪ್ರಕ್ರಿಯೆಯಿಂದ ವಿಚಾರಮಾಡಿದಾಗಲೂ ಅದೇ ನಿರ್ಣಯವಾಗುವುದು. ಹೇಗೆಂದರೆ - ಕಾರಣವಾದ ವಸ್ತುವು ಅಂದರೆ ಅಧಿಷ್ಠಾನವು ವಿಕಾರಗೊಳ್ಳದೇ ಅದರಲ್ಲಿ ಬೇರೊಂದು ಬಗೆಯ ಕಾರ್ಯರೂಪವಾಗಿ ತೋರಿ-ಕೊಳ್ಳುವುದೆಂಬುದೇ ವಿವರ್ತವಾದ ಪ್ರಕಾರವು. ಇದಕ್ಕೆ ಸ್ವಪ್ನ, ಇಂದ್ರಜಾಲ, ಮರು-ಜಲ, ರಜ್ಜುಸರ್ಪ, ಶುಕ್ತಿರಜತ ಮುಂತಾದ ಕಡೆಯ ದೃಷ್ಟಾಂತಗಳು. ಬಿಸಿಲುಗುದುರೆ ಮರುಭೂಮಿಯಲ್ಲಿ ನೀರು ತೋರುವುದು ಅನುಭವವಾಗಿದೆ. ದೃಷ್ಟಿರುವುದು ತಾನೆ ತೋರುವುದು. ಅಂದಾಗ ಮರುಭೂಮಿಯಲ್ಲಿ ನೀರು ಕಾಣುವಾಗ ನೀರು ದೃಷ್ಟಿರುವುದಿಂದ ಒಪ್ಪಬೇಕು. ಅಲ್ಲಿ ನೀರೆಂಬ ಕಾರ್ಯರೂಪವಾಗಿ ತೋರುತ್ತಿದ್ದರೂ ಆಗ ನಿಜವಾಗಿ ಮರುಭೂಮಿಯಲ್ಲಿ ವ್ಯತ್ಯಾಸ-ಪರಿಣಾಮವೇನೂ ಉಂಟಾಗಿರುವುದಿಲ್ಲ. ಆದ್ದರಿಂದ ಅಲ್ಲಿ ನೀರು ತೋರಿದರೂ ಆ ನೀರಿನ ಅನುಭವವು ಭ್ರಮೆಯಾಗಿರುತ್ತದೆ. ನೀರು ಮಿಥ್ಯೆಯಾಗಿರುತ್ತದೆ. ಆಗ ನೋಡುವ ಮನಸ್ಸಿನಲ್ಲಿ ದೋಷ-ನ್ಯೂನತೆ ಇರುವುದರಿಂದ ನೀರೆಂಬ ಮಿಥ್ಯಾಜ್ಞಾನ-ಭ್ರಾಂತಿಜ್ಞಾನವು ಉಂಟಾಗುವುದು. ಆಗ ನೋಡುವವನಿಗೆ ಇದು ಬಟ್ಟಬಯಲು ಎಂಬ ಜ್ಞಾನವಿರುವು-ದಿಲ್ಲ. ಮತ್ತು ನೀರಿನ ಆಸೆ ಇರುತ್ತದೆ. ಈ ದೋಷದಿಂದ ಭ್ರಾಂತಿಯುಂಟಾಗುವುದು. ಸ್ವಪ್ನವನ್ನು ನೋಡುವವನಲ್ಲಿ ತಮೋಜ್ಞಾನ ದೋಷವಿರುವುದು. ಭ್ರಾಂತಿಸ್ಥಳಗಳಲ್ಲೆಲ್ಲಾ ಅಧಿಷ್ಠಾನ ಅಜ್ಞಾನ ದೋಷವು ಇದ್ದೇ ಇರುವುದು. ಅಂದರೆ ಅಧಿಷ್ಠಾನದ ಜ್ಞಾನವಿರುವುದೇ ಇಲ್ಲ. ಕನಸು ಕಾಣುವಾಗ ಅವನಿಗೆ ಆತ್ಮನ ಜ್ಞಾನವಿರುವುದಿಲ್ಲ. ಆತ್ಮನಲ್ಲಿ ಕನಸು ತೋರುವುದು. ಆತ್ಮನಲ್ಲಿ ಏನೊಂದು ವ್ಯತ್ಯಾಸವುಂಟಾಗಿರುವುದಿಲ್ಲ. ಸ್ವಪ್ನವನ್ನು ಅನುಭವಿಸಿದವನು ನಿಜ. ಸತ್ಯ. ಕಂಡ ಸ್ವಪ್ನವು ಮಿಥ್ಯೆ. ದೃಶ್ಯವು ತೋರುವಾಗ ಯಾವಾಗಲೂ ಸತ್ಯವೆಂದು ತೋರುವುದೇ ಸ್ವಭಾವ. ಏಕೆಂದರೆ ತೋರುವುದು=ಸ್ಫೂರ್ತಿ. ಪ್ರಕಾಶ-ಸ್ಫುರಣ ಇದು ಆತ್ಮಸ್ವರೂಪವೇ ಆಗಿರುತ್ತದೆ. ಆದ್ದರಿಂದ ಎಚ್ಚರಕ್ಕೂ ಸ್ವಪ್ನಕ್ಕೂ ವ್ಯತ್ಯಾಸವೇ ಇರುವುದಿಲ್ಲ. ಈ ಎರಡೂ ಒಂದೇ ಬಗೆಯಾಗಿರುತ್ತೆ.

ಕತ್ತಲೆಯನ್ನು ನೋಡುವಾಗ ಆ ಕತ್ತಲೆನ ನೋಡುವವನೇ ಸತ್ತೆಯನ್ನು=ಸ್ಥಿತಿಯನ್ನು ಕೊಟ್ಟುಕೊಂಡಿರುತ್ತಾನೆ. ಹಾಗೆಯೇ ಸ್ವಪ್ನ ಮತ್ತು ಎಚ್ಚರದಲ್ಲಿ ದೃಶ್ಯಕ್ಕೆ ನೋಡುವವನೇ ಸ್ಥಿತಿಯನ್ನು ಕೊಟ್ಟುಕೊಂಡಿರುತ್ತಾನೆಂದು ತಿಳಿಯಬೇಕು. ಈ ಎರಡು ಅವಸ್ಥೆಗಳಲ್ಲು ಪ್ರೇಕ್ಷಕನಿಗೆ ಆತ್ಮಾಜ್ಞಾನದೋಷವಿದ್ದೆ ಇರುತ್ತದೆ. ಆದ್ದರಿಂದ ಜಾಗ್ರತ್ ಸ್ವಪ್ನ ಇವೆರಡೂ ಸಮಸಮ ಆಗುತ್ತವೆ. ಈ ಅವಸ್ಥೆಗಳಲ್ಲಿ ಚಿದಾಭಾಸನೆಂಬ ಪ್ರತಿಬಿಂಬರೂಪದ ಕಲ್ಪಿತ ಮಿಥ್ಯಾತ್ಮನು ವಿಕಾರಕ್ಕೊಳಗಾಗಿದ್ದರೂ ಬಿಂಬ ಸಾಕ್ಷೀರೂಪದ ನಿಜ ಆತ್ಮನು ವಿಕಾರಿಯಾಗಿರುವುದಿಲ್ಲ. ಶುದ್ಧನಾಗಿಯೇ ಇರುತ್ತಾನೆ. ಆತ್ಮನೇ ಅಧಿಷ್ಠಾನವಸ್ತುವಾಗಿರುತ್ತಾನೆ. ಸ್ವಪ್ನಕಾಲವು ಹೋಗಿ ಎಚ್ಚರವಾಗಲು ಸ್ವಪ್ನಪದಾರ್ಥಗಳು ಹೇಗೆ ಹುಸಿಯೋ ಹಾಗೆಯೇ ಎಚ್ಚರದ ಕಾಲವು ಹೋಗಿ ಅಂದರೆ ತತ್ತ್ವಜ್ಞಾನವಾದಾಗ ಮತ್ತು ಬೇರೆ ಅವಸ್ಥೆ ಅಂದರೆ ಸ್ವಪ್ನ ಸುಷುಪ್ತಿಗಳಲ್ಲಿ ಈ ಜಗತ್ಪದಾರ್ಥಗಳೆಲ್ಲವೂ ಹುಸಿ=ಮಿಥ್ಯಾ ಆಗುತ್ತವೆಂದು ತಿಳಿದುಕೊಳ್ಳಬೇಕು=ನಿಶ್ಚಯ ಮಾಡಿಕೊಳ್ಳಬೇಕು. ಹೀಗೆ ವಿಚಾರ ಪ್ರಮಾಣದಿಂದ ಬ್ರಹ್ಮ ಸತ್ಯಂ ಜಗನ್ಮಿಥ್ಯಾ ಎಂದು ನಿರ್ಣಯವಾಗುವುದು

ಈಶ್ವರನು ಮಾಯೆಯಿಂದ ಜಗತ್ತನ್ನು ಸೃಜಿಸಿರುವನೆಂದು ಹಿಂದೆಯೇ ಪ್ರತಿಪಾದಿಸಿದೆ. ಇಂದ್ರಜಾಲಿಕ ದೃಶ್ಯದಲ್ಲಿ ಮಾಯೆಯಿಂದ ಮಂತ್ರವಾದಿಯೇ ತುಂಬಿರುವಂತೆ ಜಗತ್ತಿನಲ್ಲಿ ಮಾಯೆಯಿಂದ ಬ್ರಹ್ಮೇಶ್ವರನೇ ವ್ಯಾಪಿಸಿ ತುಂಬಿರುವನು. ಅಮುಕ್ತರಾದ ಜೀವರು ಧರ್ಮಕರ್ಮಗಳನ್ನು ಮಾಡುತ್ತಾರಾದ್ದರಿಂದ ಅವರಿಗೆ ಪುಣ್ಯಪಾಪಕರ್ಮಗಳಿಗೆ ತಕ್ಕ ಫಲವನ್ನು ಕೊಡಬೇಕಾದ ಪ್ರಭು - ಈಶ್ವರನು ಮಾಯೆಯಿಂದಲೇ ಭೋಗ್ಯವಸ್ತುಗಳನ್ನು ಸೃಜಿಸಿ, ಒದಗಿಸಿ ಕೊಟ್ಟಿರುವನು. ಹೀಗಿರುವುದು ಜಗತ್ಸೃಷ್ಟಿ. ಮಾಯೆಯಿಂದಾದ ಪದಾರ್ಥಕ್ಕೆ ಸ್ವಯಂ ಸತ್ತೆಯಿರುವುದಿಲ್ಲ. ಕನಸಿನ ಪದಾರ್ಥಕ್ಕೆ ಮತ್ತು ಕತ್ತಲೆಗೆ ಸ್ವಯಂ ಸತ್ತೆಯಿರುವುದಿಲ್ಲ. ಹಾಗೆಯೇ ರಜ್ಜುಸರ್ಪ, ಮರುಜಲ ಮುಂತಾದ ಭ್ರಾಂತಿಸ್ಥಳಗಳಲ್ಲೆಲ್ಲಾ ಪ್ರೇಕ್ಷಕಾತ್ಮನೇ ಆ ಕಾಲದಲ್ಲಿ ಆ ದೃಶ್ಯಪದಾರ್ಥಗಳಿಗೆ ಸತ್ತೆಯನ್ನು

ಹುಟ್ಟಿರುತ್ತಾನೆಂದು ತಿಳಿಯಬೇಕು. ಜಗತ್ಸೃಷ್ಟಿಯು ಮಾಯೆಯಿಂದಾದ್ದರಿಂದ ಈಶ್ವರನ ದೃಷ್ಟಿಯಿಂದ ನೋಡಿದಾಗ ಜಗತ್ತು ಇರುವುದೇ ಇಲ್ಲ. ಕೇವಲ ಬ್ರಹ್ಮ ಒಂದೇ ಇರುವುದು. ಬ್ರಹ್ಮಾತ್ಮನೇ ಈಶ್ವರನಿರುತ್ತಾನೆ. ಅಜ್ಞಾನಿಗಳಾದ ಜೀವರ ದೃಷ್ಟಿಯಲ್ಲಿ ಜಗತ್ಸೃಷ್ಟಿ ಆಗಿದೆ. ಜಗತ್ತಿಗೆ ವ್ಯಾವಹಾರಿಕ ಸತ್ತೆಯು ಇರುವುದು. ಸಾಪೇಕ್ಷ ಸತ್ಯ. ಪಾರಮಾರ್ಥಿಕ ಸತ್ಯವಲ್ಲ. ಇಂತಹ ವ್ಯಾವಹಾರಿಕ ಪ್ರಪಂಚದಲ್ಲಿ ಸ್ವಸ್ವ ಕರ್ಮಫಲಗಳನ್ನನುಭವಿಸಲು ಜನ್ಮವಡೆದಿರುವ ಜೀವರು ತಮ್ಮ ನಿಜಸ್ವರೂಪವನ್ನರಿಯದೇ, ತಮ್ಮನ್ನೇ ಮರೆತುಕೊಂಡು ಲೋಕ ವ್ಯವಹಾರದಲ್ಲಿ ಮಗ್ನರಾಗಿ ಮತ್ತೆ ಮತ್ತೆ ಪುಣ್ಯಕರ್ಮ ಪಾಪಕರ್ಮಗಳನ್ನು ಮಾಡುತ್ತ ಸುಖದುಃಖಗಳನ್ನನುಭವಿಸುತ್ತ ಹುಟ್ಟುತ್ತ ಸಾಯುತ್ತ ವಿಕಾರಿಗಳಾಗಿರುತ್ತಾರೆ. ಇದುವೆ ದೀರ್ಘಸ್ವಪ್ನ ಎಂದು ಹಿಂದೆ ವಿವರಿಸಿದೆ. ಸ್ವಪ್ನವು ಹೋಗಿ ಎಚ್ಚರವಾದಾಗ ಸ್ವಪ್ನವೆಲ್ಲ ಹೇಗೆ ಹುಸಿಯೋ, ಹಾಗೆಯೇ ತತ್ತ್ವಜ್ಞಾನ-ಪರಮಾರ್ಥಾನುಭವ ಮೂಡಿಕೊಂಡಾಗ ಈ ಜಗತ್ತು ಮಿಥ್ಯೆ. ಇರುವುದೇ ಇಲ್ಲ. ಬ್ರಹ್ಮ ಒಂದೇ ಇರುವುದು ಗೊತ್ತಾಗುವುದು. ಈರೀತಿ ವಿವರ್ತವಾದ ಪ್ರಕ್ರಿಯೆಯಿಂದಲೂ ಈ ಸಮಸ್ತ ಜಗತ್ತು ಬ್ರಹ್ಮವೇ ಎಂದು ಸಮಾಧಾನ ನಿಶ್ಚಯವಾಗುವುದು. ಆದುದರಿಂದ ಕೂಡಲೇ ಮನುಷ್ಯನು ಅಜ್ಞಾನ ಮೋಹನಿದ್ರೆಯನ್ನು ಬಿಟ್ಟು ಎಚ್ಚೆತ್ತುಕೊಳ್ಳಬೇಕು.

ಈರೀತಿ ವಿಚಾರಪೂರ್ವಕವಾಗಿ ವಿವರಿಸಿರುವಂತೆ ನಾಲ್ಕು ವಾಕ್ಯಗಳ ಅರ್ಥವನ್ನು ಪುನಃ ಪುನಃ ಮನನಮಾಡಿ ನಿಶ್ಚಯಜ್ಞಾನವಾದರೆ, ಜಿಜ್ಞಾಸುಗಳು ಮೋಹನಿದ್ರೆಬಿಟ್ಟು ಎಚ್ಚೆತ್ತುಕೊಂಡರೆ ಸ್ವಯಂವೇದ್ಯ ತಮ್ಮಲ್ಲಿ ಯಾವ ಜ್ಞಾನ-ಪ್ರಬೋಧವುಂಟಾಗುವುದೋ ಆ ಫಲಿತಾಂಶವನ್ನೇ ಈ ನಾಲ್ಕನೆಯ ವಾಕ್ಯವು ಅನುವಾದಿಸುವುದು - ಅಹಂ ಬ್ರಹ್ಮಾಸ್ಮಿ = ನಾನು ಬ್ರಹ್ಮವೇ ಆಗಿದ್ದೇನೆ. ಎಂದು; ಪರಮೇಶ್ವರನಾದ ಬ್ರಹ್ಮನ ಸ್ವಭಾವಸ್ವರೂಪಲಕ್ಷಣವು, ತತ್ತ್ವಪರಮಾರ್ಥವನ್ನರಿತ ಮನುಷ್ಯನ ನಿಜಾತ್ಮಸ್ವಭಾವಸ್ವರೂಪಲಕ್ಷಣವು ಒಂದೇ ಆಗಿಯೇ-ಇರುವುದರಿಂದಲೂ, ಬ್ರಹ್ಮಾತ್ಮನೊಬ್ಬನೇ ಸತ್ಯವಾಗಿರುವುದರಿಂದಲೂ ಅದ್ವೈತವೇ ಸಾಧು

ನಿಜ ಆತ್ಮನ ಲಾಭವಾದ

ಸ್ವಭಾವವಾಗಿರುವುದರಿಂದಲು, ಅಂತರ ಜ್ಞಾನಿಗೆ ಬ್ರಹ್ಮನಿಷ್ಠೆಯೇ ಆಗುವುದು. ಇದೇ ನಮ್ಮಗೆ ಜ್ಞಾನ. ಇದೇ ಬ್ರಹ್ಮಜ್ಞಾನ. ಈ ಬ್ರಹ್ಮಜ್ಞಾನದಿಂದ ನರನು ಮನುಷ್ಯನು ನಾರಾಯಣನಾಗಿ ಅಮೃತನೂ ಕೃತಕೃತ್ಯನೂ ಧನ್ಯನೂ ಆಗುವನು. ಓಂ ಶಾಂತಿಃ.

ಅಹಮ್ ಅಸ್ಮಿ = ಪಂಚಕೋಶವ್ಯತಿರಿಕ್ತಃ.
ಅಹಮ್ ಆತ್ಮಾ = ಅವಸ್ಥಾತ್ರಯಸಾಕ್ಷೀ.
ಅಯಮಾತ್ಮಾ ಬ್ರಹ್ಮ = ದೇಹತ್ರಯವಿಲಕ್ಷಣಃ
ಸರ್ವಂ ಖಲ್ವಿದಂ ಬ್ರಹ್ಮ = ಸಚ್ಚಿದಾನಂದಃ ಅದ್ವಿತೀಯಃ
ಅಹಂ ಬ್ರಹ್ಮಾಸ್ಮಿ = ಸರ್ವೋಪಪ್ಲವರಹಿತಃ ಶುದ್ಧ ಬುದ್ಧ ಮುಕ್ತಸ್ವಭಾವೋ ವಿಜ್ಞಾನಘನಃ ಪ್ರತ್ಯಗ ಬ್ರಹ್ಮೈವಾಹಮಸ್ಮಿ

ಅಸ್ತಿ ಭಾತಿ ಪ್ರಿಯಂ ನಾಮ ರೂಪಂ ಚೇತ್ಯಂಶ ಪಂಚಕಮ್ ।
ಆದ್ಯತ್ರಯಂ ಬ್ರಹ್ಮರೂಪಂ ಮಾಯಾರೂಪಮತೋ ದ್ವಯಮ್ ॥

(ಈ ವಿವೇಕವಿಚಾರವನ್ನು ಮನನ ಮಾಡುತ್ತಿರುವಾಗ ಆನಂದಭೈರವಿ ರಾಗದ ವೀಣಾ ವೇಣು ಸಂಗೀತರಸಾನುಭವವೇ ಆಗುವುದು.)

ಈಶ್ವರೋ ಗುರುರಾತ್ಮೇತಿ ಮೂರ್ತಿಭೇದ ವಿಭಾಗಿನೇ। (ಯು) ಶ್ರೀ
ವ್ಯೋಮವದ್ವ್ಯಾಪ್ತದೇಹಾಯ ದಕ್ಷಿಣಾಮೂರ್ತಯೇ ನಮಃ॥

ಸತ್ಯ ತತ್ತ್ವ ಮತ್ತು ಜ್ಞಾನ ಪರಮಾರ್ಥ (ವಿವರಣೆ) ನಿರೂಪಣೆ.

ಸರ್ವಜನರಿಗೂ ನಾನು. ತಾನು ಎಂಬ ಅನುಭವವು ಸ್ವಾಭಾವಿಕವಾಗಿರುವುದು. ಈ ಜ್ಞಾನವು ಎಲ್ಲರಿಗೂ ಸಾಕ್ಷಾತ್ ಅಪರೋಕ್ಷವಾಗಿಯೇ ಇರುತ್ತದೆ. ಈ ಜ್ಞಾನಸ್ವರೂಪದ ಅಂತರಾತ್ಮನು ಸಾಕ್ಷಾತ್ ಬ್ರಹ್ಮಾತ್ಮನೇ ಆಗಿರುತ್ತಾನೆ. ಈ ನಾನು ಎಂಬ ನಿಜ ಆತ್ಮನು ಅನುಭವರೂಪವಾಗಿರುವುದರಿಂದ, ನಿಜ ಸದ್ವಸ್ತುವೇ, ನಿತ್ಯಸತ್ಯವಾಗಿರುವಂತಹುದೆಂದು ನಿಶ್ಚಯವಾಗುತ್ತದೆ. ಧರ್ಮ. ಜಾತಿ. ಗುಣ. ಕ್ರಿಯೆ ಮುಂತಾದ ವಿಶೇಷಣವೇನೂ ಇಲ್ಲದಿರುವುದರಿಂದಲೇ ಆತ್ಮನು ನಿರಪೇಕ್ಷ ಸತ್ಯವಾಗಿರುತ್ತಾನೆ. ಕ್ರಿಯಾ ಕಾರಕ ಸಾಧನ ಸಂಸ್ಕಾರಾದಿಗಳ ಅಪೇಕ್ಷೆಯಿಲ್ಲದೇ ಇರುವ ಈ ನಾನು ಎಂಬ ಅಪರೋಕ್ಷಾನುಭವವೇ ನಿಜವಾದ ಜ್ಞಾನವಾಗಿರುತ್ತದೆ. ಹೀಗೆಂಬ ನಿಶ್ಚಯ ಪ್ರಮಾಣದಿಂದ ಗೊತ್ತಾಗುವುದೇನೆಂದರೆ - ಸತ್ಯವೇ ಜ್ಞಾನವು. ಜ್ಞಾನವೇ ಸತ್ಯವು. ಹೀಗೆ ಸತ್ಯ ಮತ್ತು ಜ್ಞಾನ ಇವೆರಡೂ ಅಭೇದವಿರುವುದರಿಂದ ಬ್ರಹ್ಮಾತ್ಮೈಕ್ಯ. ಅಖಂಡೈಕರಸ ತತ್ತ್ವವೇ ಪರಮಾರ್ಥ ಎಂದು ಸಿದ್ಧವಾಗುವುದು. ಇದನ್ನು ತಿಳಿದುಕೊಳ್ಳುವುದಕ್ಕೆ ಇವನ್ನು ಮೂರು ಮೂರು ಬಗೆಯಾಗಿ ವಿಚಾರಿಸಿ ಪರೀಕ್ಷಿಸಿ ನೋಡುವುದು ಸಹಾಯಕವಾಗಿದೆ.

೧. ವ್ಯಾವಹಾರಿಕ ಸತ್ಯ. ೨. ಪ್ರಾತಿಭಾಸಿಕ ಸತ್ಯ. ೩. ಪಾರಮಾರ್ಥಿಕ ಸತ್ಯ.

೧. ಸಾಮಾನ್ಯಾನುಭವ. ೨. ವಿಭಕ್ತಾನುಭವ. ೩. ಅವಿಭಕ್ತಾನುಭವ.

ಜ್ಞಾನ, ಅನುಭವ ಈ ಎರಡು ಮಾತುಗಳಿಗೂ ಒಂದೇ ಅರ್ಥ, ಪರ್ಯಾಯ ಪದಗಳು

ಈ ಸತ್ಯ ಜ್ಞಾನಗಳನ್ನು ವಿಚಾರ ವಿವೇಕಪೂರ್ವಕವಾಗಿ ಮನನಮಾಡಿಕೊಂಡರೆ ತತ್ತ್ವ ಪರಮಾರ್ಥವೇ ಅರಿವಾಗುವುದು. ಅಪರೋಕ್ಷ ನಿಶ್ಚಯಜ್ಞಾನವಾಗುವುದು.

೧. ವ್ಯಾವಹಾರಿಕ ಸತ್ಯ ಎಂದರೆ - ವ್ಯವಹಾರದಲ್ಲಿ ಮನುಷ್ಯರು ತಮ್ಮ ಇಂದ್ರಿಯಾದಿ ಪ್ರಮಾಣಗಳ ಮೂಲಕವಾಗಿ ತಿಳಿದುಕೊಳ್ಳುವ ವಸ್ತುವು ಮತ್ತು ಅದರ ಜ್ಞಾನವು ಸತ್ಯವೆಂದು ಭಾವಿಸಬಹುದಾಗಿದೆ. ಇದು ಹಸು. ಇದು ಕುದುರೆ ಎಂದು ಕಣ್ಣಿನಿಂದ ನೋಡಿ ನಿಜವಾಗಿ ಇರುವುದರ ಜ್ಞಾನಮಾಡಿಕೊಳ್ಳುವುದು ಲೋಕದಲ್ಲಿ ಕಾಣುವ ವಿಷಯ.

ಸಾಮಾನ್ಯವಾಗಿ ಎಲ್ಲರೂ ಒಪ್ಪುವಂತೆ ದೇಶ. ಕಾಲ. ಕ್ರಿಯೆ. ಕಾರಕ. ನಿಮಿತ್ತ. ಸಂಸರ್ಗ. ಮುಂತಾದ ಸಾಮಗ್ರಿಗಳು ಇರುತ್ತಿದ್ದು, ಪುರುಷಾರ್ಥವೂ, ಅರ್ಥಕ್ರಿಯಾಕಾರಿಯೂ ಆಗಿರುತ್ತಿದ್ದರೆ ಹಾಗೆ ತಿಳಿದ ವಸ್ತುವನ್ನು ಮತ್ತು ಅದರ ಜ್ಞಾನವನ್ನು ಸತ್ಯ ಎಂದು ಹೇಳುತ್ತಾರೆ. ಇದೇ ವ್ಯಾವಹಾರಿಕ ಸತ್ಯದ ಲಕ್ಷಣವಾಗಿದೆ. ಜಾಗ್ರತ್ಕಾಲದಲ್ಲಿ ಸತ್ತ್ವ ಗುಣವು ರಜೋಗುಣವು ಪ್ರಧಾನವಾಗಿ ಒಸರುಕಾಗಿರುತ್ತವೆ. ಆಗ ತಾನು ಸ್ವತಂತ್ರ ಎಂಬ ನಂಬಿಕೆಯುಳ್ಳ ಮನುಷ್ಯನು ಉದ್ದೇಶಪಟ್ಟು ವ್ಯವಹಾರದಲ್ಲಿ, ಜ್ಞಾನ ಕರ್ಮಗಳಲ್ಲಿ ತೊಡಗಿಕೊಂಡಿರುತ್ತಾನೆ. ಅಥವಾ ಬಿಡುತ್ತಾನೆ. ಅವನ ಪ್ರವೃತ್ತಿ ನಿವೃತ್ತಿಗಳಿಗೆ ಸಹಾಯಕವಾದ ದೇಹ ಇಂದ್ರಿಯ ಮನೋಬುದ್ಧಿಗಳು ಪಟುವಾಗಿರುತ್ತವೆ. ತರ್ಕ ನೀತಿಗಳ ಬೆಂಬಲವೂ ಇರುವುದು. ಈ ವಿಶಿಷ್ಟಸಾಮಗ್ರೀ ಸಂಪನ್ನನಾದ ಮನುಷ್ಯನು ತಾನು ಜ್ಞಾತಾ ಕರ್ತಾ ಭೋಕ್ತಾ ಎಂಬ ಅಭಿಮಾನವುಳ್ಳವನಾಗಿ ಪ್ರಮಾತೃವಾಗಿರುತ್ತಾನೆ. ಈ ಪ್ರಮಾತೃವು ತನ್ನ ಇಂದ್ರಿಯ ಪ್ರಮಾಣದಿಂದ ವಸ್ತುವನ್ನು ಗ್ರಹಿಸುತ್ತಾನೆ. ಅಂದರೆ ಜ್ಞಾನಮಾಡಿಕೊಳ್ಳುತ್ತಾನೆ. ಇಂತಿದು ವ್ಯಾವಹಾರಿಕ ಸತ್ಯವಾಗಿರುತ್ತದೆ. ಇದರಲ್ಲಿ ತಿಳಿಯುವವನು, ತಿಳಿಯಲ್ಪಡುವ ವಸ್ತು ಮತ್ತು ತಿಳಿವು ಅಂದರೆ ಜ್ಞಾನ ಎಂದು ಮೂರು ಭೇದ - ತ್ರಿಪುಟೀ ದ್ವೈತವು ಇರುತ್ತದೆ. (ಜ್ಞಾತಾ. ಜ್ಞೇಯ. ಜ್ಞಾನ = ತ್ರಿಪುಟಿ) ಸಂಸಾರೀ ಮನುಷ್ಯನು ಇಂತಹ ಜ್ಞಾನಮಾಡಿಕೊಂಡು ತನಗೆ ಇಷ್ಟವಾದ ವಿಷಯದಲ್ಲಿ ಪ್ರವರ್ತಿಸುತ್ತಲೂ, ಅನಿಷ್ಟವಾದ ವಿಷಯದಿಂದ ನಿವರ್ತಿಸುತ್ತಲೂ ಇರುವನು. ಹೀಗೆ ಇಷ್ಟರಿಂದ ಮನುಷ್ಯನಿಗೆ ಧರ್ಮ. ಅರ್ಥ. ಕಾಮ ಎಂಬ ಈ ತ್ರಿವರ್ಗಸಾಧನೆ ಆಗುವುದು. ಲೋಕದಲ್ಲಿ ಸಾಮಾನ್ಯವಾಗಿ ಜನರು ಇಷ್ಟು ಮಾತ್ರವೇ ಗುರಿಯಾಗಿ ಉಳ್ಳವರಾಗಿರುತ್ತಾರೆ. ಇಷ್ಟುಸಾಧನೆಯಿಂದ ತಾವು ಧನ್ಯರೆಂದು ನಂಬಿಕೊಂಡಿರುತ್ತಾರೆ. ಆದರೆ ಅವರು ಮುಪ್ಪು, ಮರಣ. ರೋಗ. ಭಯ. ಚಿಂತೆ. ದುಃಖ ಮುಂತಾದ ಕ್ಲೇಶಗಳನ್ನು ಪದೇ ಪದೇ ಪಡೆಯುತ್ತಿರುತ್ತಾರೆ.

ಆದ್ದರಿಂದ ಲೋಕದ ಜನರ ನಂಬಿಕೆಯು ಸರಿಯಾದುದಲ್ಲ. ತತ್ವ ತಿಳಿವಳಿಕೆ ಎಂದು ಬಲ್ಲವರು ಹೇಳುತ್ತಾರೆ. ಏಕೆಂದರೆ - ಜಗದ್ವಸ್ತುಗಳು ಒಂದಲ್ಲಾ ಒಂದು ದಿನ ನಾಶಹೊಂ-ದತಕ್ಕವೇ ಆಗಿರುತ್ತವೆಂದು ಎಲ್ಲರಿಗೂ ಗೊತ್ತಿರುತ್ತದೆ. ಶಾಸ್ತ್ರಗಳು ನಮಗೂ ಹಾಗೆಯೇ ತಿಳಿಸಿಕೊಡುತ್ತವೆ. ದೃಷ್ಟಂ ಸರ್ವಂ ಮಿಥ್ಯಾ, ಉತ್ತರಕ್ಷಣಾ ಬಾಧಿತಃ ಎಂದು ಎಚ್ಚರಿಸುತ್ತವೆ. ಜಾಗ್ರತ್ತಿನಲ್ಲಿರುವ ವಸ್ತುಗಳು ಸ್ವಪ್ನ ಸುಷುಪ್ತಿಗಳಲ್ಲಿ ಇರುವುದೇ ಇಲ್ಲ. ಸ್ವಪ್ನದಲ್ಲಿ ಕಂಡದ್ದು ಎಚ್ಚರದಲ್ಲಿ ಇರುವುದೇ ಇಲ್ಲ. ಆದ್ದರಿಂದ ವ್ಯಾವಹಾರಿಕ ಸತ್ಯ ಎಂಬುದು ನಿಜವಾದ ಸತ್ಯ ಅಲ್ಲ. ಅಂದರೆ ಮಿಥ್ಯ ಎಂದು ತಿಳಿಯಬೇಕು. ಕಂಡದ್ದೆಲ್ಲವೂ ಸತ್ಯವೇ ಆಗಿರುತ್ತದೆಂಬ ನಿಯಮವೇನೂ ಇಲ್ಲ. ನೆರಳು, ಕತ್ತಲೆ, ಇಂದ್ರಜಾಲ ದೃಶ್ಯ, ಪ್ರತಿಬಿಂಬ, ಕನಸು, ರಜ್ಜುಸರ್ಪ, ಶುಕ್ತಿರಜತ ಎಂಬಿವೆಲ್ಲಾ ಕಾಣುತ್ತವೆ. ಹೀಗೆ ತೋರಿದ ವಸ್ತುಗಳು ಹುಸಿ ಎಂದು ಅನುಭವದಲ್ಲಿದೆ. ಅಲ್ಲದೆ ಜಗದ್ವಸ್ತುಗಳು ಇದ್ದಂತಿರುವುದಿಲ್ಲ. ಪರಿಣಾಮಿಗಳಾಗಿರುತ್ತವೆ ಅಶಾಶ್ವತ ಎಂದು ಎಲ್ಲರಿಗೂ ತಿಳಿದಿರುತ್ತದೆ. ಆದ್ದರಿಂದ ನೋಡುವಾಗ ಜಗತ್ತು ಸತ್ಯ ಎಂದು ತೋರಿದರೂ ಕನಸಿನಂತೆ ಹುಸಿ ಎಂದು ತಿಳಿಯಬೇಕು. ಕನಸಿನಲ್ಲಿ ತೋರುವ ವಸ್ತುಗಳಿಗೆ ನೋಡು-ವವನೇ ಸ್ಥಿತಿ-ಸತ್ತೆಯನ್ನು ಕೊಟ್ಟುಕೊಂಡಿರುತ್ತಾನೆ. ಆ ವಸ್ತುಗಳು ಸ್ವಯಂ ಸತ್ತೆಯುಳ್ಳವು-ಗಳಾಗಿರುವುದಿಲ್ಲ. ಸಾಪೇಕ್ಷ ಸತ್ತೆಯುಳ್ಳವು ಎಂಬುದೇ ನಿಶ್ಚಯ. ಹಾಗೆಯೇ ಜಾಗ್ರತ್ಕಾಲದ ಜಗದ್ವಸ್ತುಗಳು ಸಾಪೇಕ್ಷ ಸತ್ತೆಯುಳ್ಳವೇ. ನಿರಪೇಕ್ಷ ಸತ್ಯವಲ್ಲ. ಸ್ವಕರ್ಮಫಲವಾಗಿ ಬಂದವುಗಳಾಗಿವೆ ಮತ್ತು ಆತ್ಮನ ಸತ್ತೆಯಿಂದ ಸತ್ತೆಯುಳ್ಳವಾಗಿರುತ್ತವೆ. ಎಂದು ತಿಳಿಯಬೇಕು. ಹೀಗೆ ವ್ಯವಹಾರದ ವಸ್ತುಗಳು ಸತ್ಯ ಎಂ-ದಿಟ್ಟುಕೊಂಡರೆ ಇವಕ್ಕೆ ಸತ್ತೆಯನ್ನು ಕೊಡುವ ಬೇರೊಂದು ವಸ್ತುವು ಸತ್ಯಸ್ಯ ಸತ್ಯಂ ಎಂಬ ಪರಮಾರ್ಥವಾದ ಸ್ವತಂತ್ರ ಸತ್ಯವು ಇರುವುದೆಂದು ಗೊತ್ತಾಗುವುದು. ಆಕಾಶವು ನೀಲಿ ಎಂದು ಬಾಲಕರು ತಿಳಿದುಕೊಂಡಿರುತ್ತಾರೆ. ಆದರೆ ಆಕಾಶಕ್ಕೆ ರೂಪವೇ ಇರುವುದಿಲ್ಲ. ಹಾಗೆಯೇ ಪ್ರಪಂಚವು ಸತ್ಯವೆಂದು ತಿಳಿದುಕೊಂಡಿರುವುದು ಭ್ರಾಂತಿಯೇ ಸರಿ. ಇದಕ್ಕೆ

ಕಾರಣವೇನೆಂದರೆ - ಮನುಷ್ಯನು ತನ್ನ ನಿಜಾತ್ಮನನ್ನರಿಯದೆ ದೇಹಾದಿಸಂಘಾತ-ವನ್ನು ತನ್ನನ್ನು ಒಟ್ಟುಗೂಡಿಸಿಕೊಂಡು ಅನ್ಯೋನ್ಯಾಧ್ಯಾಸದಿಂದ ನಾನು ಜ್ಞಾತೃ ಎಂದು ಅಭಿಮಾನಪಟ್ಟುಕೊಂಡು ಪ್ರಮಾತೃವಾಗಿರುತ್ತಾನೆ. ಹಾಗೂ ಪ್ರಮಾಣದಿಂದಲೇ ವಸ್ತು ಜ್ಞಾನವನ್ನು ಪಡೆದುಕೊಳ್ಳುತ್ತಿರುತ್ತಾನೆ. ಜಗತ್ತು ಬ್ರಹ್ಮಾತ್ಮಕವಾಗಿರುವುದರಿಂದ ಪ್ರಮಾತೃವಿಗೆ ಸತ್ಯವೆಂದೇ ತೋರುವುದು. ಅಧ್ಯಾಸವಿಲ್ಲದಿದ್ದರೆ ಅವನು ಪ್ರಮಾತೃವೇ ಅಲ್ಲ. ಆಗ ಪ್ರಮಾಣಗಳು ಇರುವುದಿಲ್ಲ. ಅವುಗಳ ಉಪಯೋಗವೂ ಇಲ್ಲ. ಅಂದಾಗ ಇಂದ್ರಿಯ ಪ್ರಮಾಣಗಳಿಂದ ಪ್ರಮಾತೃಗಳಾದ ಮನುಷ್ಯರು ತಿಳಿಯುತ್ತಿರುವ ಜಗದ್ ವಸ್ತುಗಳು ಮತ್ತು ಅವರ ಜ್ಞಾನಗಳು ನಿಜ ಸತ್ಯ ಪರಮಾರ್ಥವಲ್ಲ. ಪುನಃ ಮಿಥ್ಯೆ ಎಂದು ನಿಶ್ಚಯವಾಗುವುದು. ಇಂತಿರುವುದು ವ್ಯಾವಹಾರಿಕಸತ್ಯದ ಪಾಡು.

2. ಪ್ರಾತಿಭಾಸಿಕ ಸತ್ಯ. ಇದರ ಪರಿಯೇನೆಂದರೆ - ತಿಳಿದುಕೊಳ್ಳಬೇಕೆಂಬ ಉದ್ದೇಶ, ತನ್ನ ಪ್ರಯತ್ನ, ಇಲ್ಲದೇ ಹಾಗೂ ಆಕಸ್ಮಿಕವಾಗಿ ಸ್ವಾಭಾವಿಕವಾಗಿ ವಸ್ತುವು ತೋರುವುದುಂಟು. ಹೀಗೆ ಕ್ಲೃಪ್ತ ಜ್ಞಾನಸಾಮಗ್ರಿ ಇಲ್ಲದೆ ಉಂಟಾಗುವ ಜ್ಞಾನಕ್ಕೂ ಮತ್ತು ಅದರ ವಿಷಯ ವಸ್ತುವಿಗೂ ಪ್ರಾತಿಭಾಸಿಕಸತ್ಯ ಎನ್ನುವರು. ಉಚಿತ ಪ್ರಮಾಣದಿಂದ ಆಗುವ ಜ್ಞಾನ-ವನ್ನು ತಾನೆ ನಿಜ ಎಂದು ಪರಿಗಣಿಸಬೇಕು. ಹಾಗಿಲ್ಲದಿದ್ದರೆ ಅದು ನಿಜ ಹೇಗಾದೀತು! ಕನಸು, ಇಂದ್ರಜಾಲ, ಮಾಟ, ಭ್ರಮೆ, ಮುಂತಾದ ಕಡೆ ಮನುಷ್ಯನ ತನ್ನ ಪ್ರಯತ್ನ, ಉದ್ದೇಶ ಇಲ್ಲದೆಯೂ ದೃಶ್ಯ ವಸ್ತುಗಳು ತೋರುವುವು. ಆ ಕಾಲದಲ್ಲಿ ಅವೆಲ್ಲಾ ಸತ್ಯವೆಂದೇ ತೋರುತ್ತವೆ. ಅಸತ್ಯ ಎಂದು ಗೊತ್ತಾಗುವುದಿಲ್ಲ. ಕನಸಿನ ಪದಾರ್ಥಗಳಿಗೆ ನೋಡುವಾತನೇ ಸತ್ತೆಯನ್ನು ಕೊಟ್ಟಿರುತ್ತಾನೆ. ಕತ್ತಲೆ ಎಂಬ ವಸ್ತುವಿಗೆ ನೋಡುವವನೇ ಸ್ಥಿತಿಯನ್ನು ಕೊಟ್ಟಿರುತ್ತಾನೆ. ಅಲ್ಲಿ ಕತ್ತಲೆ ಎಂಬ ವಸ್ತು ಇರುವುದೇ ಇಲ್ಲ. ಹಾಗೆಂದೇ ಕನಸಿನಲ್ಲಿ ಮನೋಮಯಾತ್ಮನಲ್ಲದೆ (ನೋಡುವವನಲ್ಲದೆ) ಬೇರೆ ವಸ್ತು ಬಂದಾ.

ಇರುವುದಿಲ್ಲ. ಆದ್ದರಿಂದ ಸ್ವಪ್ನ ಪದಾರ್ಥಗಳನ್ನು ಪ್ರಾತಿಭಾಸಿಕಸತ್ಯವೆನ್ನುವರು. ಸ್ವ-
ತೋರುತ್ತದೆ. ಅಷ್ಟೆ. ನಿಜವಾಗಿ ವಸ್ತು ಇರುವುದಿಲ್ಲ. ಸ್ವಪ್ನಾವಸ್ಥೆಯಲ್ಲಿ ಕನಸು ಕಾಣುವು-
ದು ಏಕೆಂದರೆ- ಆಗ ಚೇತನಾತ್ಮನು ಸೂಕ್ಷ್ಮವಾದ ಮನಸ್ಸಿನೊಡನೆ ತಾದಾತ್ಮ್ಯದಿಂದ
ಮನೋಮಯ- ಪ್ರಮಾತಾ ಆಗಿರುತ್ತಾನೆ. ಆ ಮನಸ್ಸು ಜಾಗ್ರದನುಭವದ ಅನೇಕ
ವಾಸನೆಗಳುಳ್ಳದ್ದಾಗಿದ್ದು ಆಯಾಯಾ ವಸ್ತುರೂಪವಾಗಿ ಪರಿಣಾಮಿಸುತ್ತಾ ಇರುತ್ತದೆ. ಅಂತಹ
ಸೂಕ್ಷ್ಮ ವಸ್ತುಗಳು ಆತ್ಮಜ್ಯೋತಿಯಿಂದ ಹೊಳೆಯುತ್ತವೆ. ಅದೇ ಸ್ವಪ್ನಾನುಭವ- ಸ್ವಪ್ನ
ದರ್ಶನವಾಗಿರುತ್ತದೆ. ಆಗ ಮನೋಮಯ ಪ್ರಮಾತೃವು ಕಲ್ಪಿತ ಪ್ರಾತಿಭಾಸಿಕ ದ್ರಷ್ಟೃ ಆಗಿರು-
ತ್ತಾನೆ. ಮಗ್ನನಾಗಿರುತ್ತಾನೆ. ಹಾಗೆ ಕಲ್ಪಿತಾತ್ಮನು ಸ್ವಪ್ನವನ್ನು ನೋಡುತ್ತಿರುವಾಗಲೇ
ಆ ವಸ್ತುಗಳು ಮರೆಯಾಗುತ್ತಿರುವುವು. ಅನುಭವಿಸಿದ, ಅನುಭವಿಸದೇ ಇರುವ
ಸಂಭಾವ್ಯವಾದ, ಅಸಂಭಾವ್ಯವಾದ ಅನೇಕ ಪ್ರಸಂಗಗಳು ಆಗ ತೋರುತ್ತವೆ.
ಹೀಗೆ ಅವ್ಯವಸ್ಥಿತವಾಗಿರುವುದರಿಂದಲೂ ಕನಸನ್ನು ಅಸತ್ಯವೆಂದು ಎಲ್ಲರೂ
ತಿಳಿದುಕೊಂಡಿರುತ್ತಾರೆ. ಆದರೆ ಕನಸಿನಲ್ಲಿ ವಸ್ತುಗಳು ಹೊಳೆದುದು, ಅನುಭವಿ-
ಸಿದ್ದೆಂಬ ಅರಿವು ಸಾಕ್ಷಿಯಾತ್ಮನ ಆಗಿರುವುದರಿಂದ ಅದು ಮಾತ್ರ ಸತ್ಯವೇ ಆಗಿರುತ್ತೆ.
ಆದ್ದರಿಂದಲೇ ಕನಸಿನ ಸ್ಮರಣೆಯು ಸಂಭವಿಸುವುದು. ಸ್ವಪ್ನ ದೃಶ್ಯಗಳು ಮಾತ್ರ
ಮಿಥ್ಯೆ- ಪ್ರಾತಿಭಾಸಿಕಗಳಾಗಿರುತ್ತವೆ. ಇದರಂತೆ ಮೃಗಜಲ. ರಜ್ಜುಸರ್ಪ.
ಶುಕ್ತಿರಜತ. ಮತ್ತು ನಾನು ಸತ್ತುದು ಎಂಬ ಸ್ಥಳಗಳಲ್ಲಿ ವಿಷಯಗಳು ತೋರು-
ತ್ತವೆ. ಆದರೆ ಅವು ನಿಜವಲ್ಲ. ಯಥಾರ್ಥಗಳಾಗಿರುವುದಿಲ್ಲ. ದೃಶ್ಯಂ ಮಿಥ್ಯಾ. ಉ-
ತ್ತರಕ್ಷಣಾಬಾಧತಃ ಎಂಬುದನ್ನು ನೆನೆಯಬೇಕು. ಕನಸಿನ ಅನುಭವ ಆಗುವಾಗಲೂ
ದ್ರಷ್ಟಾ. ದೃಶ್ಯ. ದರ್ಶನ ಎಂಬ ತ್ರಿಪುಟೀ ದ್ವೈತವು ಇದ್ದೇ ಇರುವುದು. ಆರೋಪ
ಅಧ್ಯಾಸವು ಇರುವುದೆಂದು ಹಿಂದೆ ಹೇಳಿಯೇ ಇರುತ್ತೆ. ಹೀಗೆ ಕನಸಿನಲ್ಲಿ ಕ್ಷಣಿಕವು

= ಯತ್ ಸಾಕ್ಷಾದಪರೋಕ್ಷಾತ್ ಬ್ರಹ್ಮ ಯ ಆತ್ಮಾ ಸರ್ವಾಂತರಃ - ಇತ್ಯಾದಿ ಶ್ರುತಿ.

ಸೂಕ್ಷ್ಮವೂ ಆದ ವಸ್ತುಗಳ ಅನುಭವವಾಗುವುದು. ಜಾಗ್ರತ್ತಿನಲ್ಲಿ ಸ್ಥೂಲವಾದ ವಸ್ತುಗಳ, ಸ್ಥಿರವಾದ ವಸ್ತುಗಳ ಜ್ಞಾನಾನುಭವವಾಗುವುದು. ಇಷ್ಟೇ ವ್ಯತ್ಯಾಸ. ಸ್ವಪ್ನ ಜಾಗರದ ಸ್ತರವನ್ನು ಒಂದೇ ಬಗೆ ಎಂದು ಪರಿಗಣಿಸಬಹುದಾಗಿದೆ. ಈ ರೀತಿ ವಿಚಾರ ವಿಮರ್ಶೆಯಿಂದ ವ್ಯಾವಹಾರಿಕ ಸತ್ಯದಂತೆ ಪ್ರಾತಿಭಾಸಿಕ ಸತ್ಯವೂ ಕೂಡ ಮಿಥ್ಯೆ ಎಂದಾಯಿತು. ಅಂದರೆ ಪ್ರಾತಿಭಾಸಿಕವು ಹೇಗೆ ಮಿಥ್ಯೆಯೋ ಹಾಗೆಯೇ ವ್ಯಾವಹಾರಿಕವೂ ಮಿಥ್ಯೆ ಎಂದೇ ನಿಶ್ಚಯವಾಯಿತು.

೩. ಇನ್ನು ಪಾರಮಾರ್ಥಿಕ ಸತ್ಯವನ್ನು ವಿಚಾರದಿಂದ ತಿಳಿಯೋಣ - ಅದಕ್ಕೆ ಮೊದಲು ಸತ್ಯ ಎಂದರೇನು? ಅದರ ಸ್ವರೂಪ ಲಕ್ಷಣವೇನು? ಎಂಬುದನ್ನೇ ನಿಶ್ಚಯ ಮಾಡಿಕೊಳ್ಳಬೇಕು. ಶ್ರುತಿ ಯುಕ್ತಿ ಅನುಭವಗಳಿಂದ ಯಾವ ವಸ್ತುವು ಇದೆ ಎಂದು ತಿಳಿದು ಬರುವುದೋ ಮತ್ತು ಆ ವಸ್ತುವು ಎಂದಿಗೂ ಬದಲಾವಣೆಯಾಗುವುದಿಲ್ಲವೋ ಇಲ್ಲದಾಗುವುದಿಲ್ಲವೋ ಅಂತಹ ವಸ್ತುವೇ ನಿಜ ಸತ್ಯ ಎಂದು ನಿಶ್ಚಯಿಸಲು ಅರ್ಹವಾಗಿರುವುದು. ಅಂತಲ್ಲದುದು ಅಸತ್ಯವೆಂದೇ ತೀರ್ಮಾನಿಸಬೇಕು. ಬ್ರಹ್ಮಾತ್ಮವಸ್ತು ಒಂದೇ ಅಂತಹ ಪರಮಾರ್ಥಸತ್ಯ ಎಂಬುದು ವಿಚಾರದಿಂದ ಗೊತ್ತಾಗುವುದು. ಸರ್ವಾತ್ಮನಾದ ಬ್ರಹ್ಮವು ಇರುವುದೆಂದು ಶ್ರುತಿಪ್ರಮಾಣವಿದೆ. ಆ ಪರಮ ವಸ್ತುವು ನಿತ್ಯ ಸತ್ಯ ಎಂದೂ ಶುದ್ಧ ಬುದ್ಧ ಮುಕ್ತ ಸ್ವಭಾವದ ಅದ್ವಿತೀಯ ಸಚ್ಚಿದಾನಂದ ಎಂದೂ ಶ್ರುತಿಯೇ ತಿಳಿಸಿಕೊಡುತ್ತಿರುವುದು. ಯುಕ್ತಿ ಏನೆಂದರೆ - (೧) ಈ ಜಗದ್ವಸ್ತುಗಳೆಲ್ಲವೂ ಕಾರ್ಯವಾಗಿರುವುದರಿಂದ ಇವೆಲ್ಲಕ್ಕೂ ಮೂಲಕಾರಣವಾದ ಮೂಲವಸ್ತು ಇರಲೇಬೇಕು. ಆ ವಸ್ತುವಿಗೆ ಮತ್ತೆ ಕಾರಣ ಎಂಬುದಿರುವುದಿಲ್ಲ. (೨) ಈ ಜಗತ್ಪದಾರ್ಥಗಳು ನಿರಾಧಾರವಾಗಿರಲಾರವು. ಈ ಆಧೇಯ ವಸ್ತುಗಳೆಲ್ಲಕ್ಕೂ ಮೂಲಾಧಾರ ಒಂದು ಇರಲೇಬೇಕು. ಆ ಮೂಲಾಧಾರ ವಸ್ತುವು ಒಂದು ತಾನೇ ತಾನು ನಿರಾಧಾರವಾಗಿ ಸ್ವತಂತ್ರವಾಗಿ, ಸ್ವಯಂಪ್ರಕಾಶವಾಗಿ ಇರಲೇಬೇಕು. (೩) ಇಲ್ಲಿ ದೃಶ್ಯ-ಜ್ಞೇಯ ಸರ್ವ ವಿಷಯಗಳನ್ನು ಅರಿಯುವ ಚೇತನವೊಂದು ಇರಲೇ

ಬೇಕು. ಅವನು ಮಾತ್ರ ಅರಿಯಲ್ಪಡತಕ್ಕವನಾಗುವುದಿಲ್ಲ. (೪) ಈ ಸವಿಕಾರವಸ್ತು
ಗಳೂ ಮೂಲದಲ್ಲೆಂದು ನಿರ್ವಿಕಾರಪ್ರಕೃತಿಯೊಂದು ಇರಲೇಬೇಕು. ಮೂಲ ಪ್ರಕೃತಿಯು ಮಾತ್ರ
ನಿರ್ವಿಕಾರವಾಗಿಯೇ ಇರುವುದಾಗಬೇಕು. ಇತ್ಯಾದಿ ತರ್ಕ ಯುಕ್ತಿಗಳಿಂದ ನಿಶ್ಚಯ-
ವಾಗುತ್ತದೆ. ಈ ಶ್ರುತಿ ಯುಕ್ತಿಗಳಿಗೆ ಅನುಗುಣವಾಗಿ ಸಾರ್ವತ್ರಿಕವಾದ ಅನುಭವವು
ಇರುವುದು. ನಾನು ಇದ್ದೇನೆ ಎಂಬ ಅನುಭವವು ಎಲ್ಲರಿಗೂ ಇದ್ದೇ ಇರುವುದಷ್ಟೆ! ಈ
ನಾನು ಎಂಬ ವಸ್ತುಸ್ವರೂಪವು ಎಲ್ಲರಿಗೂ ತಿಳಿದಿರುವುದಿಲ್ಲವಾದರೂ ತಾನು ಇರುವ
ಜ್ಞಾನವು ಸ್ವಾಭಾವಿಕವಾಗಿಯೇ ಇರುವುದು ನಿಶ್ಚಯ. ಈ ನಾನಿದ್ದೇನೆಂಬ ಜ್ಞಾನವು
ಜಾಗ್ರತ್ಸ್ವಪ್ನಸುಷುಪ್ತಿಗಳಲ್ಲಿ, ಬಾಲ್ಯ ಯೌವನ ವಾರ್ಧಕ ಅವಸ್ಥೆಗಳಲ್ಲಿ ಸ್ತ್ರೀ
ಪುರುಷಾದಿ ಸಕಲ ಪ್ರಾಣಿಗಳಿಗೆ ಇದ್ದೇ ಇರುವುದು. ಈ ನಾನು ಎಂಬ ಭಾವವು
ಜಾಗ್ರತ್ಸ್ವಪ್ನಸ್ಥಿತಿಗಳಲ್ಲಿ ನಾನಾಪ್ರಕಾರವಾಗಿ ತೋರಬಹುದು. ಆದರೆ ಅದು ನಿಜಸ್ಥಿತಿ
ಅಲ್ಲ. ಯಾವಾಗಲೂ ನಾನು ಎಂದು ಏಕಪ್ರಕಾರವಾಗಿಯೇ ಇರುವ ನಾನು ಎಂಬ ಏಕ
ಚೇತನನಲ್ಲಿ ಈ ಜಾಗ್ರತ್ಸ್ವಪ್ನಗಳು ಬರುತ್ತವೆ-ಹೋಗುತ್ತವೆ. ಅವು ಆಗಮಾಪಾಯಿ-
ಗಳು. ದೇಹೇಂದ್ರಿಯಗಳಿಗೆ ಸಂಬಂಧಪಟ್ಟವುಗಳು. ಚೇತನಾತ್ಮನಿಗೆ ಸೇರಿದವುಗಳಲ್ಲ.
ನಾನು ಎಂಬ ಆತ್ಮಚೇತನನು ಆಗಮಾಪಾಯಿಯಲ್ಲ. ನಿತ್ಯವಾಗಿರುವ ಆತ್ಮನು
ಜಾಗ್ರತ್ಸ್ವಪ್ನಗಳಲ್ಲಿ ಇರುವಂತೆ ನಿದ್ರೆಯಲ್ಲಿ ಅಂದರೆ ಸುಷುಪ್ತಿಯಲ್ಲಿ ಇರುತ್ತಾನೆ.
ಆಗ ನಾನು ಎಂಬ ಆತ್ಮನು ದೇಹೇಂದ್ರಿಯಗಳೊಂದಿಗೆ ಸಂಬಂಧಿಸಿಕೊಂಡಿರುವುದಿಲ್ಲ. ಅಂದರೆ
ದೇಹೇಂದ್ರಿಯಗಳು ಮಿಥ್ಯೆ ಆದ್ದರಿಂದ ಆಗ ಅವು ಇರುವುದೇ ಇಲ್ಲವೆಂಬುದನ್ನು ಜ್ಞಾಪಿ
ಸಿಕೊಂಡು, ಅನ್ಯೋನ್ಯಾಧ್ಯಾಸ-ಮಿಥ್ಯಾಜ್ಞಾನವೂ ಇರುವುದಿಲ್ಲೆಂಬುದನ್ನು ಸ್ಮರಿಸಬೇಕು. ಆ
ಆತ್ಮನು ಎಲ್ಲಾ ಸಂಬಂಧಗಳನ್ನು ಬಿಟ್ಟು ಅಂದರೆ ವಿಶೇಷಸ್ಥಿತಿಯಿಲ್ಲದೆ ಕೇವಲ
ತಾನೇ ತಾನಾಗಿ ನಿರ್ವಿಶೇಷಸ್ಥಿತಿಯಲ್ಲಿ ಉಳಿದುಕೊಂಡಿರುವುದೇ ನಿಜವಾದ ಆತ್ಮಚೇತನನ ಸ್ವಭಾವಸ್ವರೂಪವಾಗಿದೆ

ಯಾವಾಗಲೂ ನಿರ್ವಿಕಾರಿಯಾಗಿರುತ್ತಾನೆ.

ಇದೇ ನಿರ್ವಿಶೇಷ ಸ್ಥಿತಿ. ಇಂತಹ ನಿರ್ವಿಶೇಷ ಸ್ವರೂಪದಿಂದಲೇ ಆತ್ಮನು ಜಾಗ್ರತ್ ಸ್ವಪ್ನ ಸುಷುಪ್ತಿ ಎಂಬ ಮೂರು ಅವಸ್ಥೆಗಳಲ್ಲಿ, ಬಾಲ್ಯ ಯೌವನ ವಾರ್ಧಕಾದಿ ಅವಸ್ಥೆಗಳಲ್ಲಿ, ಪ್ರಾಣಿಗಳ ಶರೀರದಲ್ಲಿ ಪೂರ್ಣನಾಗಿರುತ್ತಾನೆ. ಈ ವಿಷಯವು ಅಜ್ಞಾನಿಗಳಿಗೆ ತಿಳಿದಿರುವುದಿಲ್ಲ. ಆದರೂ ನಾನು ಇದ್ದೇನೆಂಬ ಅನುಭವವು ಎಲ್ಲರಿಗೂ ಸ್ವಾಭಾವಿಕವಾಗಿ - ಅಪರೋಕ್ಷವಾಗಿರುವುದರಿಂದ ಸ್ವಾನುಭವವೆಂಬ ಪ್ರಮಾಣದಿಂದ ಸಿದ್ಧನಾಗಿರುವ ನಾನು ಎಂಬ ಆತ್ಮನೇ ಪಾರಮಾರ್ಥಿಕ ಸತ್ಯವಸ್ತುವಾಗಿರುವನು. ಮನುಷ್ಯಾದಿ ಸಕಲ ಪ್ರಾಣಿಗಳ ನಿಜ ಆತ್ಮನು ಇವನೇ. ಇವನೇ ಬ್ರಹ್ಮವು. ಈ ಬ್ರಹ್ಮವೇ ಪಾರಮಾರ್ಥಿಕ ಸತ್ಯವು. ಈ ನಿರಪೇಕ್ಷವಸ್ತುವೇ ಜಗತ್ತಿಗೆ ಮೂಲಕಾರಣವು. ಇದೇ ನಿರಾಧಾರವಸ್ತುವೇ ಪ್ರಪಂಚಕ್ಕೆ ಮೂಲಾಧಾರವು. ಸ್ವಯಂಪ್ರಕಾಶ ಸ್ವತಂತ್ರವಸ್ತುವು ಇದೇ. ಸರ್ವವನ್ನು ಅರಿಯುವ ಈ ಸರ್ವಜ್ಞ ಚೇತನವಸ್ತುವೇ ಪಾರಮಾರ್ಥಿಕಸತ್ಯವೆಂದು ನಿಶ್ಚಯ ಮಾಡಿಕೊಳ್ಳಬೇಕು.

೮. ಇಂತು ಸತ್ಯವಸ್ತು ವಿಚಾರವನ್ನು ಪರೀಕ್ಷಿಸಿದ್ದಾಯಿತು. ಇನ್ನು ಈಗ ಮೂರು ಬಗೆಯ ಜ್ಞಾನಾನುಭವಗಳ ಸ್ವರೂಪ ಸಾಧನೆಗಳನ್ನು ವಿಚಾರ ಮಾಡೋಣ -

ಪ್ರಪಂಚದಲ್ಲಿ ನಾನಾ ಜನರ ಅಸಂಖ್ಯ ಅನುಭವಗಳು ಇರಬಹುದು. ಅವುಗಳ ಎಣಿಕೆಯು ಅಸಾಧ್ಯವೇ ಸರಿ. ಅಲ್ಲದೆ ಅವನ್ನೆಲ್ಲ ವಿಚಾರಮಾಡುವುದರಿಂದ ಪ್ರಕೃತ ಪರಮಾರ್ಥನಿಶ್ಚಯಕ್ಕೆ ಲಾಭವೇನೂ ಆಗುವುದಿಲ್ಲ. ಆದ್ದರಿಂದ ಸಾರ್ವತ್ರಿಕವಾಗಿ ಅವಸ್ಥಾತ್ರಯದಲ್ಲಿರುವ ಅನುಭವವನ್ನು ಪರೀಕ್ಷಿಸಿ ವಿಚಾರಮಾಡಿಕೊಂಡರೆ ಪ್ರಸಂಗಕ್ಕೆ ಸಾಕಾಗುವುದು. ಈ ಕ್ರಮದಲ್ಲಿ ಚಿಂತಿಸಿ ತಿಳಿದುಕೊಂಡರೆ ತತ್ತ್ವನಿಶ್ಚಯ ಆಗುವುದು.

೧. ಸಾಮಾನ್ಯಾನುಭವ ಎಂದರೆ - ಸನ್ನಿವೇಶ, ಕ್ರಿಯೆ, ಕಾರಕ, ಪ್ರಮಾಣ, ಸಂನಿಕರ್ಷ (ಸಂಬಂಧ)ಗಳು ಸೇರಿದಾಗ ಎಲ್ಲ ಜನರಿಗೂ ಒಂದೇ ಬಗೆಯ ಜ್ಞಾನ ಉಂಟಾಗುವುದು. ಇದೇ ಸಾಮಾನ್ಯಾನುಭವವು. ಚೈತ್ರ ಎಂಬ ಪುರುಷ ಪ್ರಮಾತೃವು ಗುರುವನ್ನು ಕಣ್ಣಿನಿಂದ ನೋಡಿ ಇದು ಗುರು ಎಂದು ತಿಳಿದುಕೊಳ್ಳುವಂತೆ ಇನ್ನುಳಿದ

ಮತ್ತೊಬ್ಬನೂ ಹಾಗೆ ಎಂದೇ ತಿಳಿದುಕೊಳ್ಳುತ್ತಾನೆ. ಬೇರೆ ತರಹ ತಿಳಿಯುವುದಿಲ್ಲ. ಜ್ಞಾನ ಅನುಭವ ಎರಡೂ ಒಂದೇ. ಈ ಸ್ಥಳದಲ್ಲಿ ನೋಡುವವನು ಪ್ರಮಾತೃವಾಗಿರುತ್ತಾನೆ. ಬಾಹ್ಯದಲ್ಲಿ ದೃಶ್ಯವಸ್ತುವು ವಿಷಯವಾಗಿರುತ್ತದೆ. ಪ್ರಮಾತೃವಿನ ಮನಸ್ಸಿನಲ್ಲಿ ಜ್ಞಾನ ಉಂಟಾಗುವುದು. ಇದೇ ತ್ರಿಪುಟೀದ್ವೈತವಾಗಿರುತ್ತದೆ. ಹೀಗೆ ಮೂರು ಬೇರೆ ಬೇರೆಯಾಗಿರು-ತ್ತದೆ. ಜ್ಞಾನವು ಕೂಡ ಮನೋವೃತ್ತಿ ಅಂದರೆ ಪ್ರತ್ಯಯರೂಪವಾಗಿರುತ್ತದೆ. ಪ್ರತಿಬಿಂಬರೂಪವಾಗಿರುತ್ತದೆ. ಇಂತಹ ಜ್ಞಾನವು ಒಂದು ಕ್ಷಣದಲ್ಲಿ ಹುಟ್ಟಿ ಮರುಕ್ಷಣದಲ್ಲಿ ನಾಶಹೊಂದುತ್ತದೆ. ಆದ್ದರಿಂದ ಇದು ಸತ್ಯವಾದ ಜ್ಞಾನವಲ್ಲ. ಇದನ್ನು ಜ್ಞಾನಾಭಾಸ- ಜ್ಞಾನದಂತೆ ತೋರುವುದು ಎನ್ನಬಹು-ದಾಗಿದೆ. ನಿಜವಾದ ಜ್ಞಾನವಲ್ಲ. ನಿಜವಸ್ತುವಲ್ಲ ಎಂದು ತಿಳಿಯಬೇಕು.

೨. ವಿಭಕ್ತಾನುಭವ. ಎಂದರೆ ಸ್ವಪ್ನದಲ್ಲಾಗುವ ಜ್ಞಾನಕ್ಕೆ ಹೆಸರು. ವಿಭಕ್ತ ಎಂದರೆ ಬೇರೆಯಾರಿಗೂ ತಿಳಿಯದಂತೆ, ತಾನೊಬ್ಬನೇ ಏಕಾಂತವಾಗಿ ವಿಷಯವನ್ನು ಅನುಭವಿಸು-ವುದು. ಜ್ಞಾನಮಾಡಿಕೊಳ್ಳುವುದು. ಒಬ್ಬನ ಸ್ವಪ್ನದಲ್ಲಿ ಇರುವ ಸಾಮಗ್ರಿಗಳು ಮತ್ತು ಉಂಟಾಗುವ ಜ್ಞಾನವು ಅವನೊಬ್ಬನಿಗೇ ಕ್ಲಿಪ್ತವಾಗಿರುವುದು. ಇದು ಎಲ್ಲರಿಗೂ ತಿಳಿದೇ ಇದೆ. ಹೀಗೆ ಸ್ವಪ್ನಪ್ರಪಂಚವು ಒಬ್ಬೊಬ್ಬರಿಗೂ ಬೇರೆ ಬೇರೆಯಾಗಿಯೇ ಇರುವುದರಿಂದ ಅವು ಬೇರೆ ಬೇರೆ ಲೋಕಗಳೋ ಬೇರೆ ಬ್ರಹ್ಮಾಂಡವೋ ಎಂಬಂತೆ ಇರುವುವು. ಆದ್ದರಿಂದ ಸ್ವಪ್ನಾನುಭವವು ಸಾಮಾನ್ಯಾನುಭವವಾಗಿರುವುದಿಲ್ಲ. ಆದರೂ ಸ್ವಪ್ನಾನುಭವವಾಗುವಾಗ ಎಚ್ಚರದಲ್ಲಾಗುವಂತೆ ಸುಖ ದುಃಖ ವೇದನೆಗಳು ಉಂಟಾಗುವುದರಿಂದ ಇದನ್ನು ಜ್ಞಾನ ಅನುಭವ ಎಂದು ಒಪ್ಪಲೇಬೇಕು. ಈ ಏಕಾಂತಾನುಭವದಲ್ಲಿಯೂ ಜ್ಞಾತೃ, ಜ್ಞೇಯ, ಜ್ಞಾನ ಎಂಬ ತ್ರಿಪುಟೀದ್ವೈತ ಇರುವುದರಿಂದ ಜಾಗ್ರತ್- ಸ್ವಪ್ನ ಇವೆರಡನ್ನು ಸಮಾನ. ಒಂದೇ ಎಂದು ಭಾವಿಸಬಹುದಾಗಿದೆ ಎಂದು ಬಲ್ಲವರು ಹೇಳುವರು. ಸ್ವಪ್ನವು ಮಿಥ್ಯೆ ಎಂದು ಎಲ್ಲರಿಗೂ ಗೊತ್ತಿದೆ. ಹೀಗೆ ವಿಭಕ್ತಾನುಭವವೇ ಸ್ವಪ್ನದ ಜ್ಞಾನವು.

೨. ವಿವಿಕ್ತಾನುಭವ ಎಂದರೆ. ತುರೀಯ ಜ್ಞಾನಕ್ಕೆ ಹೆಸರು. ನಿತ್ಯ ಅನಿತ್ಯ ವಸ್ತು ಜ್ಞಾನಮಾಡಿಕೊಂಡು, ವಿಚಾರಪೂರ್ವಕವಾಗಿ ಸತ್ಯ ಮಿಥ್ಯಾವಸ್ತುಗಳ ಸ್ವರೂಪವನ್ನು ತಿಳಿದು ನಿಶ್ಚಯಮಾಡಿಕೊಂಡಾಗ ಉಂಟಾಗುವ ವಿವೇಕಜ್ಞಾನವೇ ವಿವಿಕ್ತಾನುಭವವಾಗಿರುತ್ತದೆ. ಇದು ಸಾಕ್ಷಾದ್ ಆತ್ಮಾನುಭವರೂಪದ ಬ್ರಹ್ಮಜ್ಞಾನವೇ ಆಗಿರುತ್ತದೆ. ಈ ಜ್ಞಾನವು ಮೊದಲಿಗೆ ಮನೋವೃತ್ತಿರೂಪದಿಂದ ಉಂಟಾಗುವುದಾದರೂ ಕಾಲಾಂತದಲ್ಲಿ ಜ್ಞಾನಸ್ವರೂಪದ ಆತ್ಮಾಕಾರವಾಗಿಯೇ ಹೊಳೆಯುವುದರಿಂದ ಉಳಿಯುವುದರಿಂದ ಅರಿಯುವಾತನ ಸ್ವರೂಪವೇ ಆಗಿರುವುದು. ಅಂದರೆ ತಾನು ತನ್ನನ್ನೇ ಅರಿಯುವುದಾಗುವುದು. ಅಂದಾಗ ತ್ರಿಪುಟೀ ದ್ವೈತವಿರುವುದಿಲ್ಲ. ಜ್ಞಾತೃ ಜ್ಞೇಯ ಜ್ಞಾನ ಈ ಮೂರೂ ಒಂದೇ ಆಗಿರುವುದು. ಆದ್ದರಿಂದ ಈ ಜ್ಞಾನಾನುಭವವು ಮನೋವೃತ್ತಿರೂಪವಾಗುವುದಿಲ್ಲ. ಸಾಕ್ಷಿದ್ರಷ್ಟೃಸ್ವರೂಪವೇ ಆಗಿರುವುದು. ಅವಸ್ಥಾತ್ರಯದಲ್ಲಿ ತೋರುವ, ಇರುವ ಜ್ಞಾನಕ್ಕಿಂತ ಈ ಅನುಭವವು ವಿಲಕ್ಷಣವಾಗಿರುವುದರಿಂದ ಈ ಆತ್ಮಾನುಭವರೂಪದ ಜ್ಞಾನವನ್ನು ತುರೀಯ ಜ್ಞಾನ ಎಂದು ತಿಳಿಸಿಕೊಡುತ್ತಾರೆ. ಇಂತಹ ಜ್ಞಾನವೇ ಇಲ್ಲ ಎಂದು ಬಗೆಯಬಾರದು. ಏಕೆಂದರೆ- ನಾನು ಇದ್ದೇನೆಂಬ ಅನುಭವವು ಎಲ್ಲರಿಗೂ ಯಾವಾಗಲೂ ಇದ್ದೇ ಇರುವುದಕ್ಕೆ ಇದೇ ನಿಜದಲ್ಲಿ ಆತ್ಮಾನುಭವವಾಗಿರುತ್ತದೆ. ಆದರೆ ಇದು ಎಲ್ಲರಿಗೂ ತಿಳಿದಿರುವುದಿಲ್ಲ. ವಿಚಾರಮಾಡಿಕೊಳ್ಳದಿದ್ದರೆ ನಿಜವು ಗೊತ್ತಾಗುವುದಿಲ್ಲ. ನಾನು ಇದ್ದೇನೆಂದು ಹೇಳುವವನಿಗೆ ತಾನಿರುವುದು ಮೊದಲೇ ತಿಳಿದಿರುತ್ತದಲ್ಲವೆ! ತಿಳಿದಿರುವುದನ್ನು ತಾನೇ ಹೇಳುತ್ತಾನೆ. ಹಾಗೆ ತಾನು ಇರುವುದನ್ನು ಗೊತ್ತುಮಾಡಿಕೊಂಡುದು ತನ್ನಿಂದಲೇ. ಮನಬುದ್ಧೀಂದ್ರಿಯ ಸಾಧನಗಳಿಂದಲ್ಲ. ಬೇರೆ ಬಾಹ್ಯವಸ್ತುವನ್ನು ತಿಳಿದುಕೊಳ್ಳುವುದಕ್ಕೆ ಮನಸ್ಸು ಸಾಧನವಷ್ಟೆ ಹೊರತು ತನ್ನನ್ನು ತಾನು ಅರಿತುಕೊಳ್ಳುವುದಕ್ಕೆ ಬೇರೆ ಸಾಧನ ಬೇಕಿರುವುದಿಲ್ಲ. ಅಂದಾಗ ತಾನಿರುವುದನ್ನು ಸ್ವಾನುಭವದಿಂದ ತಾನೇ ಅರಿತುಕೊಂಡಿರುತ್ತಾನೆ ಎಂದಾಯಿತು. ಆದ್ದರಿಂದ

काठके २-१२ गूढं अनुप्रविष्टं - प्राकृतविषयविकारविज्ञानैः प्रच्छन्नम् इति भाष्यम्

ಸರ್ವರಿಗೂ ತಾವು ಇರುವ ಅನುಭವವು, ತನಗೆ ತಾನೆ ಇದ್ದೇ ಇದ್ದಿರುತ್ತದೆ ಎಂದು ನಿಶ್ಚಯವಾಗುವುದು. ಇಂತಹ ಅನುಭವಸ್ವಭಾವದ ತಮ್ಮ ಸ್ವರೂಪವನ್ನು ಅಂದರೆ ಆತ್ಮನನ್ನು ಜಡಸ್ವರೂಪದ ದೇಹೇಂದ್ರಿಯಾದಿಗಳಿಂದ ಬೇರ್ಪಡಿಸಿಕೊಂಡು ಪೃಥಕ್ಕಾಗಿ ತಿಳಿದುಕೊಂಡಾಗ ಪ್ರಮಾತೃ ಪುರುಷರಿಗೆ ತಾನು ನಿತ್ಯಜ್ಞಾನಾನಂದಸ್ವಭಾವದ ಆತ್ಮನೇ ಎಂಬ ಅರಿವಾಗುವುದು. ಇದೇ ತುರೀಯಜ್ಞಾನ, ಅಪರೋಕ್ಷಜ್ಞಾನ, ವಿವೇಕಾನುಭವವಾಗಿರುತ್ತದೆ.

ಈ ವಿಚಾರವು ಜನರಿಗೆ ಸುಲಭವಾಗಿ ಏಕೆ ತಿಳಿಯುವುದಿಲ್ಲವೆಂದರೆ - ಜಾಗ್ರದ್ವ್ಯವಹಾರಕಾಲದಲ್ಲಿ ಇಂದ್ರಿಯಗಳ ಮೂಲಕ ಹೊಸಹೊಸ ವಿಷಯಗಳ ಜ್ಞಾನವು ಅಂದರೆ ವಿಶೇಷಜ್ಞಾನವು ಉಂಟಾಗುತ್ತಿರುವುದು. ಇದೇ ಅವಸ್ಥೆಯು ಆ ವಿಶೇಷಜ್ಞಾನದಲ್ಲಿ ಆತ್ಮಪ್ರಕಾಶರೂಪದ ಶುದ್ಧಜ್ಞಾನವು ಅಡಗಿ ಇರುವುದು, ಅಂತರ್ಗತವಾಗಿರುವುದು. ಹೀಗೆ ವಿಷಯಜ್ಞಾನ ಮತ್ತು ಆತ್ಮಪ್ರಕಾಶಜ್ಞಾನ ಈ ಎರಡೂ ಸಂಕೀರ್ಣವಾಗಿರುವುದರಿಂದ ಶುದ್ಧಜ್ಞಾನವು ವಿವಿಕ್ತವಾಗುವುದಿಲ್ಲ; ಸ್ಫುಟವಾಗಿ ತಿಳಿಯುವುದಿಲ್ಲ. ಸ್ವಪ್ನ ಮತ್ತು ಜಾಗರ ಈ ಎರಡು ಅವಸ್ಥೆಗಳಲ್ಲಿ ಈ ನಿರ್ವಿಶೇಷಜ್ಞಾನ ಮತ್ತು ಸವಿಶೇಷಜ್ಞಾನ ಎರಡೂ ಬೆರೆತುಕೊಂಡೇ ಇರುವುದರಿಂದ ಅವುಗಳ ವಿವೇಕವು ಬಹು ಕಠಿಣ. ಸುಲಭವಾಗಿ ಇದೇ ಶುದ್ಧಜ್ಞಾನ ಎಂದು ಗೊತ್ತಾಗುವುದಿಲ್ಲ. ಆದ್ದರಿಂದ ಇದನ್ನು ನಿದ್ರಾಸ್ಥಿತಿಯಲ್ಲಿ ಪರೀಕ್ಷಿಸಿದರೆ ಈ ಜ್ಞಾನದ ವಿವಿಕ್ತತೆಯು ತಿಳಿಯುವುದು. ಸುಷುಪ್ತಿಯಲ್ಲಿ ಆತ್ಮನಿಗೆ ದೇಹೇಂದ್ರಿಯಗಳ ಸಂಬಂಧ ಪೂರ್ತಿ ತಪ್ಪಿರುತ್ತದೆ. ಬಾಹ್ಯ-ವಿಜ್ಞಾನ ಇರುವುದಿಲ್ಲ. ಆತ್ಮನು ಕೇವಲರೂಪದಿಂದಿರುತ್ತಾನೆ. ನಿದ್ರಾಸುಖವನ್ನು ಅನುಭವಿಸಿಕೊಂಡಿರುತ್ತಾನೆ. ಆಗ ಸುಖಜ್ಞಾನಾನುಭವಕ್ಕೆ ಮನ ಆದಿ ಸಾಧನವೇನೂ ಇರುವುದಿಲ್ಲ. ಹೀಗೆ ಸುಷುಪ್ತಿಸ್ಥಿತಿಯಲ್ಲಿ ಆತ್ಮನು ಸುಖಾನುಭವರೂಪದಲ್ಲಿರುವುದು ತಿಳಿಯುವುದು. ಅನುಭವವೇ ಜ್ಞಾನ. ಜ್ಞಾನವೇ ಸುಖ (ಆನಂದ) ಜ್ಞಾನಾನಂದರೂಪನು ಆತ್ಮನು ಎಂದಾಯಿತು.

ನಿದ್ರಾಕಾಲದಲ್ಲಿ ಆತ್ಮನಿಗೆ ಜ್ಞಾನವೇ ಇರುವುದಿಲ್ಲೆಂದು ಬಗೆಯಬಾರದು. ಏಕೆಂದರೆ- ನಿದ್ದೆಯಿಂದ ಎಚ್ಚೆತ್ತ ಮನುಷ್ಯನು ಸುಖವಾಗಿ ನಿದ್ದೆ ಆಯಿತು ಎಂದು ತನ್ನ ಅನುಭವವನ್ನು ಸ್ಮರಿಸಿಕೊಂಡು ಹೇಳುತ್ತಾನಲ್ಲವೇ? ಸ್ಮರಣೆಯು ಅನುಭವಪೂರ್ವಕವಾಗಿಯೇ ಇರುವುದು ನಿಯಮ. ಆದ್ದರಿಂದ ಸುಷುಪ್ತಿಯಲ್ಲಿ ಅನುಭವ-ಜ್ಞಾನವು ಇದ್ದೇ ಇರುವುದೆಂದು ತಿಳಿಯಬೇಕು. ಆಗ ಆತ್ಮನೇ ಇರಲಿಲ್ಲ ಎಂದೂ ಹೇಳುವಂತಿಲ್ಲ. ಏಕೆಂದರೆ- ಆತ್ಮನೇ ಇಲ್ಲದಿದ್ದರೆ ಆ ನಿದ್ರಾಸ್ಥಿತಿಯಿಂದ ದೇಹೇಂದ್ರಿಯಗಳನ್ನು ಎಚ್ಚರಪಡಿಸುವರಾರು? ಆತ್ಮನೇ ಅವನ್ನು ಚೇತನಗೊಳಿಸುವವನು. ಇಷ್ಟು ವಿಚಾರಗಳಿಂದ ನಿಶ್ಚಯಿಸಿಕೊಳ್ಳಬೇಕಾದ್ದೇನೆಂದರೆ- ಆತ್ಮನು ಸರ್ವದಾ ಇರುವವನು. ಅವನು ನಿರ್ವಿಶೇಷ ಜ್ಞಾನಸ್ವರೂಪನು. ಅವನಿಗೆ ಜ್ಞಾನವುಂಟಾಗಲು ಸಾಧನ-ಪ್ರಮಾಣಗಳೇನೂ ಬೇಕಾಗಿಲ್ಲ. ಅವನು ಸದಾ ದೃಗ್ರೂಪ ಸಾಕ್ಷಿ ಆಗಿರುತ್ತಾನೆ. ಯಾವಾಗಲೂ ವಿವಿಕ್ತಾನುಭವರೂಪದ ನಿರ್ವಿಶೇಷ ಜ್ಞಾನಸ್ವಭಾವನೇ ಆಗಿರುತ್ತಾನೆ. ಹೀಗೆಂಬುದನ್ನು ತಿಳಿದುಕೊಂಡು ಪ್ರಮಾತೃಪುರುಷನು -ಜಿಜ್ಞಾಸುವು ತನ್ನ ದೇಹೇಂದ್ರಿಯಪ್ರಾಣಮನ ಆದಿಗಳನ್ನು ಹೊರತುಪಡಿಸಿಕೊಂಡು, ಹೊರಕ್ಕೆ ತಳ್ಳಿ, ತನ್ನಲ್ಲಿ ತಾನೇ ಹಿಂದಕ್ಕೆ ಸರಿದು ಸ್ವಮಾತ್ರ ಸಿದ್ಧನಾಗಿ ತಾನು ಆತ್ಮನು, ಸನ್ಮಾತ್ರ ಚಿನ್ಮಾತ್ರ ಆನಂದಮಾತ್ರ ಎಂದರಿತುಕೊಳ್ಳುವುದೇ ತುರೀಯಾನುಭವವೆಂಬ ವಿವಿಕ್ತಾನುಭವವಾಗಿದೆ. ಸರ್ವದಾ ನಿಜ ಆತ್ಮನಿರುವುದೇ ಹೀಗೆ. ಆತ್ಮನು ಹೇಗೆ ಇರುವನೋ, ಹಾಗೆ ಇದ್ದಂತೆ ಅರಿಯುವುದೇ ಸಮ್ಯಗ್ಜ್ಞಾನವೆನ್ನುವುದು.

ಹೀಗೆ ವಿಚಾರಪ್ರಮಾಣದಿಂದ ನಿಶ್ಚಯವಾದ ಬಳಿಕ ಈಗ ಮತ್ತೆ ಈ ಮೂರು ಬಗೆಯ ಸತ್ಯಗಳನ್ನು ಮೂರು ಬಗೆಯ ಜ್ಞಾನಾನುಭವಗಳನ್ನು ಹೋಲಿಸಿ ನೋಡಿ ವಿವೇಕಿಸಿದರೆ ಗೊತ್ತಾಗುವುದೇನೆಂದರೆ- ಪಾರಮಾರ್ಥಿಕ ಸತ್ಯವೇ ನಿಜ ಸತ್ಯ ಸತ್ಯ. ಅಂತರ-

ವ ಆತ್ಮ ಚೇತನ ವಸ್ತುವೇ ಪರಮಾರ್ಥವಾದುದು. ಮತ್ತು ಅವಿಚ್ಛಿನ್ನಾನುಭವವೇ ನಿಜವಾದ ಜ್ಞಾನವು. ಅಂತಹ ಜ್ಞಾನಸ್ವರೂಪನೇ ಆತ್ಮನು. ಅಂದಾಗ ಸತ್ಯವೇ ಜ್ಞಾನವು. ಜ್ಞಾನವೇ ಸತ್ಯ ಪರಮಾರ್ಥವು. ಇಂತಹ ಸತ್ಯ ಜ್ಞಾನಸ್ವರೂಪನೇ ನಿಜ ಆತ್ಮನಾಗಿದ್ದಾನೆ. ಹೀಗೆಂದು ಕಂಡುಕೊಳ್ಳುವುದೇ ಅಪರೋಕ್ಷ ಸಮ್ಯಗ್ ಜ್ಞಾನವಾಗಿದೆ. ಇತಿ. ಶಿವಮ್.

ಅಚಿಂತ್ಯಾವ್ಯಕ್ತರೂಪಾಯ ನಿರ್ಗುಣಾಯ ಗುಣಾತ್ಮನೇ।
ಸಮಸ್ತಜಗದಾಧಾರಮೂರ್ತಯೇ ಬ್ರಹ್ಮಣೇ ನಮಃ॥

ಅಮುಕ್ತನಾದ ಜೀವಪುರುಷನು ಈ ಲೋಕದಲ್ಲಿ ಹುಟ್ಟಿ ಶರೀರಿ ಆಗ-ದಿದ್ದರೆ ಅವನಿಗೆ ಮನ ಇಂದ್ರಿಯಾದಿ ಕರಣಗಳು, ಜ್ಞಾನಸಾಧನಗಳು ಇರುವುದಿಲ್ಲ-ವಾದ್ದರಿಂದ ಅವನು ತತ್ತ್ವಜ್ಞಾನ ಮಾಡಿಕೊಳ್ಳಲು ಸಾಧ್ಯವಿಲ್ಲ. ಮುಕ್ತಿ ಪಡೆಯಲು ಶಕ್ಯವಾಗುವುದಿಲ್ಲ. ಆದ್ದರಿಂದ ಶ್ರೇಯಃಪ್ರಾಪ್ತಿ ಮಾಡಿಕೊಳ್ಳಲು ಈ ಮಾನವ ಅವತಾರ-ದಲ್ಲಿ ಜನ್ಮವನ್ನು ಹೊಂದಿಕೊಳ್ಳಬೇಕು.

ಹೊಂದಿಕೊಂಡಂತೆ ಜನ್ಮಲಾಭವಾದ ಮಾತ್ರಕ್ಕೆ ಇಷ್ಟಸಿದ್ಧಿ ಆಗಲಾರದು. ಏಕೆಂದರೆ-ಜನ್ಮಪ್ರಾಪ್ತಿ ಆಗುವುದರೊಡನೆಯೇ ಆತ್ಮಾನಾತ್ಮರ ಅಂದರೆ ದೇಹ ಆತ್ಮರ ಅನ್ಯೋನ್ಯ ತಾದಾತ್ಮ್ಯಾಧ್ಯಾಸದ ಮಿಥ್ಯಾಜ್ಞಾನವೇ ನಿಸರ್ಗಸಿದ್ಧವಾಗಿ ಗಂಟುಬಿದ್ದಿರುವುದು. ಈ ಮಿಥ್ಯಾಜ್ಞಾನವಿರುವಾಗ ಮನುಷ್ಯನಿಗೆ ಪ್ರಮಾತೃತ್ವವುಂಟಾಗಿ ಅವನು ತನ್ನ ಮನ ಆದಿ ಇಂದ್ರಿಯಗಳ, ಪ್ರಮಾಣ ಮೂಲಕವಾಗಿಯೇ ಬಾಹ್ಯವಸ್ತುವಿಷಯಗಳನ್ನು ಮಾತ್ರವೇ ಗ್ರಹಿಸಿಕೊಂಡಿರುವನು. ತಿಳಿದುಕೊಳ್ಳುವ ರೂಢಿ ಮಾಡಿಕೊಂಡಿರುತ್ತಾನೆ. ಈ ಪ್ರಕಾರವಾಗಿರುವ ವಿಶೇಷಜ್ಞಾನಗಳೇ ಪ್ರಾಮಾಣಿಕವಾದವು ಎಂಬ ನಂಬಿಕೆಯು ಅವನಿಗೆ ಉಂಟಾಗಿರುತ್ತದೆ. ಜಾಗ್ರತ್ಕಾಲದಲ್ಲಿ ಉಂಟಾಗುವ ಈ ಬಗೆಯ ಜ್ಞಾನಕ್ಕೆ ಜಾಗ್ರತ್ತಿನಲ್ಲಿ ಬಾಧೆಯೇನೂ ಉಂಟಾ-ಗುವುದಿಲ್ಲ. ಆದ್ದರಿಂದ ಈ ಬಾಹ್ಯಜಗತ್ತೆಲ್ಲವೂ ಸತ್ಯವೇ" ಎಂಬ ನಂಬಿಕೆಯು ಮನುಷ್ಯನಿಗೆ ಸ್ವಾಭಾವಿಕವಾಗಿದೆ. ವಿಚಾರ ಮಾಡಿಕೊಳ್ಳದೇ ನಂಬಿಕೊಂಡಿರುವುದಾಗಿರುತ್ತದೆ. ಮನ ಆದಿ ಇಂದ್ರಿಯಗಳು ಬಹಿರ್ಮುಖವಾಗಿಯೇ ಇರುವುವಲ್ಲದೆ ಜನ್ಮಜನ್ಮಾಂತರಗಳ ಕುಸಂಸ್ಕಾರಗಳಿಂದಲೂ ಕೂಡಿರುತ್ತವೆ. ಶುದ್ಧವಾಗಿರುವುದಿಲ್ಲವಾದ್ದರಿಂದ ಶುದ್ಧವಾದ ಜ್ಞಾನವು ಉಂಟಾಗಲಾರದು. ಮನವನ್ನು ಅನ್ನದಿಂದಲೇ ಹುಟ್ಟಿದ್ದು ಅನ್ನವನ್ನೇ ಅವ-ಲಂಬಿಸಿಕೊಂಡಿರುವುದರಿಂದ ಇದು ಅನ್ನಮಯವಾಗಿರುವುದರಿಂದ ಭೌತಿಕವಾದವುಗಳನ್ನೇ ಗ್ರಹಿಸುತ್ತಾ ಅವನ್ನು ಸತ್ಯವೆಂದು ನಂಬಿಕೊಂಡಿರುವುದು ಸ್ವಾಭಾವಿಕವಾಗಿರುತ್ತದೆ. ಮತ್ತೆ ಜಗತ್ತೆ

ಪದಾರ್ಥಗಳು ಕೂಡ ಆತ್ಮೈಕಮೂಲಕಾರಣದಿಂದ ಹುಟ್ಟಿಕೊಂಡದ್ದು ತನ್ಮಯವೇ ಆಗಿರುತ್ತವೆ. ಆತ್ಮನು ಕೂಡ ಸತ್ಯವಾಗಿದ್ದು ತೋರಿಕೊಳ್ಳುವುದೇ ಸ್ವಭಾವವಾದ್ದರಿಂದ ತತ್ತನ್ಮಯನಾಗಿಯೇ ತೋರುತ್ತಿರುವನು. ಜಗತ್ಸಂಸಾರ ಸ್ವಭಾವವು ಹೀಗಿರುವುದರಿಂದ ಇಲ್ಲಿ ಹುಟ್ಟಿದ ಮನುಷ್ಯನು ತನ್ನ ನಿಜವನ್ನರಿಯದೆ ಸ್ವಾಭಾವಿಕವಾಗಿ ತನ್ನ ದೇಹೇಂದ್ರಿಯಾದಿ ಸಂಘಾತವನ್ನೇ ನಾನು ನಾನು ಎಂದುಕೊಳ್ಳುತ್ತಿರುವನು. ಇದೇ ಅಹಂಕಾರವು. ಈ ಬಗೆಯ ಜ್ಞಾನವು ಪ್ರಮಾಣದಿಂದ ಉಂಟಾಗುವುದಿಲ್ಲ. ಅದಕ್ಕೆ ತಕ್ಕ ಪ್ರಯತ್ನವೂ ನಡೆದಿರುವುದಿಲ್ಲ. ಸ್ವಾಭಾವಿಕವಾಗಿ ಸ್ವಪ್ನದಲ್ಲಿ ಜ್ಞಾನವುಂಟಾಗುವಂತೆ ನಾನು ಮನುಷ್ಯ ಎಂಬ ಜ್ಞಾನವು ಉಂಟಾಗುತ್ತಿರುವುದು. ಇದೇ ಸ್ವಾಭಾವಿಕಜ್ಞಾನವು. ಇದೇ ಅವಿದ್ಯೆಯು.

ಅಖಂಡಾದ್ವಿತೀಯನಾದ ಪರಮಾತ್ಮನು ನಾನಾ ಪ್ರಾಣಿ ವ್ಯಕ್ತಿಗಳಲ್ಲಿ ಬಿಡಿಬಿಡಿ-ಯಾಗಿ ತೋರಿಕೊಳ್ಳುವನೆಂಬುದನ್ನು ಆಕಾಶದೃಷ್ಟಾಂತದಿಂದ ತಿಳಿದುಕೊಳ್ಳಬಹು-ದಾಗಿದೆ. ಆಕಾಶವು ಸರ್ವತ್ರ ವ್ಯಾಪ್ತವಾಗಿದ್ದು ಒಂದೇ ಆಗಿರುವುದಷ್ಟೆ! ಆದರೂ ಘಟಾಕಾಶ ಮಠಾಕಾಶ. ಮಹಾಕಾಶ ಎಂಬೀರೀತಿ ಭೇದವ್ಯವಹಾರವಿರುವುದು. ಅಂದರೆ ಒಂದು ಹೊಸ ಘಟವೋ ಒಂದು ಮಠವೋ ನಿರ್ಮಾಣವಾದಾಗ ಆಗಿಂದಾ-ಗಲೇ ಆ ಘಟದಲ್ಲೂ ಆ ಮಠದಲ್ಲೂ ಆಕಾಶವು ತುಂಬಿಕೊಂಡುಬಿಡುವುದು. ಅಂದರೆ ಅಲ್ಲಿ ಪೃಥಕ್ ಸ್ಥಳಾವಕಾಶವು ಏರ್ಪಟ್ಟಂತಾಗುವುದು. ಆಗ ಆಕಾಶಕ್ಕೆ ಘಟವೂ ಮಠವೂ ಉಪಾಧಿಯಾಗಿದ್ದುಕೊಂಡು ಅಖಂಡವಾಗಿರುವ ಆಕಾಶವನ್ನು ಒಂದು ಗೊತ್ತಾದ ಅಳತೆ, ಒಂದು ಕ್ಲೃಪ್ತವಾದ ಬೇರೆಬೇರೆ ಆಕಾರ ಉಳ್ಳದ್ದಾಗಿರುವಂತೆ ಮಾಡುವುವು. ಇಂದ್ರಿಯಕ್ಕೆ ಗೋಚರವಾಗದೇ ಇರುವಂತಹ ಸೂಕ್ಷ್ಮವಸ್ತುವನ್ನು ಯಾವ ಸ್ಥೂಲವಸ್ತುವು ತನ್ನ ಗುಣಧರ್ಮಗಳುಳ್ಳದ್ದಾಗಿರುವಂತೆ ತೋರ್ಪಡಿಸುವುದೋ ಆ ಸ್ಥೂಲವಸ್ತುವಿಗೆ ಉಪಾಧಿ ಎನ್ನುತ್ತಾರೆ. ಈ ಉಪಾಧಿವಸ್ತುವಿನ ಗುಣಧರ್ಮಗಳು ಅಲ್ಲಿ ಉಪಹಿತವಾದ ಸೂಕ್ಷ್ಮವಸ್ತುವಿಗೆ ನಿಜವಾಗಿ ಸಂಬಂಧಪಟ್ಟುಕೊಂಡಿರುವುದಿಲ್ಲ. ಆದರೆ ಹಾಗೆ ಉಪಾಧಿಸಂಬಂಧವಿಲ್ಲದಿದ್ದರೆ ಆ ಸೂಕ್ಷ್ಮ

ವಸ್ತು ಇರುವುದು ತಿಳಿಯುವುದೇ ಇಲ್ಲ. ದೇಹದ ಮಧ್ಯದಲ್ಲಿ ಆತ್ಮನನ್ನು ಕಂಡುಹಿಡಿಯಬೇಕು. ಬೇರೆ ಕಡೆ ಆತ್ಮನು ಸಿಕ್ಕುವುದಿಲ್ಲ. ಅಂತೆಯೇ ಪ್ರಾಣಿಯ ಶರೀರವು ಹುಟ್ಟುವಾಗ ಆದಿಯಲ್ಲಿ ಗರ್ಭಪಿಂಡವು ಉದಯವಾಗುವಾಗಲೇ ಆ ಗರ್ಭದಲ್ಲಿ ಚೈತನ್ಯವು, ಅಂದರೆ ಸರ್ವವ್ಯಾಪಕನಾದ ಪರಮಾತ್ಮನು ಸೂಕ್ಷ್ಮರೂಪದಿಂದಲೇ ತುಂಬಿಕೊಳ್ಳುವನು. ಈ ಚೈತನ್ಯವೇ ಬುದ್ಧಿಯ ಗುಹೆಯಲ್ಲಿ ಪ್ರತಿಬಿಂಬಿಸಿಕೊಂಡಿದ್ದು ಆ ಶರೀರವನ್ನೂ ಅದರ ಪ್ರಾಣಗಳನ್ನೂ ಹಿಡಿದಿಟ್ಟುಕೊಂಡಿರುವುದರಿಂದ ಆ ಆತ್ಮನಿಗೆ ಜೀವಾತ್ಮ ಎಂದು ಹೆಸರಾಗಿದೆ. ಈ ಆತ್ಮನು ಸ್ವಯಂ ಅವಿಕಾರಿ-ಅಪರಿಣಾಮಿ ಆಗಿದ್ದರೂ ಆ ಶರೀರ ಪ್ರಾಣಾದಿಗಳನ್ನು ಪ್ರತಿಬಿಂಬರೂಪದಿಂದ ಆತುಕೊಂಡಿರುವಾಗ ಪರಿಣಾಮಗೊಂಡಂತೆ ತೋರುವನು. ವಸ್ತುತಃ ಪರಿಣಾಮಗೊಂಡಿರುವುದಿಲ್ಲ. ಕೆಂಪು ಮುಂತಾದ ಉಪಾಧಿ ಇದ್ದಾಗ ಅಥವಾ ಆ ಉಪಾಧಿ ತಪ್ಪಿಹೋದಾಗ ಆ ಆಕಾಶದಲ್ಲಿ ಯಾವ ವಿಕಾರವೂ ಉಂಟಾಗುವುದಿಲ್ಲವಷ್ಟೆ! ಹಾಗೆಯೇ ಆತ್ಮನಲ್ಲಿ ಶರೀರಪ್ರಾಣಾದಿಗಳ ಉಪಾಧಿಸಂಬಂಧ ಇದ್ದಾಗ ಅಥವಾ ಉಪಾಧಿಸಂಬಂಧ ತಪ್ಪಿಹೋದಾಗ ವಿಕಾರವೇನೂ ಉಂಟಾಗುವುದಿಲ್ಲ. ಆತ್ಮನು ಯಾವಾಗಲೂ ಸ್ವಯಂ ಅವಿಕಾರಿಯಾಗಿಯೇ ಇರುತ್ತಾನೆ. ಶರೀರ ಪ್ರಾಣಾದಿಗಳ ಗುಣಧರ್ಮಗಳು ಆತ್ಮನಿಗೆ ಸೇರಿದವಲ್ಲ. ಆತ್ಮನು ಸ್ವಯಂ ಶುದ್ಧನೇ ಆಗಿರುತ್ತಾನೆ. ಬೆಂಕಿಯಿಂದ ಚೆನ್ನಾಗಿ ಕಾದಿರುವ ಲೋಹವು ಪ್ರಕಾಶಿಸುವುದು, ಕಾದ ನೀರು ಸುಡುವುದು ಹಾಗೆಯೇ ಚೈತನ್ಯದಿಂದ ಕೂಡಿರುವ ದೇಹೇಂದ್ರಿಯಾದಿಗಳು ಚೈತನ್ಯಗೊಂಡು ಜ್ಞಾನಕರ್ಮವ್ಯವಹಾರಗಳಲ್ಲಿ ಪ್ರವರ್ತಿಸಿಕೊಂಡಿರುವುವು. ಸ್ವತಃ ಅವು ಜಡವಸ್ತುಗಳೇ.

ಇಷ್ಟು ವಿವರಣೆಯಿಂದ ಸಿದ್ಧವಾಗುವುದೇನೆಂದರೆ- ಮನುಷ್ಯನಿಗೆ ತನ್ನ ನಿಜ ಆತ್ಮಸ್ವರೂಪದ ನಿಶ್ಚಯಜ್ಞಾನವಾಗಿಕೊಳ್ಳಲು ಮನ ಆದಿ ಶರೀರದ ಆವಶ್ಯಕತೆಯಿರುತ್ತದೆ. ಹೀಗೆ ಅತ್ಯಗತ್ಯವಾದ ಶರೀರವು ದೊರೆತಾಗ ದೇಹಾತ್ಮತಾದಾತ್ಮ್ಯಾಧ್ಯಾಸವೇ ಮೊಟ್ಟಮೊದಲಿಗೆ ಉಂಟಾಗಿಬಿಡುವುದು. ಅಧ್ಯಾಸ-ಮಿಥ್ಯಾಜ್ಞಾನವಿರುವಾಗ ಪ್ರಮಾತೃವಾದ ಮನುಷ್ಯನಿಗೆ ಮನ ಆದಿ ಪ್ರಮಾಣಗಳ ಮೂಲಕ ನಡೆಯುವ ಜಗದ್ವ್ಯವಹಾರವೆಲ್ಲವೂ ಪ್ರಾಮಾಣಿಕವೆಂದೇ ನಂಬಿಕೆಯುಂಟಾಗುವುದು. ಈ ಪರಿಸ್ಥಿತಿ ಇರುವುದರಿಂದ ಸಮ್ಯಗ್ಜ್ಞಾನಮಾಡಿಕೊಳ್ಳಲು ಎಂತಹ ಬಿಕ್ಕಟ್ಟು ಇದೆ ಎಂಬುದು ಗೊತ್ತಾಗುವುದು.

अद्वैतं ब्रह्म । तद् अपरोक्षं सद् आत्मा नाम ।

ಬ್ರಹ್ಮ ಎಂದರೆ, ನಿರುಪಾಧಿಕ, ನಿರತಿಶಯ, ಚೇತನ ಎಂದರ್ಥವು. ಈ ಚೇತನವು ತಾನೇ ತಾನಾಗಿ ಯಾವಾಗಲೂ ಒಂದೇ ಇರುವುದು. ಎರಡನೆಯ ವಸ್ತುವೇ ಇರುವುದಿಲ್ಲ. ಅರಿಯುವಾತನಿಗೆ ಆ ವಸ್ತುವು ~~(ಅಪರೋಕ್ಷ (ಪ್ರತ್ಯಕ್ಷ))~~ ಸಾಕ್ಷಾತ್ ತಾನೇ ಆಗಿರುವುದರಿಂದ ಅದಕ್ಕೆ ಆತ್ಮ ಎಂಬ ಹೆಸರು ಸಲ್ಲುವುದು. ಆತ್ಮ ಎಂದರೆ ಸತ್ಯವಾಗಿ ಇರುವ ಸ್ವರೂಪ ಎಂದರ್ಥ. ಅಂದಾಗ ಅರಿಯುವವನ ಅನುಭವಸ್ವರೂಪನೇ ಬ್ರಹ್ಮಾತ್ಮನಾಗಿರುತ್ತಾನೆ.

ಸರ್ವದಾ ಶುದ್ಧ ಬುದ್ಧ ಮುಕ್ತಸ್ವಭಾವದ ಬ್ರಹ್ಮವು ಮನಸ್ಸಿಗೂ ಮಾತಿಗೂ ವಿಷಯ ಅಲ್ಲದ್ದರಿಂದ ಎಂದಿಗೂ ಯಾರಿಂದಲೂ ಅರಿಯಲ್ಪಡನಾಗುವುದಿಲ್ಲ. ಎಲ್ಲವನ್ನು ಅರಿಯುವಾತನೇ ಅವನು. ನಿತ್ಯ ಚೈತನ್ಯ ಜ್ಯೋತಿಯಾಗಿರುವುದರಿಂದಲೇ ಅವನು ಅದ್ವಿತೀಯ ಚೇತನನಾಗಿರುತ್ತಾನೆ. ನಿತ್ಯಸತ್ಯಸ್ವರೂಪದ ಆತ್ಮನಾಗಿರುತ್ತಾನೆ. ಈ ಆತ್ಮನಿಗಿಂತ ಬೇರೆ ಪದಾರ್ಥಗಳೆಲ್ಲವು ಅನಾತ್ಮಕಗಳೇ- ಜಡವಸ್ತುಗಳೇ ಸರಿ. ಜಡವಸ್ತುಗಳು ಏನನ್ನು ಅರಿಯಲಾರವು. ಅರಿಯಲ್ಪಡುವ ವಸ್ತುಗಳೇ ಆಗಿರುತ್ತವೆ. ಎಲ್ಲವನ್ನು ಅರಿಯುವ ಚೇತನನು ಇರುವುದು ಒಬ್ಬನೇ. ಉಳಿದವೆಲ್ಲವೂ ಅರಿಯಲ್ಪಡುತ್ತಿರುವುದು.

ಧರ್ಮ. ಜಾತಿ. ಗುಣ. ಕ್ರಿಯೆ ಸಂಬಂಧ ಮೊದಲಾದ ವಿಶೇಷಣವುಳ್ಳ ವಸ್ತುವನ್ನು ಮಾತು ತಿಳಿಸಿಕೊಡಬಲ್ಲದ್ದಾಗಿರುವುದು. ಅಂತಹ ವಸ್ತುವನ್ನು ಮನಸ್ಸು ತಿಳಿದುಕೊಳ್ಳಬಲ್ಲದು. ಆದರೆ ಶುದ್ಧ ಬ್ರಹ್ಮವು ಯಾವ ವಿಶೇಷಣವೂ ಇಲ್ಲದ ನಿರ್ವಿಶೇಷವಸ್ತುವಾಗಿರುವುದರಿಂದ ಮಾರ್ಗರೂಪವಾದ ಶಾಸ್ತ್ರವು ಅಂತಹ ಬ್ರಹ್ಮವಸ್ತುವನ್ನು ತಿಳಿಸಿಕೊಡುವುದಕ್ಕೆ ಒಂದು ಉಪಾಯವನ್ನು ಮಾಡಿದೆ. ಆ ಉಪಾಯಕ್ಕೆ ಅಧ್ಯಾರೋಪ-ಅಪವಾದ ಪ್ರಕ್ರಿಯೆ ಎನ್ನುತ್ತಾರೆ. ಈ ಉಪಾಯದ ಕ್ರಮದಿಂದ ಬ್ರಹ್ಮಾತ್ಮನನ್ನು ತಿಳಿದುಕೊಳ್ಳಬಹುದು.

ಪ್ರದೀಪ್ತರತ್ನೋಜ್ವಲಕುಂಡಲಾಯೈ ಸ್ಫುರನ್ಮಹಾಪನ್ನಗಭೂಷಣಾಯ ।
ಶಿವಾನ್ವಿತಾಯೈ ಚ ಶಿವಾನ್ವಿತಾಯ ನಮಶ್ಶಿವಾಯೈ ಚ ನಮಶ್ಶಿವಾಯ ॥

ಶುದ್ಧಬ್ರಹ್ಮವು ನಿರುಪಾಧಿಕ. ನಿರ್ಗುಣ. ನಿರ್ವಿಶೇಷ ಚೇತನನಾಗಿದ್ದರೂ ಶಾಸ್ತ್ರವು ಪ್ರತಿಪಾದನೆ ಮಾಡುವಾಗ, ಉಪದೇಶ ಮಾಡುವಾಗ ಆ ಮಹಾಚೇತನನನ್ನು ಮಾಯೋಪಾಧಿವಿಶಿಷ್ಟನೆಂದೂ, ಸರ್ವಜ್ಞ, ಸರ್ವಶಕ್ತನೆಂದೂ ಸೃಷ್ಟಿಕರ್ತನೆಂದೂ ತಿಳಿಸುತ್ತಾ ಅವನ ವಿಶೇಷರೂಪವನ್ನೇ ವರ್ಣಿಸುವುದು. ಅಂದಾಗ ಬ್ರಹ್ಮ ಚೇತನನಲ್ಲಿ ನಿರುಪಾಧಿಕನಾಗಿರುವಸ್ಥಿತಿ. ಸೋಪಾಧಿಕನಾಗಿರುವಸ್ಥಿತಿ ಎಂದು ಎರಡು ಸ್ಥಿತಿಯ ಪರಿಚಯ ಮಾಡಿಕೊಳ್ಳಬೇಕಾಯಿತು. ಇದರಿಂದ ಸರ್ವಜ್ಞ ಸರ್ವಶಕ್ತನಾದ ಈಶ್ವರ ಎಂಬುದು ಚೇತನನ ವಿಶೇಷಸ್ಥಿತಿಯಾಗಿಯೇ (ಶ್ರೌತ್ಯವಾದ) ಅಲ್ಪಜ್ಞ ಅಲ್ಪವೀರ್ಯನಾದ ಜೀವ ಎಂಬುದೂ ಚೇತನನ ವಿಶೇಷಸ್ಥಿತಿ ಎಂದು ತಿಳಿಸಿಕೊಳ್ಳಬೇಕಾಯಿತು. ಹೀಗೆ ವಿಶೇಷಸ್ಥಿತಿಯ ಚೇತನನ ಪರಿಚಯ ಮಾಡಿಕೊಂಡೇ ನಿರ್ವಿಶೇಷ ಚೇತನನನ್ನು ಗುರುತಿಸಿಕೊಳ್ಳಬೇಕು. ಬೇರೆ ಉಪಾಯ ಇಲ್ಲ. ವಿಶೇಷಸ್ಥಿತಿಯನ್ನು ಹೇಳಿದುದೇ ಅಧ್ಯಾರೋಪವು. ಅವುಗಳ ಅಪವಾದದಿಂದ ತಿಳಿದುಕೊಳ್ಳುವುದೇ ನಿರ್ವಿಶೇಷಸ್ಥಿತಿಯು. ಹೀಗೆ ಉಪದೇಶಮಾಡುವುದೇ ಸಂಪ್ರದಾಯವಾಗಿರುತ್ತದೆ.

ಹೀಗೆ ಸಂಪ್ರದಾಯರೀತ್ಯಾ ಉಪದೇಶಿಸಿದ್ದನ್ನನುಸರಿಸಿ ತಿಳಿದುಕೊಳ್ಳುವುದರಿಂದ ಬುಭುಕ್ಷು ಮತ್ತು ಮುಮುಕ್ಷು ಎಂಬ ಎರಡು ವರ್ಗದ ಜನರಿಗೂ ಉಪಕಾರವಾಗಿದೆ. ಬುಭುಕ್ಷು ಎಂದರೆ ಭೋಗಾಪೇಕ್ಷೆಯುಳ್ಳ ಜನ ಎಂದರ್ಥ. ತತ್ತ್ವಜ್ಞಾನಕಾಂಕ್ಷಿಗಳಲ್ಲದ ಜನರು ಧರ್ಮ. ಅರ್ಥ. ಕಾಮ. ಈ ತ್ರಿವರ್ಗಗಳಲ್ಲೇ ಅಂದರೆ ವ್ಯವಹಾರದಲ್ಲೇ ಪ್ರವರ್ತನೆ ಹೊಂದಿರುತ್ತಾರೆ. ಇಂತಹ ಜನರು ಸಾಂಪ್ರದಾಯಿಕ ಉಪದೇಶದಿಂದ ಈಶ್ವರಾಸ್ತಿತ್ವವನ್ನು ಗ್ರಹಿಸಿಕೊಂಡು ತಮ್ಮ ಇಷ್ಟಾರ್ಥಸಿದ್ಧಿ ಮಾಡಿಕೊಳ್ಳುವುದಕ್ಕಾಗಿಯೂ ಈಶ್ವರಾರಾಧನೆಯನ್ನು ಮಾಡಬೇಕೆಂದು ಅರಿತುಕೊಳ್ಳುವರು. ಮನುಷ್ಯನಿಗೆ ಇಂದ್ರಿಯಗಳು ಸಿದ್ಧವಾಗಿದ್ದು ಜ್ಞಾನಕರ್ಮಗಳು ಸ್ವಾಭಾವಿಕವಾಗಿದ್ದರೂ ಅದು ಕಾರ್ಯನಿರಬಾರದು. ಆದರೆ ಪೂರ್ಣಸ್ವಾತಂತ್ರ್ಯವಿರುವುದಿಲ್ಲ,

ಆದ್ದರಿಂದ ತಮ್ಮ ಯೋಗಕ್ಷೇಮ ಲಾಭಕ್ಕಾಗಿಯೇ ಧರ್ಮ ಕರ್ಮ ತತ್ಪರರಾಗಿರಬೇಕು, [ಈಶ್ವರಾರ್ಪಣೆಯಾಗಿರಬೇಕು] ಎಂಬ ಉಪದೇಶವಾಗುವುದಾಗಿ ಲೋಕಕಲ್ಯಾಣಕ್ಕೆ ಅವಕಾಶವಾಗುವುದು. ಇನ್ನು ಮುಮುಕ್ಷು ವರ್ಗ ಎಂದರೆ ತನಗೆ ಮೋಕ್ಷವೇ ಆಗಬೇಕೆಂದು ಹಂಬಲಿಸುವ ಜನ. ಇವರು ವಿಚಾರಪರರಾಗಿರುತ್ತಾರೆ. ತತ್ತ್ವಪರಮಾರ್ಥ ಚಿಂತನೆ ಮಾಡುವವರಾಗಿರುತ್ತಾರೆ. ಇವರಿಗೆ ಅದ್ವೈತಬ್ರಹ್ಮಬೋಧವಾಗಬೇಕಾದರೆ ಆತ್ಮನ ಉಪಾಧಿವೈಶಿಷ್ಟ್ಯ-ವನ್ನು ಮೊದಲು ತಿಳಿದುಕೊಳ್ಳುವುದೇ ದ್ವಾರವು. ಈ ವಿಚಾರಕ್ರಮದಿಂದಲೇ ನಿಜ ಆತ್ಮನು ನಿಷ್ಕಳನು. ಆತ್ಮೈಕ್ಯವಲ್ಲದ ಅರಿವಾಗುವುದು. ಮತ್ತು ಒಬ್ಬ ಆತ್ಮನಲ್ಲೇ ಬದ್ಧಸ್ಥಿತಿ ಮತ್ತು ಮುಕ್ತಸ್ಥಿತಿ ಎಂಬ ಎರಡು ತರಹ ವ್ಯವಹಾರ-ವ್ಯವಸ್ಥೆಯು ಸಮಂಜಸವಾಗಿದೆ ಎಂದೂ ತಿಳಿಯುತ್ತದೆ.

ನಿರುಪಾಧಿಕ ಶುದ್ಧಚೇತನನೇ ಬ್ರಹ್ಮವು. ಉಪಹಿತ ಚೇತನನೇ ಆತ್ಮನು. ಆತ್ಮನು ಯಾವಾಗಲೂ ಆಕಾಶದಂತೆ ಅಸಂಗನೇ ಆಗಿರುವುದರಿಂದ ನಿತ್ಯಶುದ್ಧನೇ. ಉಪಹಿತ ಚೇತನ ಅಂದರೆ ಉಪಾಧಿಯಿಂದ ಒಡಗೂಡಿರುವ ಚೇತನ ಎಂದರ್ಥ. ಉಪಾಧಿಯಿಂದ ಒಡಗೂಡಿರುವುದು ಎರಡು ಬಗೆಯಾಗಿರುತ್ತದೆ. ಸ್ವ ಇಚ್ಛೆಯಿಂದ ಉಪಾಧಿಯನ್ನು ಸ್ವೀಕರಿಸಿರುವುದು - ನಾಟಕದಲ್ಲಿ ನಟನು ಪಾತ್ರವಹಿಸಿದಂತೆ - ಮಾಯೆಯನ್ನು [ಇಚ್ಛೆಯಿಂದ] ಉಪಾಧಿಯಾಗಿ ಸ್ವೀಕರಿಸಿರುವ ಚೇತನನು ಈಶ್ವರನಾಗಿರುತ್ತಾನೆ. ಇದು ಒಂದು ಬಗೆ. ಇನ್ನೊಂದು ಬಗೆ ಏನೆಂದರೆ - ಸ್ವಪೂರ್ವಕರ್ಮಫಲವಾಗಿ ತನಗೆ ಪ್ರಾಪ್ತವಾಗಿರುವ (ಗಂಟುಬಿದ್ದಿರುವ) ದೇಹೇಂದ್ರಿಯಾದಿಗಳು ಉಪಾಧಿಯಾಗಿದ್ದರೆ ಆ ಚೇತನನೇ ಜೀವಪುರುಷನಾಗಿರುತ್ತಾನೆ. ವಾಸ್ತವದಲ್ಲಿ ಶುದ್ಧಚೇತನನೇ ಆಗಿರುವ ಅದ್ವಿತೀಯಾತ್ಮನಲ್ಲಿ ಮಾಯೆಯು ಇರುವುದಿಲ್ಲ. ಅವಿದ್ಯೆಯು ಇರುವುದಿಲ್ಲ. ಆ ಅವಿದ್ಯಾಮೂಲಕವಾದ ಕಾಮ ಕರ್ಮ ಫಲಗಳ ಸಂಬಂಧವೂ ಇರುವುದಿಲ್ಲ. ಎಂದು ಆತ್ಮ ಅನಾತ್ಮ ವಿವೇಕ ಮಾಡಿಕೊಂಡಾಗ ತಿಳಿಯುವುದು. ಮೊದಲಿಗೆ ತಿಳಿದಿರುವುದಿಲ್ಲ.

ಅಧ್ಯಾರೋಪ - ಅಪವಾದ ನ್ಯಾಯ ವಿವರಣೆ.

ಜ್ಞಾನಸ್ವರೂಪದ ಈಶ್ವರನು ಮಾಯೆಯನ್ನು ಉಪಾಧಿಯನ್ನಾಗಿ ಸ್ವೀಕರಿಸಿ ಜಗತ್ಸೃಷ್ಟಿಯನ್ನು ಮಾಡಿರುವನೆಂದು ಹೇಳುವುದೇ ಅಧ್ಯಾರೋಪವು. ಮಾಯೆ ಎಂದರೆ ಈಶ್ವರನ ಇಚ್ಛೆಯೇ. ಇಚ್ಛೆ ಎಂಬುದು ಅವನ ಜ್ಞಾನದ ಪ್ರಕಾರವಿಶೇಷವೇ ಆಗಿರುತ್ತದೆ. ಅದೇನೂ ಬೇರೆ ವಸ್ತುವಾಗಿರುವುದಲ್ಲ. ಇಚ್ಛಾಮಾತ್ರಂ ಪ್ರಭೋಃ ಸೃಷ್ಟಿಃ. ಅಮೋಘಸಂಕಲ್ಪನಾದ ಈಶ್ವರನ ಇಚ್ಛೆ-ಸಂಕಲ್ಪ ಆಗುತ್ತಿದ್ದಂತೆಯೇ ಸೃಷ್ಟಿ ಆಗುವುದು. ಈಶ್ವರನು ಸ್ವ-ಇಚ್ಛೆಯಿಂದ ಮಾಯೆಯನ್ನು ಉಪಾಧಿಯಾಗಿ ಸ್ವೀಕರಿಸಿರುವುದರಿಂದ ಮಾಯೆಯು ಈಶ್ವರನಿಗೆ ಬಂಧನಕಾರವಾಗಿರುವುದಿಲ್ಲ. ಮತ್ತು ಈಶ್ವರನು ಸ್ವಯಂಸಿದ್ಧ ಸ್ವರೂಪಜ್ಞಾನಪ್ರತ್ಯಯನೇ ಆಗಿರುವುದರಿಂದಲೂ ಅವನು ನಿತ್ಯಶುದ್ಧಬುದ್ಧಮುಕ್ತಸ್ವಭಾವದವನೇ ಆಗಿರುತ್ತಾನೆ. ಹೀಗೆ ಆತ್ಮನು ಈಶ್ವರ-ಸೃಷ್ಟಿಕರ್ತಾ ಆದುದೇ ಒಂದು ವಿಶೇಷಸ್ಥಿತಿ ಎಂದು ನಿರೂಪಣೆಯೇ ಅಧ್ಯಾರೋಪವು.

ಈಶ್ವರನು ಏಕೆ ಜಗತ್ಸೃಷ್ಟಿ ಮಾಡುತ್ತಾನೆಂದರೆ - ಮುಕ್ತರಾಗದೇ ಇರುವ ಜೀವರು ನಾನಾ ಬಗೆಯ ಧರ್ಮಕರ್ಮಗಳನ್ನು ಮಾಡಿರುತ್ತಾರಾದ್ದರಿಂದ ಅವರಿಗೆ ಪುಣ್ಯ-ಪಾಪ ಕರ್ಮಗಳ ಫಲವನ್ನು ಕೊಡಬೇಕಾದ ಸ್ವಾಮಿಯು ಅವನೇ ಆಗಿರುವುದರಿಂದ ಮಾಯೆಯಿಂದಲೇ ಭೋಗ್ಯವಸ್ತುಗಳನ್ನು ಒದಗಿಸುವನು. ಇಂತು ಸೃಷ್ಟಿಯು ಪರಾರ್ಥವಾಗಿದೆಯೇ ಹೊರತು ಸ್ವಾರ್ಥಲೇಶವೂ ಇರುವುದಿಲ್ಲ. ಮಾಯಾವಿದ್ಯೆಯನ್ನರಿತವನು ಅಥವಾ ಮಂತ್ರಸಿದ್ಧಿಯಿರುವ ಯೋಗಿಯು ಹೇಗೆ ಬೇರೆ ವಸ್ತು ಉಪಕರಣಾಪೇಕ್ಷೆಯಿಲ್ಲದೇ ವಸ್ತುಸೃಷ್ಟಿ ಮಾಡಬಲ್ಲವನಾಗಿರುತ್ತಾನೆಯೋ ಹಾಗೆಯೇ ಈಶ್ವರನು ಮಾಯೆಯಿಂದ ಈ ನಾಮರೂಪಾತ್ಮಕವಾದ ಪ್ರಪಂಚವನ್ನು ಸೃಜಿಸುವನು. ಆದ್ದರಿಂದ ಈ ಪ್ರಪಂಚವು ಮಾಯಿಕವಾಗಿದೆ. ಪರಮಾರ್ಥವಾಗಿರುವುದಿಲ್ಲ. ಈಶ್ವರನು ನಿಜವಾಗಿ ಸೃಷ್ಟಿ ಮಾಡಿಲ್ಲ. ಹೀಗೆಂಬ ಅರಿವೇ ಅಪವಾದವು. ವಸ್ತುಸ್ಥಿತಿಯು

ಹೀಗಿರುವುದರಿಂದ ಪರಮಾತ್ಮನ ಶುದ್ಧಪರಮಾನಂದಸ್ಥಿತಿಗೆ ಏನೂ ಎಂದೂ ಚ್ಯುತಿಯಿಲ್ಲ. ಹೀಗೆ ಪರಮಾತ್ಮಪಕ್ಷದಲ್ಲಿ ಅಧ್ಯಾರೋಪ-ಅಪವಾದವು ಚಿತ್ರಿತವಾಗಿದೆ.

ಇನ್ನು ಜೀವಾತ್ಮಪಕ್ಷದಲ್ಲಿ ತಿಳಿದುಕೊಳ್ಳಬೇಕಾದ್ದೇನೆಂದರೆ - ಅಮುಕ್ತರಾದ ಜೀವರು, ಜೀವಾತ್ಮರು ತಮ್ಮ ತಮ್ಮ ಕರ್ಮಫಲಗಳನ್ನು ಅನುಭವಿಸಲು ಈ ಪ್ರಪಂಚದಲ್ಲಿ ಜನ್ಮವೆತ್ತಿರುವರು. ಹೀಗೆಂಬುದು ನ್ಯಾಯ-ಕರ್ಮಶಾಸ್ತ್ರಸಿದ್ಧಾಂತ. ಅವರ ದೇಹಗಳು ಅವರವರ ಕರ್ಮಕ್ಕೆ ಅನುಗುಣವಾಗಿಯೇ ಹೊಸದಾಗಿ ಹುಟ್ಟುವುವು. ನಿಜ ಆತ್ಮನು ಹುಟ್ಟುವುದಿಲ್ಲ. ಕೇವಲ ಸಾಕ್ಷಿಯಾಗಿರುತ್ತಾನೆ. ದೇಹಗಳು ಹುಟ್ಟುವಾಗ ಗರ್ಭೋತ್ಪತ್ತಿಯ ಪ್ರಾರಂಭದಲ್ಲಿ (ಆಕಾಶದಂತೆ-ಬೆಳಕಿನಂತೆ) ಸರ್ವತ್ರ ವ್ಯಾಪ್ತನಾದ ನಿಜ ಆತ್ಮನು ಆ ದೇಹಗಳಲ್ಲಿ ತುಂಬಿಕೊಳ್ಳುವನು. ಅಸ್ಪರ್ಶ್ಯನಾಗಿರುವನು. ಆತ್ಮನು ಬೆಳಕಿನಂತೆ ಅವಿಕಾರಿಯಾಗಿಯೇ ಬಿಂಬದಂತೆ ಇರುತ್ತಿದ್ದು, ಆಯಾಯ ದೇಹ ಮತ್ತು ಅಂತಃಕರಣಗಳಲ್ಲಿ ಪ್ರತಿಬಿಂಬರೂಪದಿಂದ ಹೊಳೆದುಕೊಂಡಿರುತ್ತಾನೆ. ಇವನೇ ಜೀವಾತ್ಮನು. ಇದುವೇ ಆತ್ಮನ ಪ್ರತಿರೂಪ. ಚಿದಾಭಾಸನು. ಮಾಯೆಯು ಈಶ್ವರಸಾನ್ನಿಧ್ಯದಿಂದ ಚೈತನ್ಯಗೊಂಡಿರುವಂತೆ ಈ ಚಿದಾಭಾಸ-ಮಿಥ್ಯಾತ್ಮನು ಚೈತನ್ಯಗೊಂಡಿದ್ದು ಚೇತನನಂತೆ ವರ್ತಿಸಿಕೊಂಡಿರುವನು. ಈ ಚಿದಾಭಾಸ ಜೀವಾತ್ಮನ ಮಿಥ್ಯಾತ್ಮನು ಮತ್ತು ನಿಜ ಸತ್ಯಾತ್ಮನು ಈ ಇಬ್ಬರ ಸ್ವರೂಪವೂ ಪ್ರಕಾಶೈಕಸ್ವಭಾವವಾಗಿರುವುದರಿಂದ ಭೇದವೇ ತೋರುವುದಿಲ್ಲ. ಆದ್ದರಿಂದ ಅಭೇದಾಧ್ಯಾಸ ಉಂಟಾಗುವುದು ಸ್ವಾಭಾವಿಕವಾಗಿದೆ. ಆಗ ಚೈತನ್ಯವುಳ್ಳದ್ದಂತಾಗಿರುವ ಮಿಥ್ಯಾತ್ಮನು-ಚಿದಾಭಾಸಾತ್ಮನು ದೇಹ ಇಂದ್ರಿಯಾದಿಸಂಘಾತವೇ ನಾನು ಎಂದು ಬಗೆಯುವನು. ಇದೇ ಅಧ್ಯಾರೋಪವು. ಇದೇ ನಿಜ ಆತ್ಮನಿಗೆ ವಿಶೇಷಸ್ಥಿತಿಯಾಗಿರುತ್ತದೆ. ಬಣ್ಣವನ್ನು ಪ್ರಕಾಶಪಡಿಸುವಾಗ ಪ್ರಕಾಶವು ಪರಿಣಾಮಗೊಳ್ಳುವಂತೆ ಚಿದಾಭಾಸನು ಮಾತ್ರವೇ ಪರಿಣಾಮಗೊಳ್ಳುವನು. ನಿಜ ಆತ್ಮನು ಪರಿಣಾಮಗೊಳ್ಳುವುದಿಲ್ಲ. ಶುದ್ಧನಿರಂಜನನಾಗಿರುತ್ತಾನೆ. ಅವನು ಕೇವಲ ಸಾಕ್ಷಿಯಾಗಿ ತಟಸ್ಥನಾಗಿರುತ್ತಾನೆ. ಈ

ಮಿಥ್ಯಾರೂಪದ ಚಿದಾಭಾಸನೇ ಜೀವಾತ್ಮನು. ಇವನು ನಿಜ ಆತ್ಮನೊಡನೆ ಅನ್ಯೋನ್ಯ ಅಧ್ಯಾಸ-ಆರೋಪಮಾಡಿಕೊಂಡಿರುತ್ತಿದ್ದ ನಾನು. ದೇಹ, ಮನುಷ್ಯ ಇತ್ಯಾದಿಯಾಗಿ ಅಧ್ಯಾರೋಪಮಾಡಿಕೊಂಡಿರುತ್ತಾನೆ. ಹೀಗೆ ಅನಾತ್ಮರನ್ನು ಅಭೇದವಾಗಿ ಬಗೆದುಕೊಂಡಿರುತ್ತಾನೆ ~~(...)~~ ಈ ಜೀವಾತ್ಮ ಎಂಬ ಚಿದಾಭಾಸನೇ ಸಂಸಾರಿಯಾಗಿರುತ್ತಾನೆ. ಹೀಗೆ ನಾನು ಸಂಸಾರಬದ್ಧ ಎಂದು ಗುರುತಿಸಿಕೊಳ್ಳುವರು.

ಇನ್ನು ಅಪವಾದ ತೋರಿಸಿದರೆ:-

~~ಆದರೆ~~ ನಾನು ದೇಹ ಎಂದು ತಿಳಿದುಕೊಂಡಿರುವುದೇ ಸರಿಯಾಗಿರುವುದಿಲ್ಲ. ತಪ್ಪು ತಿಳುವಳಿಕೆ- ಭ್ರಾಂತಿ ಆಗಿರುತ್ತೆ. ಏಕೆಂದರೆ ನಿಜ ಆತ್ಮನು ಚೇತನ. ದೇಹಾದಿ ಚಿದಾಭಾಸಪರ್ಯಂತವಾಗಿ ಸಮಸ್ತವೂ ಜಡಪ್ರಕೃತಿಯುಳ್ಳವಾಗಿರುತ್ತವೆ. ಅವಕ್ಕೆ ನಿಜವಾಗಿ ಚೈತನ್ಯವಿರುವುದಿಲ್ಲ. ಬೆಳಕು ಮತ್ತೆ ಕತ್ತಲೆಗಳು ಹೇಗೆ ಅಭೇದವಾಗಿರುವುದಿಲ್ಲವೋ ಹಾಗೆಯೇ ಆತ್ಮನು ಮತ್ತು ದೇಹಾದಿಸಂಘಾತಗಳು ಅಭೇದವಾಗಿರುವುದು ಅಸಂಭವ. ಮಿಥ್ಯಾತ್ಮನಾದ ಚಿದಾಭಾಸನು ಜಡಪ್ರಕೃತಿಯಾಗಿರುವುದರಿಂದ ಏನನ್ನೂ ಅರಿಯಲಾರನು. ಎಲ್ಲವನ್ನೂ ಯಾವಾಗಲೂ ಅರಿಯುವವನು ನಿಜ ಆತ್ಮನೇ ಸರಿ. ದೇಹಾದಿ ಸಮಸ್ತವನ್ನು ನಿಜ ಆತ್ಮನು ಇದು ಇದು ಎಂದು ವಿಷಯಮಾಡಿಕೊಂಡು ಅರಿಯುತ್ತಿರುವುದರಿಂದ ಆತ್ಮನು ವಿಷಯಿ. ಅಂದರೆ ಸಾಕ್ಷಿಯಾಗಿರುತ್ತಾನೆ. ಬೆಳಕು ವಸ್ತುಗಳನ್ನು ಬೆಳಗುವಂತೆ ಅವನೇ ಪ್ರಕಾಶಪಡಿಸುತ್ತಿರುತ್ತಾನೆ. ಚೈತನ್ಯಗೊಳಿಸುತ್ತಿರುತ್ತಾನೆ. ಬೆಳಕು ಬೇರೆ ವಸ್ತುಗಳು ಬೇರೆ. ಅವು ಒಂದಾಗಿರುವುದಿಲ್ಲ. ಅಭೇದವಾಗಿರುವುದಿಲ್ಲ. ಹಾಗೆಯೇ ನಿಜ ಆತ್ಮನೇ ಬೇರೆ. ನಾನು ಎಂದು ದೇಹಾದಿಗಳನ್ನು ಬಗೆದುಕೊಂಡಿರುವ - ಚಿದಾಭಾಸ ಮಿಥ್ಯಾತ್ಮನೇ ಬೇರೆ ಎಂದು ವಿವೇಚನೆ ಮಾಡಿಕೊಂಡಾಗ ಚೇತನನಾದ ನಾನು ಶುದ್ಧ ಆತ್ಮನೇ ಸರಿ. ನಾನು ದೇಹವಲ್ಲ. ಇಂದ್ರಿಯಗಳಲ್ಲ. ಪ್ರಾಣವಲ್ಲ. ಮನಸ್ಸಲ್ಲ. ಬುದ್ಧಿ ಅಲ್ಲ. ಅವುಗಳಲ್ಲಿ ಪ್ರತಿಬಿಂಬಗೊಂಡ (ಪ್ರಕಾಶದಿಂದಿರುವ) ಚಿದಾಭಾಸ-ಮಿಥ್ಯಾತ್ಮನೂ ನಾನಲ್ಲ. ಹೀಗೆಂದು ~~(ಅರಿತುಕೊಳ್ಳುವುದೇ)~~ ನಿಶ್ಚಯ ಮಾಡಿಕೊಳ್ಳುವುದೇ ಅಪವಾದವಾಗಿದೆ. ಹಾಗೆ ಮಾಡಿಕೊಂಡಾಗ ತಾನು ನಾನು ಎಂಬ ನಿಜ ಆತ್ಮನು ಅದ್ವಿತೀಯ ಜ್ಞಾನಾನುಭವಸ್ವರೂಪನೇ ಆಗಿರುತ್ತಾನೆ.

ವಿಶೇಷ ಚಿಂತನೆ.

ಶುದ್ಧ ಬುದ್ಧ ಮುಕ್ತಸ್ವಭಾವದ ಆತ್ಮನು ಶುದ್ಧಸತ್ತ್ವಪ್ರಧಾನವಾದ ಮಾಯೆಯೇ ಉಪಾಧಿಯಾಗಿರುವಾಗ ಒಂದು ಬಗೆಯ ವಿಶೇಷಸ್ಥಿತಿಯುಳ್ಳ ಈಶ್ವರ ಎಂದಾಗುತ್ತಾನೆ. ಆ ಆತ್ಮನೇ ಮಲಿನಸತ್ತ್ವಪ್ರಧಾನವಾದ ಅವಿದ್ಯೆ ಅಂದರೆ ಪ್ರಕೃತಿಕಾರ್ಯವಾದ ದೇಹತ್ರಯವೇ ಉಪಾಧಿಯಾಗಿರುವಾಗ ಮತ್ತೊಂದು ಬಗೆಯ ವಿಶೇಷಸ್ಥಿತಿಯುಳ್ಳ ಜೀವ ಎಂದಾಗುತ್ತಾನೆ. ವಾಸ್ತವವಾದ ನಿರ್ವಿಶೇಷಸ್ಥಿತಿಯು ತಪ್ಪಿ ಉಪಾಧಿನಿಮಿತ್ತ ಸವಿಶೇಷಸ್ಥಿತಿಯುಂಟಾದಾಗ ಒಬ್ಬ ಸತ್ಯಾತ್ಮನಲ್ಲೇ ಜೀವ-ಈಶ್ವರ ಎಂಬ ವಿಭಾಗವುಂಟಾಗಿರುವುದು. ಈಶ್ವರನು ಸಾ ಜಗತ್ಸೃಷ್ಟಿಕಾರಣನಾಗಿರುವನು. ಈ ಪ್ರಪಂಚದಲ್ಲಿರುವ ಜೀವನು ಕರ್ಮಕರ್ತೃ ಫಲಭೋಕ್ತೃ ಆಗಿರುತ್ತಾ ಲೌಕಿಕ ಪ್ರಮಾತೃವಾಗಿರುತ್ತಾನೆ.

ಪರಬ್ರಹ್ಮವಸ್ತುವು ನಿರ್ಗುಣವು ಅಂದರೆ ಮಾಯೆಯಿಲ್ಲದುದು. ಮಾಯಾತೀತವು. ಹಾಗೆಯೇ ಆತ್ಮವಸ್ತುವೂ ಮಾಯಾತೀತವೇ. ಅದು ಹೇಗೆಂದರೆ- ಮಾಯೆಯು ಸ್ವತಃ ಅವ್ಯಕ್ತವು. ಅಂದರೆ ನಾಮರೂಪ ವಿಶೇಷವಿಲ್ಲದ್ದು. ಅದನ್ನು ಕೇವಲ ಕಾರಣರೂಪವೆಂದೇ ಊಹಿಸಿ ತಿಳಿದುಕೊಳ್ಳಬೇಕಾಗಿದೆ. ಅದರ ಕಾರ್ಯವೇ ನಾಮರೂಪಗಳು. ಬ್ರಹ್ಮದಲ್ಲಾಗಲೀ ಆತ್ಮನಲ್ಲಾಗಲೀ ನಾಮರೂಪಗಳು ಇರುವುದೇ ಇಲ್ಲ. ಅಂದಾಗ ಬ್ರಹ್ಮನಲ್ಲಿ-ಆತ್ಮನಲ್ಲಿ ಮಾಯೆ ಇಲ್ಲ. ಆ ಅದ್ವಿತೀಯವಾದ ಪರಮವಸ್ತುವು ಮಾಯಾತೀತ ಎಂದೇ ಸಿದ್ಧವಾಗುವುದು. ಹೀಗೆಯೇ ಗುಣಾತೀತ ಎಂದೂ ತಿಳಿಯಬೇಕು.

ಏಕಂ = ಒಬ್ಬ.

ಏವ = ಅವಧಾರಣೆ

ಅದ್ವಿತೀಯಂ = ದ್ವೈತ ಪ್ರತಿಷೇಧ

ಅರಿಯುವ ಚೇತನನೊಬ್ಬನೇ, ಇದರಿಂದ ಈಶ್ವರನು ಸರ್ವಜ್ಞ ಎಂಬುದು ಅನ್ವರ್ಥವಾಗಿರುವುದು.

ಏಕಮೇವಾದ್ವಿತೀಯಂ ಬ್ರಹ್ಮ = ಆತ್ಮ ಎಂದು ಉಪನಿಷದುಪದೇಶ,

ಪ್ರಪಂಚದಲ್ಲಿ ವ್ಯವಹಾರ ಮಾಡುತ್ತಿರುವ ಸಾಮಾನ್ಯ ಮನುಷ್ಯರು
ಆತ್ಮಜ್ಞಾನವಿಲ್ಲದ್ದರಿಂದ ಮನಃಕಲ್ಪಿತಾತ್ಮರೇ - ಪ್ರಾತಿಭಾಸಿಕಸತ್ಯರೂಪದಲ್ಲಿ
ಆಗಿರುತ್ತಾರೆ. ಅವರ ಜ್ಞಾನವು ಸಾಮಾನ್ಯಾನುಭವರೂಪವೇ ಆಗಿರುತ್ತದೆ. ಸ್ವಪ್ನದ ಜ್ಞಾನದಂತೆ ಜನರು
ನಾನು ಮನುಷ್ಯ. ನಾನು ದೇಹ. ನನಗೆ ದೇಹೇಂದ್ರಿಯಾದಿಗಳು ಇರುತ್ತವೆ ಎಂದು
ತಿಳಿದುಕೊಂಡಿರುತ್ತಾರಷ್ಟೆ! ಇದು ನೈಸರ್ಗಿಕವಾದ ಸ್ವಾಭಾವಿಕವಾದ ತಿಳುವಳಿಕೆಯಾಗಿದೆ.
ಈ ತಿಳುವಳಿಕೆಯು ಪ್ರಮಾಣದಿಂದ ಉಂಟಾಗಿರುವುದಲ್ಲ. ಏಕೆಂದರೆ - ದೇಹವು ಭೌತಿಕ
ಹಾಗೂ ಜಡವಾದುದು. ಆತ್ಮನು ಚೇತನ (ಅಭೌತಿಕ) ಸ್ವಯಂಪ್ರಕಾಶ ಆಗಿರುತ್ತಾನೆ.
ಹೀಗೆ ಬೆಳಕು ಕತ್ತಲೆಗಳಂತೆ ಪರಸ್ಪರ ವಿರುದ್ಧಸ್ವಭಾವ. ಆದ್ದರಿಂದ ಆತ್ಮನಿಗೆ ದೇಹದೊಡನೆ ಸಂಬಂಧವೇ ಇರು-
ವುದಿಲ್ಲ. ಆದ್ದರಿಂದ ಆತ್ಮನು ದೇಹವಿಶಿಷ್ಟ ಎಂಬುದು ಭ್ರಮೆಯೇ ಸರಿ. ಅಲ್ಲದೇ ನಾನು ದೇಹ
ಎಂಬ ವಿಶಿಷ್ಟಜ್ಞಾನವುಂಟಾಗಬೇಕಾದರೆ ಆತ್ಮನಲ್ಲಿ ಪ್ರಮಾತೃತ್ವ ಇರಬೇಕು. ನಿಜ ಆತ್ಮ-
ನಲ್ಲಿ ಬುದ್ಧಿ ಮನ ಆದಿಗಳು ಇರುವುದಿಲ್ಲವಾದ್ದರಿಂದ ಅವನು ಪ್ರಮಾತೃವೇ ಆಗಿರುವುದಿಲ್ಲ.
ಆದ್ದರಿಂದ ಅದಕ್ಕೆ ಪ್ರಮಾಣವೇ ಇರುವುದಿಲ್ಲ. ಹೀಗೆ ಪ್ರಮಾಣವೇ ಇಲ್ಲದೇ ಉಂಟಾಗುವ
ಈ ದೇಹ ಎಂಬ ಜ್ಞಾನವು ಕನಸಿನಂತೆ - ಪ್ರಾತಿಭಾಸಿಕವೇ ಆಗಿರುತ್ತದೆ. ಭ್ರಮೆಯೇ ಸರಿ.
ಇದೇ ಸ್ವಾಭಾವಿಕಜ್ಞಾನವು,

ಬ್ರಹ್ಮಾತ್ಮನು ಸರ್ವಶಕ್ತ ಎಂಬುದು ಹೇಗೆ ತಿಳಿಯುವುದೆಂದರೆ:-
ಶಕ್ತಿ ಎಂಬುದು ಯಾವಾಗಲೂ ಅವ್ಯಕ್ತವೇ. ಅದರ ಕಾರ್ಯವನ್ನು ನೋಡಿಯೇ ಅದನ್ನು ತಿಳಿಯಬೇಕು. ಇದೇ ಅದರ ಸ್ವಭಾವ. ಈ ಪ್ರಪಂಚವು ಇದ್ದು ತೋರುವುದರಿಂದಲೇ ಈಶ್ವರನ ಶಕ್ತಿಯು ಸಿದ್ಧವಾಗಿದೆ. ಅವ್ಯಕ್ತವಾದ ಮೂಲವಸ್ತುವು ಪರಿಣಾಮಗೊಂಡು ಕಾರ್ಯ-ವಿಕಾರರೂಪ ತಾಳಿಕೊಂಡಿರುವುದೇ ಸೃಷ್ಟಿ ಎನ್ನುವುದು. ಈ ಜಗತ್ಸೃಷ್ಟಿ ಆಗಿರುವುದರಿಂದಲೇ ಈಶ್ವರನ ಶಕ್ತಿಯು ಪ್ರಕಟವಾಗಿದೆ. ಈ ಶಕ್ತಿಯನ್ನೇ ಮಾಯೆ ಎಂದು ಜ್ಞಾನಿಗಳು ತಿಳಿಸಿಕೊಡುತ್ತಿದ್ದಾರೆ. ಮಾಯೆಯಿಂದ ಜಗತ್ಸೃಷ್ಟಿ ಆದ್ದರಿಂದಲೇ ಜಗನ್ಮಿಥ್ಯಾ ಎಂಬ ಸಿದ್ಧಾಂತವು ಒಪ್ಪಿತವಾಗುವುದು.

ಈ ಸೃಷ್ಟಿಯು ಮೂರು ಬಗೆ ಇರುವುದು.

೧ ಆಧಿಭೌತಿಕಸೃಷ್ಟಿ = ಆಕಾಶಾದಿ ಪಂಚಭೂತಗಳು ಮತ್ತು ಶಬ್ದಾದಿ ವಿಷಯಗಳ ಸೃಷ್ಟಿ. ಇವುಗಳಿಂದ ಈಶ್ವರನ ಯಾವಯಾವ ಶಕ್ತಿಗಳು ಪ್ರಕಟವಾಗುವುವೆಂದರೆ:- ಆಕಾಶದಿಂದ ಸ್ಥಳಾವಕಾಶದಾತೃತ್ವ ಮೊದಲಾದ ಶಕ್ತಿಗಳು. ವಾಯುವಿನಿಂದ ಪವನ (ಧ್ರುವ. ಒಯ್ಯುವ) ಮುಂತಾದ ಶಕ್ತಿಗಳು. ತೇಜೋರೂಪ ಅಗ್ನಿ (ಬೆಂಕಿಯಿಂದ)ಯಿಂದ ದಹನ ಪ್ರಕಾಶನ ಮುಂತಾದ ಶಕ್ತಿಗಳು. ಜಲದಿಂದ ಸ್ಪಂದನ ಉಂದನ (ಹರಿಯುವ. ಒದ್ದೆಮಾಡುವ) ಮುಂತಾದ ಶಕ್ತಿಗಳು. ಭೂಮಿ (ಮಣ್ಣು) ಇದರ ಸೃಷ್ಟಿಯಿಂದ ಧಾರಣೆ ಪೋಷಣೆ ಮೊದಲಾದ ಶಕ್ತಿಗಳು ಪ್ರಕಟವಾಗುವುವು.

ಈ ಭೂಮ್ಯಾದಿ ಕಾರ್ಯಗಳು ಇದ್ದು-ತೋರುತ್ತಿರುವುದರಿಂದಲೇ ಈ ಕಾರ್ಯಗಳಿಗೆ ಕಾರಣವು ಇದ್ದೇ ಇರುವುದೆಂದು ಅನ್ಯಥಾ ಅನುಪಪತ್ತಿ ಮತ್ತು ಅನುಮಾನ ಪ್ರಮಾಣಗಳಿಂದಲೇ ಅವ್ಯಕ್ತವಾದ ಶಕ್ತಿ ಮತ್ತು ಈಶ್ವರ ಇವರನ್ನು ಕಂಡುಹಿಡಿಯಬೇಕು. ಇವರು ಅತೀಂದ್ರಿಯ-ಅಮೂರ್ತವಸ್ತುವಾದ್ದರಿಂದ ಪ್ರತ್ಯಕ್ಷಗೋಚರವಾಗುವುದಿಲ್ಲ.

೨. ಆಧಿದೈವಿಕ ಸೃಷ್ಟಿ - ಮೇಲೆ ಹೇಳಿದ ಪಂಚಭೂತಗಳ ಶಕ್ತಿಗಳು ಒಂದೊಂದು ಅಗಾಧವಾಗಿರುವುದರಿಂದ ಅವನ್ನೆಲ್ಲ ನಿಯಂತ್ರಿಸಲು (ಹತೋಟಿಯಲ್ಲಿಡಲು) ಈಶ್ವರನು ತಾನೇ ಸ್ವೇಚ್ಛೆಯಿಂದ ನಾನಾ ದೇವತೆಗಳ ನಾಮ ರೂಪಗಳನ್ನು ಧರಿಸಿರುವನು. ಆ ಭೂತಶಕ್ತಿಗಳನ್ನು ಹತೋಟಿಯಲ್ಲಿಡದಿದ್ದರೆ ಸೃಷ್ಟಿಯು ಯಾವುದೊಂದು ವಸ್ತುವೂ ಉಪಯೋಗಕರವಾಗಿ ಸ್ಥಿರವಾಗಿ ಇರಲಾರದು. ಸೃಷ್ಟಿಯ ಭದ್ರತೆಗೋಸ್ಕರ ಈಶ್ವರನೇ ಸೂರ್ಯ, ಚಂದ್ರ, ಅಗ್ನಿ ವರುಣ, ಇಂದ್ರ ಮುಂತಾದ ದೇವತಾರೂಪಗಳನ್ನು ಧರಿಸಿಕೊಂಡಿರುವನು.

ಈ ಸೃಷ್ಟಿರಹಸ್ಯವನ್ನು ಪರಿಶೀಲಿಸಿದರೆ ದೇವತಾಸ್ವರೂಪಭೇದ - ಅನೇಕ ದೇವರು ಎಂಬುದನ್ನು ಒಪ್ಪಿಕೊಳ್ಳಲೇ ಬೇಕಾಗುವುದು. ಇದು ಹೀಗೆ ತರ್ಕಸಮ್ಮತವಾಗಿದೆ.

೩. ಆಧ್ಯಾತ್ಮಿಕ ಸೃಷ್ಟಿ — ವಾಕ್, ಪ್ರಾಣ, ಮನಸ್ಸು, ಮತ್ತು ಇಂದ್ರಿಯಗಳಿಂದ ಕೂಡಿದ ಶರೀರಗಳ ಸೃಷ್ಟಿ. ಇವುಗಳಿಂದ ವಾಕ್‌ಶಕ್ತಿ, ಜೀವನಶಕ್ತಿ, ಮನನಶಕ್ತಿ, ದರ್ಶನಶಕ್ತಿ ಮುಂತಾದವು ಪ್ರಕಟವಾಗುವುವು. ಹೀಗೆ ಸೃಷ್ಟಿಯಿಂದ ಈಶ್ವರನ ಶಕ್ತಿಗಳು ಹೊರಹೊಮ್ಮುತ್ತವೆ. ಈ ಸಕಲ ಶಕ್ತಿಪ್ರಕಾರಗಳ ಆಶ್ರಯ - ಆಧಾರನಾದ ಈಶ್ವರನು ಸಿದ್ಧನಾಗುವನು. ಇದರಿಂದ ನಿರೀಶ್ವರವಾದವು ಭಗ್ನವಾಗುವುದು.

ಪಂಚಕೋಶಪ್ರಕ್ರಿಯೆಯಲ್ಲಿ ನಿರೂಪಿತವಾದ ಆತ್ಮರುಗಳಲ್ಲಿ ಅನ್ನಮಯಾತ್ಮ ಪ್ರಾಣಮಯಾತ್ಮ ಮತ್ತು ಮನೋಮಯಾತ್ಮ ಈ ಮೂರು ಬಗೆಯ ಆತ್ಮರು ಪ್ರಾತಿಭಾಸಿಕ ಆತ್ಮರು ಎಂದು ತಿಳಿಯಬೇಕು. ವಿಜ್ಞಾನಮಯಾತ್ಮನೇ ಜೀವಾತ್ಮನು. ಇವನು ಮಿಥ್ಯಾತ್ಮನು. ಆನಂದಮಯಾತ್ಮನೇ ಈಶ್ವರನು = ಪರಮಾತ್ಮನು (ಸತ್ಯಾತ್ಮನು). ಇವನು ಬಿಂಬರೂಪನು. ಇವನ ಪ್ರತಿಬಿಂಬರೂಪನೇ ಜೀವಾತ್ಮನು = ಮಿಥ್ಯಾತ್ಮನಾಗಿರುತ್ತಾನೆ. ಈ ಪ್ರಾತಿಭಾಸಿಕ ಆತ್ಮರ ಮತ್ತು ಮಿಥ್ಯಾತ್ಮನ ತೋರಿಕೆಯನ್ನು - ಅನಾತ್ಮವೆಂದು ತಿಳಿದುಕೊಂಡಾಗ ಸತ್ಯಾತ್ಮನೇ ನಿಲ್ಲುವನು.

ಎರಡನೆಯ ಚೈತನ್ಯವಿಲ್ಲದುದೇ ಬ್ರಹ್ಮವು. ಈ ನಿರುಪಾಧಿಕ ಚೇತನನೇ ನಿತ್ಯ ಪರಮಾನಂದ ಸತ್ಯವಸ್ತುವಾಗಿರುತ್ತದೆ. ಈ ಹೇಳಿಕೆಯು ಕಾಲ್ಪನಿಕವಲ್ಲ. ಸಹಜವಾಸ್ತವ. ಅಹಂಕಾರಾದಿಗಳಿಲ್ಲದ ಸ್ಥಿತಿ ಅಂದರೆ ಸುಷುಪ್ತಿಯಲ್ಲಿ ಸರ್ವಜನರಿಗೂ ಈ ಅನುಭವವು ಸಹಜವಾಗಿರುತ್ತದೆ.

ತನಗಿಂತ ಬೇರೆ ಚೇತನವಸ್ತುವಾಗಲೀ ಜಡವಸ್ತುಗಳಾಗಲೀ ಇಲ್ಲದ ಸ್ಥಿತಿಯೇ ಅದು. ಇಂತಹ ಸ್ವಾಭಾವಿಕ ನಿರಾಯಾಸ ಸುಖಾನುಭವಸ್ಥಿತಿಯಲ್ಲಿರುವುದೇ ನಿತ್ಯಸತ್ಯಚೇತನನ ಸ್ವಭಾವವಾಗಿರುವುದು. ಇವನಲ್ಲಿ ನಾಮರೂಪಾದಿ ಯಾವ ವಿಶೇಷವೂ ಇರುವುದಿಲ್ಲ.

ಇಂತಹ ನಿರ್ವಿಶೇಷ ಚೇತನನು ಉಪಹಿತನಾದರೆ ಅಂದರೆ ಉಪಾಧಿವಿಶಿಷ್ಟನಾದರೆ ಆಗ ಆ ಚೇತನನು ಆತ್ಮ ಎಂದು ಕರೆಸಿಕೊಳ್ಳಲು ಅರ್ಹನಾಗುವನು. ಏಕೆಂದರೆ :-

ಯಚ್ಚಾಪ್ನೋತಿ ಯದಾದತ್ತೇ ಯಚ್ಚಾತ್ತಿ ವಿಷಯಾನಿಹ ।
ಯಚ್ಚಾಸ್ಯ ಸಂತತೋ ಭಾವಃ ತಸ್ಮಾದಾತ್ಮೇತಿ ಕಥ್ಯತೇ ॥ ಎಂಬ ನಿರ್ವಚನದ ಮೇರೆಗೆ ಈ ಹೆಸರು ಸಮನ್ವಿತವಾಗುವುದು. ವ್ಯಾಪಿಸಿಕೊಂಡಿರುವುದು, ವಸ್ತುವಿಷಯಗಳನ್ನು ಸ್ವೀಕರಿಸುವುದು, ಮತ್ತು ಭುಂಜಿಸಿ ಅನುಭವಿಸುವುದು, ಭಾಗ-ವಿಭಾಗವಾಗದೆ ಅಖಂಡವಾಗಿರುವುದು. ಇದೇ ಆತ್ಮನ ಲಕ್ಷಣವಾಗಿರುವುದು. ಈ ಲಕ್ಷಣವು ಪರಮಾತ್ಮನಲ್ಲೂ ಜೀವಾತ್ಮನಲ್ಲೂ ಅಂದರೆ ಕಾರ್ಯಕಾರಣಗಳಲ್ಲಿ ಸಮನ್ವಿತವಾಗಿರುವುದು

ಉಪಾಧಿ ಎಂದರೆ :- ಅತೀಂದ್ರಿಯವಾದ ಸೂಕ್ಷ್ಮವಸ್ತುವನ್ನು ಕಂಡುಹಿಡಿಯಲು, ಚಿಹ್ನೆ ಉಪಯುಕ್ತ-ದ್ವಾರ-ಸಹಾಯಕವಾದ ಬೇರೆ ವಸ್ತು ಎಂದು ತಿಳಿಯಬೇಕು. ಅತ್ಯಂತ ಸೂಕ್ಷ್ಮ ವಸ್ತುವು ಇರುತ್ತಿದ್ದರೂ ಇಂದ್ರಿಯಗೋಚರವಾಗದೆ ಇರುವುದರಿಂದ ಅದರ ಅರಿವು ಉಂಟಾಗಲಾರದು. ತೇಜಸ್ಸು, ಬೆಂಕಿ ಈ ವಸ್ತುವು ಇರುತ್ತಿದ್ದರೂ ಅದನ್ನು ಸಾಕ್ಷಾತ್ತಾಗಿ ನೋಡಲು ಶಕ್ಯವಿಲ್ಲ. ಸೌದೆ ಅಥವಾ ಊದದಲ್ಲಿ ಅದು ಸೇರಿಕೊಂಡಿದ್ದರೆ ಅದು ನೋಡಲು ಸಿಗುವುದು. ಅಂದಾಗ ತೇಜೋರೂಪ ಬೆಂಕಿಗೆ ಊದು ಅಥವಾ ಸೌದೆಯು ಉಪಾಧಿ ಎಂದು.

ಎಂದು ತಿಳಿಯಬೇಕು. ಕಾದನೀರಿನಲ್ಲಿ ಇರುವ ಬೆಂಕಿಗೆ ನೀರು ಉಪಾಧಿಯಾಗಿರುವುದು. ಈ ಉಪಾಧಿಯ ಸ್ವಭಾವವೇನೆಂದರೆ:- ತನ್ನ ಉಪಹಿತ ವಸ್ತುವನ್ನು ತನ್ನ ಗುಣ-ಧರ್ಮಗಳನ್ನುಳ್ಳದ್ದಾಗಿರುವಂತೆ ತೋರ್ಪಡಿಸುವುದು. ಆದ್ದರಿಂದ ಉಪಾಧಿಗಳಲ್ಲಿ ಅಂತರ್ಯಾಮಿಯಾಗಿರುವ ಆತ್ಮನನ್ನು ಸುಲಭವಾಗಿ ತಿಳಿಯಲಾಗುವುದಿಲ್ಲ. ಹೀಗೆ ಆತ್ಮನು ಉಪಾಧಿಗಳ ಧರ್ಮವುಳ್ಳವನಾಗಿರುವಂತೆ ತೋರುತ್ತಿದ್ದರೂ ಸೂಕ್ಷ್ಮ ಬುದ್ಧಿಯಿಂದ ವಿವೇಚಿಸಿಕೊಂಡು ಆತ್ಮನನ್ನು ಕಂಡುಹಿಡಿಯಬೇಕು. ಅನ್ಯಥಾ ಸಿಕ್ಕುವುದಿಲ್ಲ. ತಿಳಿಯುವುದಿಲ್ಲ. ಆದ್ದರಿಂದ ಆತ್ಮನ ಉಪಾಧಿ ಎಂದರೆ ಇವನನ್ನು ಕಂಡುಕೊಳ್ಳುವ ಸ್ಥಾನ, ಚಿಹ್ನೆ, ದ್ವಾರ. ಅಥವಾ ಉಪಾಯ ಎಂದು ತಿಳಿಯಬೇಕು. ಹೀಗಾಗ ಉಪಾಧಿಗಳಲ್ಲಿ ಗೂಢವಾಗಿರುವ ಆತ್ಮನನ್ನು ಅವುಗಳಲ್ಲಿ ಪರೀಕ್ಷಿಸಿ, ವಿಚಾರಮಾಡಿ, ಹುಡುಕಿ ಹೊಂದಬೇಕು. ತಿಳಿಯಬೇಕು. ಉಪಾಧಿಗಳಲ್ಲೇ ಆತ್ಮನು ಸಿಕ್ಕುವನು.

ಅದ್ವಿತೀಯನಾದ ಆತ್ಮನಿಗೆ ಉಪಾಧಿಯಾಗಿರಲು ಬೇರೆ ಸ್ವತಂತ್ರವಸ್ತುವು ಇರುವುದಿಲ್ಲ. ಆದರೂ ಅವನ ಸ್ವಭಾವವೇ ಅಂದರೆ ಆತ್ಮಪ್ರಕೃತಿಯೇ ಅವನಿಗೆ ಉಪಾಧಿಯಾಗಿರುತ್ತದೆ. ಆತ್ಮಪ್ರಕೃತಿ=ಸ್ವಭಾವವುವೇನೆಂದರೆ:- ಪ್ರಕಾಶಿಸುವುದು ಮತ್ತು ಪ್ರಕಾಶಪಡಿಸುವುದು ಇದೇ ಅವನ ಸ್ವಭಾವವಾಗಿರುತ್ತದೆ. ಮತ್ತು ಅವನು ಸರ್ವಶಕ್ತನಾಗಿರುವುದರಿಂದ ಅವನ ಶಕ್ತಿಯೇ ಅವನಿಗೆ ಉಪಾಧಿಯಾಗಿರುತ್ತದೆ. ಶಕ್ತಿ ಎಂದರೆ ಕಾರ್ಯದ ಪೂರ್ವರೂಪವು. ಅಂದರೆ ಕಾರಣವಸ್ತು ಎಂದು ಅರ್ಥಮಾಡಿಕೊಳ್ಳಬೇಕು. ಅಂದಾಗ ಕಾರ್ಯೋದ್ಭವ ಮಾಡುವುದೇ ಈಶ್ವರಶಕ್ತಿ. ಅಥವಾ ಪ್ರಕೃತಿ ಎಂದು ತಿಳಿಯಬೇಕು. ಈ ಪ್ರಕೃತಿಯನ್ನೇ ಮಾಯೆ ಎಂದು ತಿಳಿಸಿರುವರು. ಈ ಆತ್ಮಪ್ರಕೃತಿ ಎಂಬ ಮಾಯೆಯು ಕಾರಣ (ಅವ್ಯಕ್ತರೂಪ) ರೂಪದಿಂದಲೂ ಮತ್ತು ಕಾರ್ಯ (ವ್ಯಕ್ತರೂಪ) ರೂಪದಿಂದಲೂ ಇರುವಂತಹದೆಂದು ತಿಳಿಯುವುದು. ಇದರಿಂದ ಕಾರಣರೂಪ=ಮಾಯೋಪಾಧಿಯುಳ್ಳವನೇ ಈಶ್ವರ ಎಂದೂ ಕಾರ್ಯರೂಪ ದೇಹಾದ್ಯುಪಾಧಿಯುಳ್ಳವನೇ ಜೀವಾತ್ಮನೆಂದೂ ಸಿದ್ಧವಾಗುವುದು. ಹೀಗೆ ಪ್ರಕೃತಿ-ಪುರುಷ ಎಂಬ ಪ್ರಮೇಯ-ಪ್ರಭೇದವೂ ಸಿದ್ಧವಾಗಿರುವುದು.

ಅಜ್ಞಾನಿಗಳ ದೃಷ್ಟಿಯಿಂದ ಸಂಸಾರ ಬಂಧನ - ಸಂಸಾರದಿಂದ ಮುಕ್ತಿ ಎಂಬ ಭೇದ ತೋರಿದೆ. ಭೂಲೋಕದ ಜನರ ದೃಷ್ಟಿಯಿಂದ ಹಗಲು - ರಾತ್ರಿ ಎಂಬ ಭೇದ ಇರುವಂತೆ ಎಂದು ತಿಳಿಯಬೇಕು. ಸೂರ್ಯ ದೃಷ್ಟಿಯಿಂದ ಹಗಲುರಾತ್ರಿ ಎಂಬ ಭೇದವಿಲ್ಲದಿರುವಂತೆ. ಜ್ಞಾನಿಯ ದೃಷ್ಟಿಯಿಂದ ಸಂಸಾರ-ಬಂಧನ ಎಂಬುದೂ ಇರುವುದಿಲ್ಲ ಮುಕ್ತಿ, ಮೋಕ್ಷ ಎಂಬುದೂ ನಿಜವಾಗಿರುವುದಿಲ್ಲ.

ಸೂರ್ಯಮಂಡಲದಲ್ಲಿ ಇರುವವನಿಗೆ ಕತ್ತಲೆಯ ಭಾವವನ್ನು ಇಲ್ಲದಿದ್ದರೂ, ಭೂಮಂಡಲದಲ್ಲಿ ಇರುವವನಿಗೆ ಕತ್ತಲೆಯ ಭಾವವನ್ನು ಆಗಿರುವಂತೆ ಬ್ರಹ್ಮೀಭೂತನಿಗೆ ಮಾಯಾ ಅವಿದ್ಯೆ ಅಜ್ಞಾನ ಎಂಬ ಭ್ರಮೆಯ ಭಾವವನ್ನು ಇಲ್ಲದಿದ್ದರೂ ಲೋಕವ್ಯವಹಾರ-ಶಾಸ್ತ್ರೀಯ ವ್ಯವಹಾರ ಕ್ಷೇತ್ರದಲ್ಲಿರುವವನಿಗೆ ಈ ಭ್ರಮೆಯ ಭಾವವನ್ನು ಆಗಿರಬಹುದಾಗಿದೆ.

ಗೀತಾಸು ದ್ವಾದಶಾಧ್ಯಾಯೇ - ಅಚಿಂತ್ಯಂ ಕೂಟಸ್ಥಮಿತಿ. [ಶ್ಲೋಕ 3] ತತ್ರ ಶಾಂ-ಭಾಷ್ಯ /
ಕೂಟಸ್ಥಂ = ದೃಶ್ಯಮಾನಗುಣಕಂ ಅನ್ತರ್ದೋಷಂ ವಸ್ತು ಕೂಟಂ ಉಚ್ಯತೇ। ಕೂಟರೂಪಂ ಕೂಟಸಾಕ್ಷ್ಯಂ ಇತ್ಯಾದೌ ಕೂಟಶಬ್ದಃ ಪ್ರಸಿದ್ಧೋ ಲೋಕೇ। ತಥಾ ಚ ಅವಿದ್ಯಾದ್ಯನೇಕಸಂಸಾರಬೀಜಂ ಅನ್ತರ್ದೋಷವತ್, ಮಾಯಾ ಅವ್ಯಾಕೃತಾದಿ ಶಬ್ದವಾಚ್ಯತಯಾ ಪ್ರಸಿದ್ಧಂ ಯತ್ ತತ್ ಕೂಟಂ. ತಸ್ಮಿನ್ ಕೂಟೇ ಸ್ಥಿತಂ ಕೂಟಸ್ಥಂ + ತದಧ್ಯಕ್ಷತಯಾ। ಅಥವಾ ರಾಶಿರಿವ ಸ್ಥಿತಂ ಕೂಟಸ್ಥಂ

|| ಓಂ ಶ್ರೀ ಸದ್ಗುರುಭ್ಯೋ ನಮಃ ||

ಶಕ್ತಿ, ಜ್ಞಾನ, ವಸ್ತು, ಪ್ರಕಾಶಗಳ ಅನನ್ಯತೆ-ಅಖಂಡತೆ.

ಪರಬ್ರಹ್ಮನೇ ಆಗಿರುವ ಸರ್ವರ ಆತ್ಮನು ಚೇತನವಸ್ತುವಾಗಿರುತ್ತಾನೆ. ಚೇತನ ಎಂದರೆ ಚೈತನ್ಯಸ್ವಭಾವದ ವಸ್ತುವು. ಈ ಚೈತನ್ಯವೇ ಮೂಲಚಾಲಕವು. ಅಂದರೆ ಕ್ರಿಯೆಗೆ ಕಾರಣವಾದ ಮೂಲಪ್ರಕೃತಿಯಾಗಿರುತ್ತದೆ. ಚೈತನ್ಯವಿಲ್ಲದೇ ಕ್ರಿಯೆಯು ಸಂಭವಿಸುವುದಿಲ್ಲ. ಆದ್ದರಿಂದ ಚೈತನ್ಯವನ್ನು ಚಿಚ್ಛಕ್ತಿ ಎನ್ನುವರು. ಈ ಚೈತನ್ಯವೇ ವಸ್ತುವನ್ನು ಅರಿಯುವುದಾದ್ದರಿಂದ ಇದನ್ನು ಜ್ಞಾನ ಎಂದೂ ಜ್ಞಾತೃ ಎಂದೂ ಹೇಳಲಾಗುವುದು. ಮತ್ತು ಈ ಚೈತನ್ಯವು ವಸ್ತುಪ್ರಕಾಶಕವಾಗಿರುವುದರಿಂದ ಇದನ್ನು ಪ್ರಕಾಶ ಎಂದೂ ಹೇಳಲಾಗುವುದು. ಇದು ಭೌತಿಕಪ್ರಕಾಶವಲ್ಲ, ಅಭೌತಿಕವಾದುದು. ಆದ್ದರಿಂದಲೇ ಬ್ರಹ್ಮಜ್ಯೋತಿ. ಆತ್ಮಜ್ಯೋತಿ ಎಂದು ಕರೆಯುತ್ತಾರೆ. ಈ ಪ್ರಕಾಶಜ್ಯೋತಿಯು ನಿತ್ಯವಾದುದು. ದೀಪಪ್ರಕಾಶದಂತೆ ಅನಿತ್ಯವಾದುದಲ್ಲ. ಇಲ್ಲಿ ತಿಳಿಸಿದ ಜ್ಞಾನವೂ ಕೂಡ ಅಲೌಕಿಕವಾದುದು. ಅಂದರೆ ಅಂತಃಕರಣವೃತ್ತಿರೂಪವಲ್ಲ. ಅನಿತ್ಯವಲ್ಲ, ನಿತ್ಯವಾದುದೇ. ಇದೇ ಆತ್ಮನ ಲಕ್ಷಣವಾಗಿರುತ್ತದೆ.

ಜ್ಞಾನವೇ ವಸ್ತುವನ್ನು ಗ್ರಹಿಸುವುದಾದ್ದರಿಂದ ಜ್ಞಾನವೇ ಜ್ಞಾತೃವಾಗಿರುತ್ತದೆ ಪ್ರಕಾಶವೇ ವಸ್ತುವನ್ನು ಪ್ರಕಾಶಪಡಿಸುವುದಾದ್ದರಿಂದ ಪ್ರಕಾಶವೇ ಪ್ರಕಾಶಕವಾಗಿರುತ್ತದೆ. ಚಿಚ್ಛಕ್ತಿಯೇ ಕ್ರಿಯೆಯನ್ನು ಉಂಟುಮಾಡುವುದರಿಂದ ಅದು ಮೂಲಚಾಲಕವಾಗಿರುತ್ತದೆ. ಚೇತನವಾಗಿರುವುದು. ಹೀಗೆ ಚಿಚ್ಛಕ್ತಿ, ಪ್ರಕಾಶ, ಮತ್ತು ಜ್ಞಾನ ಎಂದು ಮೂರುಬಗೆಯಾಗಿ ವಿಂಗಡಿಸಿಮಾಡಿ-ಕೊಂಡರೂ ವಾಸ್ತವದಲ್ಲಿ ಅದು ಒಂದೇ ಅಖಂಡವಸ್ತು - ಚೇತನ ಎಂದೇ ಅರಿಯಬೇಕು. ಬೆಂಕಿ, ಕೆಂಪು, ಬಿಸಿ, ಪ್ರಕಾಶ ಎಂದು ಬೇರೆಬೇರೆ ಗ್ರಹಣೆಯಾಗುತ್ತಿದ್ದರೂ ಅದು ಬೆಂಕಿ ಎಂಬ ಒಂದು ಅಖಂಡವಸ್ತುವೇ ಆಗಿರುತ್ತದಲ್ಲವೆ! ಹಾಗೆಯೇ ಆತ್ಮನನ್ನು ಚೈತನ್ಯ-ಪ್ರಕಾಶ-ಜ್ಞಾನ ಎಂಬ ಅಖಂಡಸ್ವಭಾವದವಸ್ತು ಎಂದು ನಿಶ್ಚಯಮಾಡಿಕೊಳ್ಳಬೇಕು. ಇವನು ಒಬ್ಬನೇ ವಾಸ್ತವವಾಗಿರುವವನು. ಅದ್ವಿತೀಯ. ಅದ್ವೈತ. ಬ್ರಹ್ಮ. ಎಂದೇ ಸಿದ್ಧಾಂತ.

ಓಂ ॥ ಶ್ರೀ ಗುರುಭ್ಯೋ ನಮಃ ॥

ಜ್ಞಾನ ಎಂದರೇನು? ಅದರ ಸ್ವರೂಪವೇನು? ಅದು ಉಂಟಾಗುವ ಕ್ರಮ ವಿವರಣೆ:-

ವಸ್ತುವನ್ನು ತಿಳಿಯಲು ಉದ್ದೇಶಿಸಿದ ಮನುಷ್ಯನ ಬಹಿರಿಂದ್ರಿಯಗಳು ಬಾಹ್ಯ ವಸ್ತುವಿನೊಡನೆ (ವಿಷಯದ) ಸಂಬಂಧ ಹೊಂದುವುವು. ಆಗ ಆಯಾಯ ಇಂದ್ರಿಯದೊಂದಿಗೆ ಸಂಬಂಧಪಟ್ಟುಕೊಂಡಿರುವ ಅವನ ಅಂತಃಕರಣದಲ್ಲಿ=ಮನಸ್ಸಿನಲ್ಲಿ ಬಾಹ್ಯವಸ್ತುವಿನ ಚಿತ್ರವು, ಕನ್ನಡಿಯಲ್ಲಿ ಪ್ರತಿಬಿಂಬವು ಹೇಗೋ ಹಾಗೆ-ಆಕಾರವು ಒಡಮೂಡುವುದು. ಇದನ್ನೇ ಮನೋವೃತ್ತಿ ಎನ್ನುತ್ತಾರೆ. ಹೀಗೆ ವಿಷಯಾಕಾರದಿಂದಿರುವ ಮನೋವೃತ್ತಿಯನ್ನು ಅಲ್ಲಿ ಇರುವ ಜೀವಾತ್ಮನು ಪ್ರಕಾಶಪಡಿಸುವನು. ಈ ಜೀವಾತ್ಮ ಎಂಬುವನು ನಿಜಾತ್ಮನ ಪ್ರತಿಬಿಂಬವಾಗಿರುತ್ತಾನೆ. ಅವನ ಪ್ರಕಾಶವು ಪ್ರತಿಬಿಂಬರೂಪವೇ ಆಗಿರುತ್ತದೆ. ಸ್ವಜಪ್ರಕಾಶವಲ್ಲ. ಹೀಗೆ ಪ್ರಕಾಶಪ್ರತಿಬಿಂಬದಿಂದ ವಸ್ತುವು ಪ್ರಕಾಶಿತವಾದಾಗ – ಹೊಳೆದ ವಸ್ತುಪ್ರಕಾಶವನ್ನು ಜ್ಞಾನ ಎನ್ನುತ್ತಾರೆ. [ವಸ್ತುವಿ ಪ್ರತ್ಯಕ್ಷಪ್ರಕಾಶದಿಂದ ಉಂಟಾಗುತ್ತದೆ.] ಆದರೆ ಇದು ನಿಜವಾದ ಜ್ಞಾನ ಎನ್ನುವಂತಿಲ್ಲ. ಏಕೆಂದರೆ – ಆ ಪ್ರಕಾಶವು ಪ್ರತಿಬಿಂಬಪ್ರಕಾಶರೂಪವಾಗಿರುತ್ತದೆ. ಆದ್ದರಿಂದ ಈ ಜ್ಞಾನವನ್ನು ಪ್ರತ್ಯಯ ಎಂದು ಕರೆಯುತ್ತಾರೆ. ಆಗಲೀ ಅಂದರೆ ಜೀವಾತ್ಮನು – ಎಂಬ ಚಿದಾಭಾಸನು ವಸ್ತುವನ್ನು ಪ್ರಕಾಶಪಡಿಸುವ ಅದೇ ಸಮಯದಲ್ಲಿ ಸಾಕ್ಷೀರೂಪದ ನಿಜ ಆತ್ಮನ ನಿಜಪ್ರಕಾಶವು ಆ ವಿಷಯಾಕಾರವನ್ನು ಪ್ರಕಾಶಪಡಿಸುವುದು. ಹೀಗೆ ನಿಜ ಆತ್ಮನ ಪ್ರಕಾಶದಿಂದ ಹೊಳೆದ ವಸ್ತುಪ್ರಕಾಶವೇ ನಿಜವಾದ ಜ್ಞಾನವಾಗಿರುತ್ತದೆ. ಹೀಗಾಗ ಸಮಸಮಯದಲ್ಲಿ ಚಿದಾಭಾಸನಿಂದ ಹೊಳೆದುದು ಮತ್ತು ನಿಜಾತ್ಮನಿಂದ ಹೊಳೆದುದು – ಈ ಎರಡಕ್ಕೂ ಭೇದವು ತೋರುವುದಿಲ್ಲವಾದ್ದರಿಂದ ಮತ್ತು ವಸ್ತುವು ತೋರುವುದೆಂಬ (ಹೊಳೆಯುದು) ಫಲವು ಒಂದೇ ಆಗಿರುವುದರಿಂದ ಈ ಎರಡಾಕಾರದ ವಸ್ತುಪ್ರಕಾಶವನ್ನು ಜ್ಞಾನ ಎಂದೇ ವ್ಯವಹರಿಸಲಾಗುವುದು. ಇಂತಿರಲಾಗಿ ಚಿದಾಭಾಸ-ಜೀವಾತ್ಮನು ಗ್ರಹಿಸಿದ ಜ್ಞಾನ(ಪ್ರಕಾಶವು)ವು ನಿಜವಾದುದಲ್ಲ. ಆ ಪ್ರತ್ಯಯರೂಪದ ಜ್ಞಾನವು (ಪ್ರಕಾಶವು) ಒಂದು ಕ್ಷಣದಲ್ಲಿ ಹುಟ್ಟುವುದು. ಕ್ಷಣಾಂತರದಲ್ಲಿ ನಾಶಹೊಂದುವುದು.

ಹೀಗಾಗುವುದು ಎಲ್ಲರ ಅನುಭವದಲ್ಲಿ ಇದೆ. ಆದರೆ ನಿತ್ಯಜ್ಞಾನಸ್ವರೂಪದ ನಿಜ ಆತ್ಮನ ಪ್ರಕಾಶದಿಂದ ವಸ್ತುವು ಹೊಳೆದುದೇ ನಿಜವಾದ ಜ್ಞಾನವಾಗಿರುವುದು. ಆದ್ದರಿಂದ ಮುಖ್ಯಾತ್ಮನೇ ನಿಜದಲ್ಲಿ ಜ್ಞಾತೃವಾಗಿರುತ್ತಾನೆ. ಚಿದಾಭಾಸನು ನಿಜವಾದ ಜ್ಞಾತೃವಾಗಿರುವುದಿಲ್ಲ.

ಜ್ಞಾನ ಎಂದರೆ ಆತ್ಮನ ಪ್ರಕಾಶಪ್ರಕಾರವೇ ಆಗಿರುತ್ತದೆ. ಅಂದಾಗ ಜ್ಞಾನ, ಆತ್ಮ ಎರಡೂ ಬೇರೆ ಬೇರೆ ಅಲ್ಲ. ಒಂದೇ. ಇದನ್ನೇ ಉಪನಿಷತ್ತಿನಲ್ಲಿ "ಪ್ರತಿಬೋಧವಿದಿತಂ ಮತಂ" ಎಂದು ತಿಳಿಸಿಕೊಟ್ಟಿದೆ. ಇಂತ ಪ್ರಕಾಶವೆಂಬ ಜ್ಞಾನವೇ ಆತ್ಮನು ಎಂದು ತಿಳಿಯಬೇಕು.

ಪ್ರಮಾತೃವಾದ ಮನುಷ್ಯನು ಸತ್ಯಜ್ಞಾನವಿಲ್ಲದವನೇ ಆಗಿರುವುದರಿಂದ ನಾನು ತಿಳಿದೆ. ನನಗೆ ಜ್ಞಾನವಾಯಿತು ಎಂದು ಬಗೆಯುತ್ತಾನೆ. ಇದೇ ಮನಸ್ಸಿನಲ್ಲಾಗುವ ಜ್ಞಾನಪ್ರತೀತಿಯು. ಇದು ವಿಷಯಾಕಾರಮಾತ್ರ ಪ್ರಕಾಶವಾಗಿರುವುದು. ಪರಿಚ್ಛಿನ್ನವಾದುದು. ಆತ್ಮಪ್ರಕಾಶರೂಪದ ಜ್ಞಾನವು ಅಪರಿಚ್ಛಿನ್ನವಾದುದು. ನಿತ್ಯವಾದುದು.

ನಿಜಾತ್ಮನನ್ನು ಕಂಡುಕೊಳ್ಳುವುದಕ್ಕೆ, ಆತ್ಮಜ್ಞಾನಮಾಡಿಕೊಳ್ಳುವುದಕ್ಕೆ ನಾನು ನಾನು ಎಂಬ ಅಹಂಕಾರವೇ ದ್ವಾರವಾಗಿರುವುದು. ಈ ವಿಷಯವನ್ನೇ ಮೊದಲು ಮಾಡಿಕೊಂಡು ವಿಚಾರಪೂರ್ವಕವಾಗಿ ವಿವೇಕಮಾಡಿಕೊಂಡಾಗ ಈ ಅಹಂಕಾರವು ತಾನು ಅಡಗಿಹೋಗುವ ರೂಪದಿಂದಲೇ ಆತ್ಮಾವಗತಿಗೆ, ಆತ್ಮಪ್ರಾಪ್ತಿಗೆ ಕಾರಣ ಅಥವಾ ಲಕ್ಷಣವಾಗುವುದು.

೬. ಜ್ಞಾನೇಂದ್ರಿಯಗಳು — ಇವು ಮೂರು ಬಗೆಯಾಗಿರುತ್ತೆ. ಭೌತಿಕ, ದಿವ್ಯ, ಆಧ್ಯಾತ್ಮಿಕ ದಿವ್ಯ.
ಶಬ್ದಗಳ ಅರ್ಥವನ್ನು ತಿಳಿಯುವುದು, ಬೆಳಕು ಸೇರಿದ ಇತರ ವಸ್ತುವನ್ನು ಕಾಣುವುದು, ಸ್ವಪ್ನವನ್ನು ನೋಡುವುದು, ಕತ್ತಲೆಯನ್ನು ನೋಡುವುದು, ಅಜ್ಞಾನ-ಅವಿದ್ಯೆಯನ್ನು ಕಂಡುಕೊಳ್ಳುವುದು ಇವೆಲ್ಲವೂ ಭೌತಿಕ ಚೈತನ್ಯದ ಕಾರ್ಯವಾಗುವುದಿಲ್ಲ. ಈ ಜ್ಞಾನ ಅನುಭವಗಳೆಲ್ಲವೂ ಅಂತರ್ಜ್ಯೋತಿಯಿಂದಲೇ ಸಾಧ್ಯವಾಗುವುವು.

೧. ನಿದ್ರೆಯಲ್ಲಿ ಪ್ರಾಜ್ಞನಿಗೆ ಸಾಕ್ಷಿ (ನೇರವಾಗಿ) ಅನುಭವ = ಜ್ಞಾನ = ಸಾಕ್ಷಿಗೂ ಹೊರಗೆಯೇ
೨. ಸ್ವಪ್ನದಲ್ಲಿ ತೈಜಸನಿಗೆ ಪ್ರಮಾಣಾಭಾಸದಿಂದ ಜ್ಞಾನ
೩. ಜಾಗ್ರದಲ್ಲಿ ವಿಶ್ವನಿಗೆ ದುರ್ಬಲಪ್ರಮಾಣದಿಂದ ಅನುಭವ
೪. ತುರೀಯನಿಗೆ ಪ್ರಬಲಪ್ರಮಾಣದಿಂದ ತುರೀಯಾನುಭವ

ಉಪಾಧಿ ಎಂದರೇನು? ಯಾವುದು ತನ್ನ ರೂಪದಿಂದಲೇ ಮತ್ತೊಂದನ್ನು ತೋರುವಂತೆ ಮಾಡುವುದೋ ಅದಕ್ಕೆ ಉಪಾಧಿ ಎಂದು ಹೆಸರು. ಅರೂಪ, ನಿರಾಕಾರದ ಆತ್ಮನು ತೋರಿಕೊಳ್ಳು-ವುದಕ್ಕೆ ಒಂದು ಉಪಾಧಿ ಬೇಕೇ ಬೇಕು. ಆತನು ಸದಾ ಅವ್ಯಕ್ತನೇ. ಆತನು ಬುದ್ಧಿ ದೇಹಾದಿಗಳಲ್ಲಿ ಸೇರಿಕೊಂಡು ಸ್ಫುರಿಸುತ್ತಾನೆ-ತೋರುತ್ತಾನೆ. ಆದ್ದರಿಂದ ಬುದ್ಧಿ ಮೊದಲಾದವು ಆತ್ಮನಿಗೆ ಉಪಾಧಿಗಳಾಗಿ-ರುತ್ತವೆ. ಆ ಉಪಾಧಿಗಳು ಆತ್ಮನಿರುವುದನ್ನು ತೋರಿಸುತ್ತವೆ. ರೂಪವಿಲ್ಲದ ಆಕಾಶವನ್ನು ಘಟವು ತನ್ನ ಆಕಾರ, ತನ್ನ ಅಳತೆ ಮುಂತಾದ ವಿಶೇಷವುಳ್ಳದ್ದಾಗಿರುವಂತೆ ಮಾಡುತ್ತದೆಯಾಗಿ ಆಕಾಶಕ್ಕೆ ಘಟವು ಉಪಾಧಿಯಾಗಿರುತ್ತದೆ. ಘಟದ ಉಪಾಧಿಯಿಂದ ತೋರುವ ಆಕಾರ ಅಳತೆಗಳು ಆಕಾಶಕ್ಕೆ ವಾಸ್ತವವಾದವಲ್ಲ. ಉಪಮೆಯಷ್ಟೆ. (उपाधिः = उपलब्ध्यधिष्ठानम्
ಉಪಲಬ್ಧಿಯ ಸ್ಥಾನ)

ಈಶ್ವರನಿಗೆ ಮಾಯಾಪ್ರಕೃತಿಯೇ ಉಪಾಧಿಯಾಗಿದೆ. (ಅವ್ಯಕ್ತರೂಪ ಕಾರಣ)
ಜೀವನಿಗೆ ಅವನ ಸ್ವಭಾವರೂಪ-ಪ್ರಕೃತಿಯೇ (ಅವಿದ್ಯೆ ಅದರ ಕಾರ್ಯ) ಉಪಾಧಿಯಾಗಿದೆ.
ಕಾರ್ಯೋಪಾಧಿಯಿಲ್ಲದ ಜೀವ ಚೇತನ ಎಂಬ ವಸ್ತುವೇ ಇರುವುದಿಲ್ಲ.
ಈ ತನ್ನೋಪಾಧಿಯಾದ ವಸ್ತುವನ್ನೇ ಪ್ರಕೃತಿ ಎಂದು (ಆತ್ಮಪ್ರಕೃತಿ ಎಂದು ಒಬ್ಬರು) ಕರೆದು ಉಪಾದೇಯಾಂಶ ಎಂಬ ಮಂತ್ರದಲ್ಲಿ ಉಪದೇಶಿಸಿದೆ. ಈ ಒಂದೇ ಪ್ರಕೃತಿಗೆ ಈಶ್ವರ ಸಂಬಂಧ ಹೊಳೆವಾಗ ಮಾಯೆ ಎಂದೂ, ಜೀವಸಂಬಂಧ ಹೊಳೆವಾಗ ಅವಿದ್ಯೆ ಎಂದೂ ತಿಳಿಸಿದೆ.

143.5 1
143.5
287.0

6758888 ಫೋನ್

ಕ್ಯಾಂಬಜಾರ್. ಕೆಂ